ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮುಕ್ತಗಂಗೋತ್ರಿ, ಮೈಸೂರು – 570 006

# ವಿವರಣಾ ಪುಸ್ತಕ

# 2019–20

## ಜನವರಿ ಆವರ್ತ

### ಶಿಕ್ಷಣ ಕ್ರಮಗಳು

## ಬಿ.ಎ., ಬಿ.ಕಾಂ., ಬಿ.ಲಿಬ್.ಐ.ಎಸ್ಸಿ.,

ವೆಬ್‌ಸೈಟ್: www.ksoumysuru.ac.in
ಇಪಿಎಬಿಎಕ್ಸ್ ಸಂಖ್ಯೆಗಳು : 0821–2519948, 2519941, 2519943, 2519952

| ಗಮನಕ್ಕೆ |
| --- |
| ➢ ಅನ್ ಲೈನ್ ಅರ್ಜಿಯನ್ನು ಕ.ರಾ.ಮು.ವಿ. ಜಾಲತಾಣದಲ್ಲಿ (website) ನೀಡಿರುವ 'ಅನ್‌ಲೈನ್ ಪ್ರವೇಶಾತಿ ಸೂಚನೆ'ಗಳಂತೆ ಸಲ್ಲಿಸಬೇಕು. (http://www.ksoumysuru.ac.in ) |
| ➢ ಅರ್ಜಿ ಸಂಸ್ಕರಣಾ ಶುಲ್ಕವನ್ನು ಇ–ಪೇ ಮುಖಾಂತರ ಜಮಾ ಮಾಡುವುದು |

| ಪ್ರಮುಖ ದಿನಾಂಕಗಳು | |
| --- | --- |
| **ಪ್ರವೇಶಾತಿ ಪ್ರಾರಂಭ** | 16.12.2019 |
| **ದಂಡಶುಲ್ಕವಿಲ್ಲದೆ ಅರ್ಜಿಸಲ್ಲಿಕೆಗೆ ಕಡೆಯ ದಿನಾಂಕ** | 31.01.2020 |
| **ರೂ. 200/– ದಂಡ ಶುಲ್ಕದೊಂದಿಗೆ ಅರ್ಜಿಸಲ್ಲಿಕೆಗೆ ಕಡೆಯ ದಿನಾಂಕ** | 18.02.2020 |
| **ರೂ. 400/– ದಂಡ ಶುಲ್ಕದೊಂದಿಗೆ ಅರ್ಜಿಸಲ್ಲಿಕೆಗೆ ಕಡೆಯ ದಿನಾಂಕ** | 29.02.2020 |

## ಮುಖ್ಯ ಸೂಚನೆ

**ಅನ್ ಲೈನ್ ಅರ್ಜಿಯನ್ನು ಭರ್ತಿ ಮಾಡುವುದಕ್ಕೆ ಮೊದಲು ಅಭ್ಯರ್ಥಿಗಳು ವಿವರಣಾ ಪುಸ್ತಕದಲ್ಲಿರುವ ಸೂಚನೆಗಳನ್ನು ಜಾಗರೂಕತೆಯಿಂದ ಓದಬೇಕು.**

- ಅಭ್ಯರ್ಥಿಗಳು ಅನ್ ಲೈನ್ ಅರ್ಜಿಯನ್ನು ಭರ್ತಿ ಮಾಡುವುದು
- ಅರ್ಜಿ ಸಂಸ್ಕರಣಾ ಶುಲ್ಕ ರೂ 300/– ಅನ್ನು **ಇ–ಪೇ** ಮುಖಾಂತರ ಜಮಾ ಮಾಡುವುದು
- ಅಭ್ಯರ್ಥಿಗಳು ಅನ್ ಲೈನ್ ಅರ್ಜಿಯನ್ನು ಯಶಸ್ವಿಯಾಗಿ ಭರ್ತಿ ಮಾಡಿದ ನಂತರ ಅರ್ಜಿಯ ಹಾಗೂ ಇ–ಪೇ ಚಲನ್‌ನ ಮುದ್ರಿತ ಪ್ರತಿಯನ್ನು ತೆಗೆದುಕೊಳ್ಳುವುದು
- ಸಂಬಂಧ ಪಟ್ಟ ಅಡಕಗಳು ಮತ್ತು ಶುಲ್ಕ ಪಾವತಿಸಿದ ಚಲನ್‌ನೊಂದಿಗೆ ಮುದ್ರಿತ ಆನ್ ಲೈನ್ ಅರ್ಜಿಯನ್ನು, ನೀವು ಆಯ್ಕೆ ಮಾಡಿಕೊಂಡ **ಪ್ರಾದೇಶಿಕ ನಿರ್ದೇಶಕರಿಗೆ (ಅನುಬಂಧ–2)** ಅಥವಾ **ನಿರ್ದೇಶಕರು (ಪ್ರವೇಶಾತಿ), ಕ.ರಾ.ಮು.ವಿ ಕೇಂದ್ರ ಕಚೇರಿ, ಮೈಸೂರು** ಇಲ್ಲಿಗೆ, ಅರ್ಜಿ ಪರಿಶೀಲನೆಗಾಗಿ ಸಲ್ಲಿಸುವುದು.
- ಮುದ್ರಿತ ಆನ್ ಲೈನ್ ಅರ್ಜಿ/ಇ–ಪೇ ಚಲನ್‌ನ ಪರಿಶೀಲನೆ ನಂತರ ಅಭ್ಯರ್ಥಿಗಳು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ (ಎಸ್.ಬಿ.ಐ) ಯಾವುದೇ ಶಾಖೆಯಲ್ಲಿ ನಿಗದಿತ ನಾಲ್ಕು ಪ್ರತಿಗಳ ಚಲನ್ ಮೂಲಕ ಶಿಕ್ಷಣಕ್ರಮಕ್ಕೆ ನಿಗದಿ ಪಡಿಸಿರುವ ಶುಲ್ಕವನ್ನು ಪಾವತಿಸಬೇಕು.
- ಶಿಕ್ಷಣಕ್ರಮಕ್ಕೆ ನಿಗದಿ ಪಡಿಸಿದ ಶುಲ್ಕವನ್ನು ಪಾವತಿಸಿದ ನಂತರ ಸಕ್ಷಮ ಅಧಿಕಾರಿಗಳಿಂದ ಸಹಿ ಮಾಡಿದ ಗುರುತಿನ ಚೀಟಿಯನ್ನು ಅಭ್ಯರ್ಥಿಗಳು ಪಡೆಯುವುದು
- ಅಭ್ಯರ್ಥಿಗಳು ಗುರುತಿನ ಚೀಟಿಯನ್ನು ಹಾಜರಿ ಪಡಿಸಿ ಸ್ವಯಂ ಕಲಿಕಾ ಸಾಮಗ್ರಿಗಳನ್ನು ಪಡೆಯುವುದು

➢ ಕ.ರಾ.ಮು.ವಿ. ಕೇಂದ್ರ ಕಚೇರಿ, ಮೈಸೂರು ಇಲ್ಲಿ ಪ್ರವೇಶಾತಿ ಅಪೇಕ್ಷಿಸುವ ಅಭ್ಯರ್ಥಿಗಳು ಶುಲ್ಕ ಪಾವತಿಸಿದ ಚಲನ್‌ನೊಂದಿಗೆ ಸರಿಯಾಗಿ ಭರ್ತಿಮಾಡಿದ ಅರ್ಜಿಯನ್ನು **ನಿರ್ದೇಶಕರು (ಪ್ರವೇಶಾತಿ), ಕ.ರಾ.ಮು.ವಿ., ಮುಕ್ತಗಂಗೋತ್ರಿ, ಮೈಸೂರು–06.** ಇವರಿಗೆ ಸಲ್ಲಿಸುವುದು.

➢ ಕ.ರಾ.ಮು.ವಿ. ಕೇಂದ್ರ ಕಚೇರಿ, ಮೈಸೂರು ಇಲ್ಲಿ ಬಿ.ಲಿಬ್.ಐ.ಎಸ್.ಸಿ ಗೆ ಪ್ರವೇಶಾತಿ ಅಪೇಕ್ಷಿಸುವ ಅಭ್ಯರ್ಥಿಗಳು ಶುಲ್ಕ ಪಾವತಿಸಿದ ಚಲನ್‌ನೊಂದಿಗೆ ಸರಿಯಾಗಿ ಭರ್ತಿಮಾಡಿದ ಅರ್ಜಿಯನ್ನು **ಮುಖ್ಯಸ್ಥರು, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗ, ಕ.ರಾ.ಮು.ವಿ., ಮುಕ್ತಗಂಗೋತ್ರಿ, ಮೈಸೂರು–06.** ಇವರಿಗೆ ಸಲ್ಲಿಸುವುದು.

## ವಿಶೇಷ ಗಮನಕ್ಕೆ

- ವಿಶ್ವವಿದ್ಯಾನಿಲಯವು ನೀಡುತ್ತಿರುವ ಶಿಕ್ಷಣಕ್ರಮಗಳಿಗೆ ಪ್ರಕಟಣೆ ಸಂಖ್ಯೆ :F.No. 14-5/2018 (DEB-1) ದಿನಾಂಕ: 14–08–2018 ಮೇರೆಗೆ ಯು.ಜಿ.ಸಿ.ಯು 2018ರಿಂದ 2023ರವರೆವಿಗೂ ಮಾನ್ಯತೆ ನೀಡಿರುತ್ತದೆ.
- ಯು.ಜಿ.ಸಿ. ನೀಡಿರುವ ಸಾರ್ವಜನಿಕ ಪ್ರಕಟಣೆ F.No. 1-9 (DEB-1) ದಿನಾಂಕ: 23–02–2018ರ ಅನ್ವಯ ದೂರ ಶಿಕ್ಷಣ ಕ್ರಮದ ಮೂಲಕ ನೀಡುವ ಎಲ್ಲಾ ಪದವಿ / ಡಿಪ್ಲೋಮಾ / ಸರ್ಟಿಫಿಕೇಟ್ ಶಿಕ್ಷಣ ಕ್ರಮಗಳು, ಸಾಂಪ್ರದಾಯಿಕ ವಿಶ್ವವಿದ್ಯಾನಿಲಯಗಳು ನೀಡುವ ಪದವಿ / ಡಿಪ್ಲೋಮಾ / ಸರ್ಟಿಫಿಕೇಟ್ ಶಿಕ್ಷಣ ಕ್ರಮಗಳಿಗೆ ಸಮಾನವಾಗಿರುತ್ತವೆ. ದೂರಶಿಕ್ಷಣದ ಮೂಲಕ ನೀಡುವ ಪದವಿಗಳು ರಾಜ್ಯ ಮತ್ತು ಕೇಂದ್ರ ಸರ್ಕಾರ, ಖಾಸಗಿ ಸಂಸ್ಥೆ, ಬಹುರಾಷ್ಟ್ರೀಯ ಕಂಪನಿಗಳ ಉದ್ಯೋಗ ಹಾಗೂ ಇನ್ನಿತರ ಶಿಕ್ಷಣ ಸಂಸ್ಥೆಗಳಲ್ಲಿ ಉನ್ನತ ವಿದ್ಯಾಭ್ಯಾಸ ಮುಂದುವರೆಸಲು ಮಾನ್ಯತೆ ಪಡೆದಿರುತ್ತವೆ.
- ಕರ್ನಾಟಕ ಘನ ಉಚ್ಚನ್ಯಾಯಾಲಯವು ದಾವೆಸಂಖ್ಯೆ 34255/2016 (GM-RES) ರಂತೆ ನೀಡಿರುವ ತೀರ್ಪಿನಲ್ಲಿ, ಶಿಕ್ಷಣಕ್ರಮದ ಪದವಿಯು ಪ್ರವೇಶ ಪಡೆದ ವರ್ಷವನ್ನು ಆಧರಿಸಿ ಮಾನ್ಯತೆಗೊಳ್ಳುತ್ತದೆ ಹೊರತು ಪದವಿ ಪೂರ್ಣಗೊಳಿಸಿದ ದಿನಾಂಕವನ್ನು ಆಧರಿಸುವುದಿಲ್ಲ.
- ವಿಶ್ವವಿದ್ಯಾನಿಲಯವು ಯು.ಜಿ.ಸಿ.ಯಿಂದ 2018–19 ರಿಂದ 2022–23 ರವರೆಗೆ ಮಾನ್ಯತೆ ಹೊಂದಿದ್ದು ಪ್ರವೇಶಾತಿ ಪಡೆದ ದಿನದಿಂದ ಶಿಕ್ಷಣಕ್ರಮವು ಪೂರ್ಣಗೊಳ್ಳುವವರೆಗೂ ಮಾನ್ಯತೆ ಇರುತ್ತದೆ. ಮುಂದಿನ ವರ್ಷಗಳಲ್ಲಿ ವಿಶ್ವವಿದ್ಯಾನಿಲಯವು ಮಾನ್ಯತೆಯನ್ನು ಪಡೆಯದಿದ್ದರೂ ಪ್ರವೇಶ ಪಡೆದ ದಿನದಿಂದ ಶಿಕ್ಷಣಕ್ರಮ ಪೂರ್ಣಗೊಳ್ಳುವವರೆಗೂ ಭಾರತ ಸರ್ಕಾರದ ಸಿಬ್ಬಂದಿ ಮತ್ತು ತರಬೇತಿ ಇಲಾಖೆ ಇವರ ಉಲ್ಲೇಖದನ್ವಯ ಸಂಖ್ಯೆ: 2.0-RTI ಆನ್‌ಲೈನ್ (ನೋ.ಸಂ.PMOPG/E/2015/0097771) ಮಾನ್ಯತೆ ಹೊಂದಿರುತ್ತದೆ.
- ವಿಶ್ವವಿದ್ಯಾನಿಲಯವು ಕರ್ನಾಟಕ ರಾಜ್ಯದ ಭೌಗೋಳಿಕ ವ್ಯಾಪ್ತಿಯೊಳಗೆ ಕಾರ್ಯನಿರ್ವಹಿಸುತ್ತದೆ. ಹೊರರಾಜ್ಯದ ಅಭ್ಯರ್ಥಿಗಳು ಶಿಕ್ಷಣಕ್ರಮಗಳಿಗೆ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ. ಆದರೆ, ಅವರು ಕರ್ನಾಟಕ ರಾಜ್ಯದೊಳಗಿನ ಯಾವುದಾದರೂ ಪ್ರಾದೇಶಿಕ ಕೇಂದ್ರ / ಕೇಂದ್ರಸ್ಥಾನದಲ್ಲಿ ಪ್ರವೇಶಾತಿಯನ್ನು ಪಡೆಯಬೇಕು.
- ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ಗುಣಮಟ್ಟದ ಶಿಕ್ಷಣವನ್ನು ನೀಡುತ್ತಿದ್ದು, ಉತ್ತಮ ಸಂಪನ್ಮೂಲ ವ್ಯಕ್ತಿಗಳನ್ನು ಸೃಜಿಸಲು ಸಾಮರ್ಥ್ಯ ನಿರ್ಮಾಣದ ಮೂಲಕ ಸಹಾಯ ಮಾಡುತ್ತಿದೆ.
- ಯಾವುದೇ ಪದವಿಯನ್ನು ಕರಾಮುವಿಯಲ್ಲಿ ಅಥವಾ ಹೊರಗಡೆ ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳು ಸಹ ಕರಾಮುವಿಯಲ್ಲಿ ಡಿಪ್ಲೊಮೊ ಅಥವಾ ಸರ್ಟಿಫಿಕೇಟ್ ಕೋರ್ಸ್‌ಗಳನ್ನು ಮಾಡಬಹುದು.

| ಪರಿವಿಡಿ | | |
|---|---|---|
| ಕ್ರ.ಸಂ. | ವಿವರಗಳು | ಪುಟ ಸಂಖ್ಯೆ |
| | ಕುಲಪತಿಗಳ ಸಂದೇಶ | iv |
| | ವಿಶ್ವವಿದ್ಯಾನಿಲಯವನ್ನು ಕುರಿತು | v |
| | ವ್ಯವಸ್ಥಾಪನಾ ಮಂಡಳಿ | vi |
| | ವಿಶ್ವವಿದ್ಯಾನಿಲಯದ ಅಧಿಕಾರಿಗಳು | vii |
| 01 | ಯುಜಿಸಿ (ಮುಕ್ತ ಮತ್ತು ದೂರ ಕಲಿಕಾ) ನಿಯಮಾವಳಿಗಳು – 2017 | 1 |
| 02 | ಸ್ಕೂಲ್ಸ್ ಆಫ್ ಸ್ಟಡೀಸ್ | 1–2 |
| 03 | ಖಾಯಂ ಅಧ್ಯಾಪಕರ ವಿವರ | 2–6 |
| 04 | ಸಂಪರ್ಕಿಸಬಹುದಾದ ಇತರ ಅಧಿಕಾರಿಗಳು | 7 |
| 05 | ವಿದ್ಯಾರ್ಥಿಗಳಿಗೆ ಮುಖ್ಯ ಸೂಚನೆಗಳು | 8–9 |
| 06 | ಶಿಕ್ಷಣಕ್ರಮಗಳು | 10 |
| 07 | ಪ್ರವೇಶಾತಿ ಶುಲ್ಕ ಸಂರಚನೆ | 10–11 |
| 08 | ಪದವಿ ಶಿಕ್ಷಣಕ್ರಮಗಳು – ಬಿ.ಎ., ಬಿ.ಕಾಂ., ಬಿ.ಲಿಬ್.ಐ.ಎಸ್ಸಿ. | 11–22 |
| 09 | ಕೌಶಲ್ಯ ಅಭಿವೃದ್ಧಿ | 23 |
| 10 | ತಾತ್ಕಾಲಿಕ ಶೈಕ್ಷಣಿಕ ಯೋಜನೆ | 23–24 |
| 11 | ವಿದ್ಯಾರ್ಥಿ ಬೆಂಬಲ ಸೇವೆಗಳು | 24–28 |
| 12 | ಪ್ರವೇಶಾತಿ ಶುಲ್ಕದ ಮಾಹಿತಿ | 28 |
| 13 | ಅಭ್ಯರ್ಥಿಗಳಿಗೆ ಪರೀಕ್ಷೆ ಕುರಿತ ಮಾಹಿತಿ | 29–32 |
| 14 | ಘಟಿಕೋತ್ಸವ | 32 |
| 15 | ಗುಣಾತ್ಮಕ ಕ್ರಮಗಳು | 33–35 |
| 16 | ಮಾಹಿತಿ ಮತ್ತು ಮಾರ್ಗದರ್ಶನ ಘಟಕ | 35 |
| 17 | ಇತರ ಮಾಹಿತಿಗಳು | 35–36 |
| 18 | ವಿಶ್ವವಿದ್ಯಾನಿಲಯದಿಂದ ನೀಡುತ್ತಿರುವ ಇತರೆ ಶಿಕ್ಷಣ ಕ್ರಮಗಳು | 36 |
| 19 | ಕುಂದುಕೊರತೆ ನಿವಾರಣಾ ಘಟಕ | 36–38 |
| 20 | ಉನ್ನತ ಶಿಕ್ಷಣಕ್ಕೆ ಸಂಬಂಧಿಸಿದ ಡಿಜಿಟಲ್ ಉಪಕ್ರಮಗಳು– ಯುಜಿಸಿ | 38–39 |
| | ಅನುಬಂಧ-I –ಯುಜಿಸಿ ನೀಡಿರುವ ಮಾನ್ಯತಾ ಪತ್ರ | 40 |
| | ಅನುಬಂಧ–II–ಪ್ರಾದೇಶಿಕ ಕೇಂದ್ರಗಳು ಮತ್ತು ಕಲಿಕಾರ್ಥಿ ಸಹಾಯ ಕೇಂದ್ರಗಳ ಪಟ್ಟಿ | 40–48 |
| | ಅನುಬಂಧ–III–ಪ್ರವೇಶಾತಿ ಶುಲ್ಕ ಸಂರಚನೆ | 48 |
| | ಅನುಬಂಧ–IV–ಪರಿಶಿಷ್ಟಜಾತಿ / ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಪ್ರವೇಶಾತಿ ಶುಲ್ಕ ಮರುಭರಿಕೆ – ಸಮಾಜಕಲ್ಯಾಣ ಇಲಾಖೆಯ ನಿಯಮಗಳನ್ನು ಆಧಾರಿಸಿ | 49–56 |
| | ಅನುಬಂಧ–V–ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಚಿನ್ನದ ಪದಕ ಮತ್ತು ನಗದು ಬಹುಮಾನ ಪಟ್ಟಿ | 57–58 |
| | ಅನುಬಂಧ–VI–ಸಾಮಾನ್ಯ ಶುಲ್ಕಗಳ ವಿವರ | 59–60 |



# <u>ಕುಲಪತಿಗಳ ಸಂದೇಶ</u>

ಪ್ರಿಯ ಕಲಿಕಾರ್ಥಿ,

ಕರಾಮುವಿ ಕುಟುಂಬವು, ಶೈಕ್ಷಣಿಕ ಉತ್ಕೃಷ್ಟತೆಯನ್ನು ಸಾಧಿಸಲು ಮಾತ್ರವಲ್ಲದೆ ನಿಮ್ಮ ವೃತ್ತಿ ಜೀವನದ ಆಶಯವನ್ನು ಪೂರೈಸಿಕೊಳ್ಳಲು ನೀವು ಆಯ್ಕೆ ಮಾಡಿಕೊಂಡಿರುವ ಶೈಕ್ಷಣಿಕ ಕಾರ್ಯಕ್ರಮಕ್ಕೆ ನಿಮ್ಮನ್ನು ಸ್ವಾಗತಿಸುತ್ತದೆ. ರಾಜ್ಯ ಶಾಸನಸಭೆಯ ಅಧಿನಿಯಮದಿಂದ ಸ್ಥಾಪಿಸಲ್ಪಟ್ಟಿರುವ ವಿಶ್ವವಿದ್ಯಾನಿಲಯವು ಅದ್ಭುತ ಶೈಕ್ಷಣಿಕ ಪರಿಸರವನ್ನು ಸೃಷ್ಟಿಸಿದೆ. ವಿಶ್ವವಿದ್ಯಾನಿಲಯವು ನೀಡುತ್ತಿರುವ ಶಿಕ್ಷಣಕ್ರಮಗಳು ವಿಶ್ವವಿದ್ಯಾನಿಲಯ ಧನಸಹಾಯ ಆಯೋಗದಿಂದ ಮಾನ್ಯತೆ ಹೊಂದಿವೆ.. ಆದುದರಿಂದ ವಿಶ್ವವಿದ್ಯಾನಿಲಯದ ಪದವಿಗಳನ್ನು ದೇಶಾದ್ಯಂತ ಉದ್ಯೋಗ ಅವಕಾಶಗಳಿಗೆ ಮಾನ್ಯ ಮಾಡಲಾಗುತ್ತದೆ.

ವಿಶ್ವವಿದ್ಯಾನಿಲಯದ ಮೂಲ ಮೌಲ್ಯಗಳನ್ನು ಅದರ ದೃಷ್ಟಿಯಾದ ***'ಉನ್ನತ ಶಿಕ್ಷಣ ಎಲ್ಲರಿಗೂ ಎಲ್ಲೆಡೆ'***ಯಿಂದ ಪಡೆದುಕೊಳ್ಳಲಾಗಿದೆ. ಗುಣಮಟ್ಟದಿಂದ ಕೂಡಿದ ಉನ್ನತ ಶಿಕ್ಷಣವು ವಿಶ್ವವಿದ್ಯಾನಿಲಯದ ಗುರಿಯಾಗಿದೆ. ದೇಶದ ಉದಯೋನ್ಮುಖ ಅಗತ್ಯೆಗಳಿಗೆ ಸ್ಪಂದಿಸುವ ಕವಲುದಾರಿಯಲ್ಲಿ ಇಂದು ಉನ್ನತ ಶಿಕ್ಷಣ ನಿಂತಿದೆ.

ವಿಶ್ವವಿದ್ಯಾನಿಲಯವು ತನ್ನ ಕಾರ್ಯ ನಿರ್ವಹಣೆಯಲ್ಲಿ 'ಸ್ಕೂಲ್ ಪರಿಕಲ್ಪನೆ'ಯನ್ನು ಅಳವಡಿಸಿಕೊಂಡಿದೆ. ಐದು ಸ್ಕೂಲ್‌ಗಳಿದ್ದು ಪ್ರತಿಯೊಂದನ್ನು ಅಪಾರ ಅನುಭವವುಳ್ಳ ನಿರ್ದೇಶಕರು ಬದ್ಧತೆಯುಳ್ಳ ಶಿಕ್ಷಕರ ತಂಡದೊಂದಿಗೆ ಮುನ್ನಡೆಸುತ್ತಿದ್ದಾರೆ. ಜ್ಞಾನ ಆಧಾರಿತ ಸಮಾಜವನ್ನು ನಿರ್ಮಿಸಲು ಸಾಮರ್ಥ್ಯವುಳ್ಳ ಉನ್ನತ ಗುಣಮಟ್ಟದ ಮಾನವ ಸಂಪನ್ಮೂಲಗಳು ಪ್ರಸಕ್ತ ಪ್ರಪಂಚದ ತೀವ್ರತೆಗಳಿಗೆ ಅಗತ್ಯವೆಂದು ವಿಶ್ವವಿದ್ಯಾನಿಲಯವು ನಂಬುತ್ತದೆ. ಉತ್ತಮ ಶೈಕ್ಷಣಿಕ ಅರ್ಹತೆಯುಳ್ಳ ಬೋಧಕ ವರ್ಗ ಮತ್ತು ಅಷ್ಟೇ ಬದ್ಧತೆಯುಳ್ಳ ಬೋಧಕೇತರ ವರ್ಗವು ವಿಶ್ವವಿದ್ಯಾನಿಲಯಕ್ಕೆ ಒಂದು ಆಸ್ತಿಯಾಗಿದ್ದು ವಿದ್ಯಾರ್ಥಿಗಳ ಕಲ್ಯಾಣಕ್ಕೆ ಕಟಿಬದ್ಧವಾಗಿದೆ.

ವಿದ್ಯಾರ್ಥಿ ಬೆಂಬಲ ಸೇವೆಗೆ ವಿಶ್ವವಿದ್ಯಾನಿಲಯವು ಮೂರು ಹಂತಗಳ ವ್ಯವಸ್ಥೆಯಡಿ ಕಾರ್ಯನಿರ್ವಹಿಸುತ್ತದೆ. ಅವುಗಳೆಂದರೆ ಕೇಂದ್ರಸ್ಥಾನ, ಕರ್ನಾಟಕದಾದ್ಯಂತ ವ್ಯಾಪಿಸಿರುವ 'ಪ್ರಾದೇಶಿಕ ಕೇಂದ್ರ' ಗಳು ಮತ್ತು 'ಕಲಿಕಾರ್ಥಿ ಸಹಾಯ ಕೇಂದ್ರ'ಗಳು. ಸೂಚಿತ ಪ್ರಾದೇಶಿಕ ಕೇಂದ್ರಗಳು ಮತ್ತು ಕಲಿಕಾರ್ಥಿ ಸಹಾಯ ಕೇಂದ್ರಗಳಲ್ಲಿ ವಿದ್ಯಾರ್ಥಿಗಳು ಬೋಧನೆ–ಕಲಿಕೆ ಪ್ರಕ್ರಿಯೆಗೆ ಒಳಪಡಬಹುದು. ಮುದ್ರಿತ ಸ್ವಯಂ ಕಲಿಕಾ ಸಾಮಗ್ರಿಗಳು, ಪರಿಮಿತ ಶ್ರವ್ಯ–ದೃಶ್ಯ ಸಾಮಗ್ರಿಗಳು ಮತ್ತು ಸಮಾಲೋಚನೆ / ಸಂಪರ್ಕ ಕಾರ್ಯಕ್ರಮ ಇವುಗಳನ್ನು ತಲುಪಿಸಲು ವಿಶ್ವವಿದ್ಯಾನಿಲಯವು ಒಂದು ವ್ಯವಸ್ಥೆಯನ್ನು ಹೊಂದಿದೆ. ಈ ವ್ಯವಸ್ಥೆಗಳ ಮೂಲಕ ಒಬ್ಬ ವಿದ್ಯಾರ್ಥಿಯಾಗಿ ನೀವು ಜ್ಞಾನ ಮತ್ತು ಕೌಶಲವನ್ನು ಗಳಿಸಲು ಹೆಚ್ಚಿನ ಅವಕಾಶವನ್ನು ಹೊಂದಲಿದ್ದೀರಿ. ಶೈಕ್ಷಣಿಕ ಸಮಾಲೋಚಕರು, ನೀವು ಕಾರ್ಯಕ್ರಮಕ್ಕೆ ಸೇರಿದಾಗಿನಿಂದ ನಿಮ್ಮ ಗುರಿ ತಲುಪುವ ತನಕ ಮಹತ್ವದಪಾತ್ರವನ್ನು ನಿರ್ವಹಿಸುತ್ತಾರೆ. ಸಮಾಜ ಮತ್ತು ದೇಶದ ಪ್ರಗತಿಗೆ ಉತ್ತಮ ಪ್ರಜೆಯಾಗಿ ಕೊಡುಗೆ ನೀಡುವಂತೆ ನಿಮ್ಮನ್ನು ಪರಿವರ್ತಿಸಲು ಅಗತ್ಯ ಜ್ಞಾನ ಮತ್ತು ಕೌಶಲಗಳನ್ನು ಸೂಕ್ತ ರೀತಿಯಲ್ಲಿ ಸಮ್ಮಿಳಿತಗೊಳಿಸಲಾಗುತ್ತದೆ.

ಯು.ಜಿ.ಸಿ ಯು ದಿನಾಂಕ: 23–02–2018 ರ ಸಾರ್ವಜನಿಕ ಪ್ರಕಟಣೆಯ ಮೂಲಕ ದೂರ ಶಿಕ್ಷಣ ಕ್ರಮದಲ್ಲಿ ನೀಡುವ ಎಲ್ಲಾ ಪದವಿ, ಡಿಪ್ಲಮೋ ಮತ್ತು ಸರ್ಟಿಫಿಕೇಟ್ ಕಾರ್ಯಕ್ರಮಗಳು ಸಾಂಪ್ರದಾಯಿಕ ವಿಶ್ವವಿದ್ಯಾನಿಲಯಗಳು ನೀಡುವ ಪದವಿ / ಡಿಪ್ಲೋಮಾ / ಸರ್ಟಿಫಿಕೇಟ್ ಶಿಕ್ಷಣ ಕ್ರಮಗಳಿಗೆ ಸಮಾನವಾಗಿರುತ್ತವೆ. ದೂರ ಶಿಕ್ಷಣದ ಮೂಲಕ ಪಡೆದ ಪದವಿಗಳು ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ, ಬಹು ರಾಷ್ಟ್ರೀಯ ಕಂಪನಿಗಳು, ಖಾಸಗಿ ವಲಯ ಮೊದಲಾದೆಡೆಗಳಲ್ಲಿ ಉದ್ಯೋಗಕ್ಕೆಮತ್ತು ಇತರ ಶೈಕ್ಷಣಿಕ ಸಂಸ್ಥೆಗಳಲ್ಲಿ ಉನ್ನತ ಶಿಕ್ಷಣವನ್ನು ಮುಂದುವರಿಸಲು ಮಾನ್ಯತೆ ಹೊಂದಿವೆ. ಆದ್ದರಿಂದ, ನಿಮ್ಮ ವೃತ್ತಿಭವಿಷ್ಯದ ಬಗ್ಗೆ ಯಾವುದೇ ಭಯವಿಲ್ಲದೆ ಉನ್ನತ ಶಿಕ್ಷಣವನ್ನು ಮುಂದುವರಿಸಲು ಉತ್ತಮ ಅವಕಾಶವಿದೆ.

ವಿಶ್ವವಿದ್ಯಾನಿಲಯವು ತನ್ನ ಕೇಂದ್ರಸ್ಥಾನ, ಪ್ರಾದೇಶಿಕ ಕೇಂದ್ರಗಳು ಹಾಗೂ ಕಲಿಕಾರ್ಥಿ ಸಹಾಯ ಕೇಂದ್ರಗಳ ಮೂಲಕ ನೀಡುವ ಸೇವೆಗಳನ್ನು ಪಡೆದು ನೀವು ಒಳ್ಳೆಯ ಅನುಭವವನ್ನು ಹೊಂದುವಿರೆಂಬ ಭರವಸೆ ನನ್ನದಾಗಿದೆ. ನಿಮ್ಮ ಶೈಕ್ಷಣಿಕ ಪ್ರಯತ್ನಗಳಿಗೆ ಶುಭವಾಗಲೆಂದು ನಾನು ಹಾರೈಸುತ್ತೇನೆ.

**ಪ್ರೊ.ಎಸ್. ವಿದ್ಯಾಶಂಕರ್**

## ವಿಶ್ವವಿದ್ಯಾನಿಲಯವನ್ನು ಕುರಿತು

**ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು,ವಿಶ್ವವಿದ್ಯಾನಿಲಯ ಅನುದಾನ ಆಯೋಗದ(ಮುಕ್ತ ಮತ್ತು ದೂರ ಕಲಿಕೆ) ನಿಯಾಮಾವಳಿ 2017ರನ್ವಯ ಮಾನ್ಯತೆ ಪಡೆದಿದೆ.**

**ಉನ್ನತ ಶಿಕ್ಷಣ ಎಲ್ಲರಿಗೂ ಎಲ್ಲೆಡೆ** ಎಂಬ ಧ್ಯೇಯ ವಾಕ್ಯದೊಂದಿಗೆ ವಿಶ್ವವಿದ್ಯಾನಿಲಯವು 1996ರ ಜೂನ್‌ನಲ್ಲಿ ಸ್ಥಾಪಿತಗೊಂಡಿದೆ. ಜಾಗತೀಕರಣದ ಯುಗದಲ್ಲಿ ರಾಷ್ಟ್ರವು ಸಾಂಪ್ರದಾಯಿಕ ಅರ್ಥ ವ್ಯವಸ್ಥೆಯಿಂದ ಜಾಗತೀಕರಣದ ಮುಕ್ತ ಆರ್ಥಿಕ ವ್ಯವಸ್ಥೆಗೆ ಬದಲಾದ ಕಾರಣ ಇಂದು ಸ್ಪರ್ಧಾತ್ಮಕ ಜಗತ್ತಿಗೆ ತೆರೆದುಕೊಂಡಿದೆ. ಈ ಸಂಕ್ರಮಣ ಸ್ಥಿತಿಯಿಂದಾಗಿ ಪ್ರಸುತ ಜ್ಞಾನವು ಕೇವಲ ತಥ್ಯಗಳ ಸಂಗ್ರಹಣೆಗಿಂತ ಆನ್ವಯಿಕೆಗೆ ಹೆಚ್ಚು ಮಹತ್ವ ಒದಗಿಸಿದೆ. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ಸರ್ವಾಂಗೀಣ ಮಾನವ ವ್ಯಕ್ತಿತ್ವ ಅಭಿವೃದ್ಧಿಯ ಉದ್ದೇಶದಿಂದ ಪ್ರಸ್ತುತ ಜಾಗತಿಕ ಪರಿಸರಕ್ಕೆ ಹೊಂದಿಕೊಳ್ಳಲು ಜ್ಞಾನದ ಹಂಚಿಕೆಗಾಗಿ ಅಂತರ್ ಶಿಸ್ತೀಯ ಮಾರ್ಗವನ್ನು ಸಂಯೋಜಿಸಲು ಪ್ರಯತ್ನಿಸುತ್ತದೆ.

ಮೈಸೂರು ಶ್ರೀಮಂತ ಸಾಂಪ್ರದಾಯಿಕ ಪರಂಪರೆಯ ಐತಿಹಾಸಿಕ ಕೇಂದ್ರವಾಗಿದ್ದು, ವಿವಿಧ ಸಾಮ್ರಾಜ್ಯಗಳಲ್ಲಿ ಸಂಭವಿಸಿದ ಮಹತ್ವ ಪೂರ್ಣ ಐತಿಹಾಸಿಕ ಘಟನೆಗಳು ಹಾಗೂ ಇಲ್ಲಿನ ಮಾನವ ಸಾಮಾಜಿಕ ವ್ಯವಸ್ಥೆಯು ಅನುಪಮವಾಗಿದೆ. ಮಾನವ ಕಲ್ಯಾಣದ ಹಾದಿಯಲ್ಲಿ ಅಂತರಾಷ್ಟ್ರೀಯ ಮಟ್ಟದ ಧ್ಯೇಯೋದ್ದೇಶಗಳನ್ನು ಸಾಧಿಸಲು ವಿಶ್ವವಿದ್ಯಾನಿಲಯವು ದಾರಿಯನ್ನು ತೆರೆದಿದೆ. ಉನ್ನತ ಶಿಕ್ಷಣದ ಸಾವಿರಾರು ಯುವ ಆಕಾಂಕ್ಷಿಗಳ ಶೈಕ್ಷಣಿಕ ಅವಶ್ಯಕತೆಗಳನ್ನು ಪೂರೈಸಲು 1996ರಲ್ಲಿ ಪ್ರತ್ಯೇಕ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಲಾಯಿತು.

ವಿಶ್ವವು ಬಹುದೊಡ್ಡ ಸವಾಲಿನೊಂದಿಗೆ 21ನೇ ಶತಮಾನವನ್ನು ಪ್ರವೇಶಿಸಿದೆ. ಪ್ರಪಂಚದ ಯಾವ ದೇಶವೂ ಈ ಸವಾಲಿಗೆ ಹೊರತಾಗಿಲ್ಲ. ಜಾಗತೀಕರಣದ ಪರಿಣಾಮವಾಗಿ ಜ್ಞಾನದ ಕ್ರಾಂತಿ ಹಾಗೂ ಮಾಹಿತಿ ತಂತ್ರಜ್ಞಾನದ ಬೆಳವಣಿಗೆಯು ಜಾಗತಿಕ ಮಟ್ಟದಲ್ಲಿ ಉಳಿವಿಗಾಗಿ ಸ್ಪರ್ಧೆಗೆ ಕಾರಣವಾಗಿದೆ. ಬದಲಾಗುತ್ತಿರುವ ಪ್ರಪಂಚದಲ್ಲಿ ಶಿಕ್ಷಣ ತಜ್ಞರು ಹಾಗೂ ಶಿಕ್ಷಣ ಯೋಜಕರನ್ನು ವಿಶ್ವವಿದ್ಯಾನಿಲಯದ ಪಾತ್ರವನ್ನು ಪುನರ್‌ವ್ಯಾಖ್ಯಾನಿಸುವಂತೆ ಮಾಡಿದೆ. ಜ್ಞಾನ ಭಂಡಾರವನ್ನು ನಿರ್ಮಿಸಲು ಶೈಕ್ಷಣಿಕ ಜ್ಞಾನವನ್ನು ಹೊಸ ಚಿಂತನೆ, ಹೊಸ ಮಾರ್ಗ, ಹೊಸ ಪರಿಕಲ್ಪನೆಯ ಜೊತೆ ಸಂಯೋಜನೆಗೊಳಿಸಿ ಅರೆಕುಶಲ ಹಾಗೂ ಕುಶಲ ರಹಿತ ಮಾನವ ಸಂಪನ್ಮೂಲವನ್ನು ವೃತ್ತಿಪರ ಕುಶಲ ಮಾನವ ಸಂಪನ್ಮೂಲವನ್ನಾಗಿ ಪರಿವರ್ತಿಸಬಹುದಾಗಿದೆ.

### ವಿಶಿಷ್ಟ ಲಕ್ಷಣಗಳು

ಮುಕ್ತ ಮತ್ತು ದೂರ ಕಲಿಕಾ ವ್ಯವಸ್ಥೆಯು ಅದ್ವಿತೀಯವು ಹಾಗೂ ಸವಾಲುವುಳ್ಳದ್ದು ಅಗಿದೆ. ಏಕೆಂದರೆ ಮುಕ್ತ ಮತ್ತು ದೂರ ಕಲಿಕಾ ಕ್ರಮಕ್ಕೆ ಸೇರ್ಪಡೆಯಾಗುವ ಕಲಿಕಾರ್ಥಿಗಳು ವಿವಿಧ ಬಗೆಯ ಸಾಮಾಜಿಕ, ಆರ್ಥಿಕ ಹಿನ್ನೆಲೆಯೊಂದಿಗೆ ಹಾಗೂ ವಿಭಿನ್ನ ಕಲಿಕಾ ಹಿನ್ನೆಲೆಯನ್ನು ಹೊಂದಿರುವವರಾಗಿರುತ್ತಾರೆ. ಪ್ರಸ್ತುತ ಸಾಂಪ್ರದಾಯಿಕ ವಿಶ್ವವಿದ್ಯಾನಿಲಯ ವ್ಯವಸ್ಥೆಗೆ ಇಂತಹ ವಿದ್ಯಾರ್ಥಿಗಳ ನೈಜ ಬೇಡಿಕೆಗಳನ್ನು ಪೂರೈಸಲು ಸಾಧ್ಯವಾಗುತ್ತಿಲ್ಲ ಹಾಗೂ ಇಂತಹ ವಿದ್ಯಾರ್ಥಿಗಳು ಹಲವಾರು ಕಾರಣಗಳಿಂದ ಸಾಂಪ್ರದಾಯಿಕ ಶಿಕ್ಷಣ ವ್ಯವಸ್ಥೆಯಲ್ಲಿ ಶಿಕ್ಷಣ ಮುಂದುವರೆಸಲು ಸಾಧ್ಯವಾಗುತ್ತಿಲ್ಲ. ಹೀಗಾಗಿ ಸಾಂಪ್ರದಾಯಿಕ ಶಿಕ್ಷಣದಿಂದ ವಂಚಿತರಾಗಿರುವ ಈ ವಿದ್ಯಾರ್ಥಿಗಳಿಗೆ ಶಿಕ್ಷಣವನ್ನು ಮುಂದುವರೆಸಲು ಮುಕ್ತ ಮತ್ತು ದೂರ ಶಿಕ್ಷಣ ವ್ಯವಸ್ಥೆಯಲ್ಲಿ ಅವಕಾಶ ಒದಗಿಸಲಾಗಿದೆ. ಇದಕ್ಕಾಗಿಯೇ ಈ ವಿಶ್ವವಿದ್ಯಾನಿಲಯವು ಸ್ಥಾಪನೆಯಾಗಿದೆ. ವಿಶ್ವವಿದ್ಯಾನಿಲಯದ ಪ್ರಮುಖ ಧ್ಯೇಯವೆಂದರೆ ಉನ್ನತ ಗುಣಮಟ್ಟದ ಮಾನವ ಸಂಪನ್ಮೂಲವನ್ನು ಸೃಜಿಸುವುದೇ ಆಗಿದೆ. ಹೀಗಾಗಿ ಈ ಕೆಳಕಂಡ ಅಂಶಗಳಿಗೆ ಒತ್ತು ನೀಡಿ ಶಿಕ್ಷಣ ನೀಡಲಾಗುತ್ತಿದೆ.

1) ವಿವಿಧ ಕ್ರಮಗಳ ಮುಖಾಂತರ ಮಾರ್ಗದರ್ಶಕ ದೃಷ್ಟಿಕೋನವನ್ನು ಕಾರ್ಯಾತ್ಮಕ ಯೋಜನೆಯಾಗಿ ಪರಿವರ್ತಿಸುವುದು.
2) ಕೌಶಲ್ಯ ತರಬೇತಿ ಮುಖಾಂತರ ಉತ್ಕೃಷ್ಟ ಗುಣಮಟ್ಟದ ಮಾನವ ಸಂಪನ್ಮೂಲವನ್ನು ಸೃಜಿಸುವುದು.
3) ಶಿಕ್ಷಣವನ್ನು ಪೂರೈಸದೇ ಅರ್ಧದಲ್ಲಿ ಬಿಟ್ಟಿರುವ ಕಲಿಕಾರ್ಥಿಗಳಿಗೆ ಶಿಕ್ಷಣ ಮುಂದುವರೆಸಲು ಅವಕಾಶವನ್ನು ಒದಗಿಸುವುದು.
4) ಕಾರ್ಯನಿರತ ಉದ್ಯೋಗಿಗಳಿಗೆ ಉನ್ನತ ಜ್ಞಾನವನ್ನು ಗಳಿಸಿಕೊಳ್ಳಲು ಅವಕಾಶವನ್ನು ಒದಗಿಸುವುದು.
5) ಅಭ್ಯರ್ಥಿಗಳಿಗೆ ತಾವು ವಾಸಿಸುವ ಸ್ಥಳದಲ್ಲೇ ಉನ್ನತ ಶಿಕ್ಷಣವನ್ನು ಪಡೆಯಲು ಅವಕಾಶ ಒದಗಿಸುವುದು.
6) ಪಾರದರ್ಶಕವಾಗಿ ಪ್ರವೇಶವನ್ನು ಕಲ್ಪಿಸುವುದು.
7) ನಿರ್ಬಂಧಿತ ಕಲಿಕೆಯನ್ನು ಜಾಗತಿಕ ಆಧಾರಿತ ಕಲಿಕೆಗೆ ವರ್ಗಾಯಿಸುವುದು.
8) ಉನ್ನತ ಶಿಕ್ಷಣಕ್ಕೆ ನವೀನ ಪರಿಕಲ್ಪನೆ ಹಾಗೂ ಹೊಸ ಮಾರ್ಗವನ್ನು ಒದಗಿಸುವುದು.
9) ರಾಷ್ಟ್ರದ ಬೆಳವಣಿಗೆ ಸಾಧಿಸಲು ವಿವಿಧ ಉದ್ದೇಶದ ಅಂಶಗಳನ್ನು ಒದಗಿಸುವುದು.
10) ಸಾಮಾಜಿಕ ಸಮಸ್ಯೆಗಳನ್ನು ನಿಭಾಯಿಸುವ ವಿಮರ್ಶಾತ್ಮಕ ಪಾತ್ರ ವಹಿಸುವುದು.
11) ಆಂತರಿಕ ಸಾಮರ್ಥ್ಯ ಬೆಳೆಸಿಕೊಳ್ಳುವಲ್ಲಿ ವಿದ್ಯಾರ್ಥಿಗೆ ಅವಶ್ಯಕ ಬೆಂಬಲ ಸೇವೆಗಳನ್ನು ಸೃಷ್ಟಿಸುವುದು.

## ವ್ಯವಸ್ಥಾಪನಾ ಮಂಡಳಿ

**ಸದಸ್ಯರು**

| | | |
|---|---|---|
| 1. | ಕುಲಪತಿ, ಕರಾಮುವಿ | ಅಧ್ಯಕ್ಷರು |
| 2. | ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ | ಸದಸ್ಯರು |
| 3. | ಕಾರ್ಯದರ್ಶಿ, ಹಣಕಾಸು ಇಲಾಖೆ, ಕರ್ನಾಟಕ ಸರ್ಕಾರ | ಸದಸ್ಯರು |
| 4. | ಕುಲಪತಿ, (ನಿರ್ದಿಷ್ಟಪಡಿಸಬಹುದಾದಂಥ ಅವಧಿಗೆ ಸರದಿಯ ಮೂಲಕ ನಾಮ ನಿರ್ದೇಶಿತರಾದ ಕರ್ನಾಟಕ ರಾಜ್ಯದಲ್ಲಿನ ವಿಶ್ವವಿದ್ಯಾನಿಲಯಗಳ ಒಬ್ಬರು ಕುಲಪತಿ) | ಸದಸ್ಯರು |
| 5. | ಡೀನ್ (ಶೈಕ್ಷಣಿಕ), ಕರಾಮುವಿ | ಸದಸ್ಯರು |
| 6. | ಸಮಾಕುಲಾಧಿಪತಿಗಳಿಂದ ನಾಮ ನಿರ್ದೇಶಿತರಾಗುವ ಶೈಕ್ಷಣಿಕ, ವೈಜ್ಞಾನಿಕ ಮತ್ತು ಆಡಳಿತ ಕ್ಷೇತ್ರಗಳಲ್ಲಿನ ಐವರು ಗಣ್ಯ ವ್ಯಕ್ತಿಗಳು | ಸದಸ್ಯರುಗಳು |
| 7. | ಕರ್ನಾಟಕ ವಿಧಾನಸಭಾ ಸದಸ್ಯರ ಪೈಕಿ ಚುನಾಯಿಸಲಾದ ಇಬ್ಬರು ಸದಸ್ಯರು | ಸದಸ್ಯರುಗಳು |
| 8. | ಕರ್ನಾಟಕ ವಿಧಾನಪರಿಷತ್ತಿನ ಸದಸ್ಯರ ಪೈಕಿ ಚುನಾಯಿಸಲಾದ ಇಬ್ಬರು ಸದಸ್ಯರು | ಸದಸ್ಯರುಗಳು |
| 9. | ಕುಲಸಚಿವ, ಕರಾಮುವಿ | ಕಾರ್ಯದರ್ಶಿ |

## ವಿಶ್ವವಿದ್ಯಾನಿಲಯದ ಅಧಿಕಾರಿಗಳು

**ಶ್ರೀ ವಜೂಭಾಯಿ ರೂಢಾಬಾಯಿ ವಾಲಾ**
**ಕುಲಾಧಿಪತಿಗಳು**
ಘನತೆವೆತ್ತ ರಾಜ್ಯಪಾಲರು, ಕರ್ನಾಟಕ

**ಡಾ. ಅಶ್ವತ್ಥ ನಾರಾಯಣ**
**ಸಮಕುಲಾಧಿಪತಿಗಳು**
ಗೌರವಾನ್ವಿತ ಉನ್ನತ ಶಿಕ್ಷಣ ಸಚಿವರು,
ಕರ್ನಾಟಕ ಸರ್ಕಾರ

**ಡಾ.ವಿದ್ಯಾಶಂಕರ್ ಎಸ್**
**ಕುಲಪತಿ**
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

**ಪ್ರೊ. ಬಿ. ರಮೇಶ್**
**ಕುಲಸಚಿವ**

| | | | |
|---|---|---|---|
| ಡಾ. ತೇಜಸ್ವಿ ನವಿಲೂರ್ | ಡಾ.ಎ.ಖಾದರ್‌ಪಾಷಾ | ಡಾ.ಕವಿತಾ ರೈ | ಡಾ. ಪ್ರಭುಸೇನ |
| **ಡೀನ್ (ಶೈಕ್ಷಣಿಕ)** (ಪ್ರಭಾರ) | **ಹಣಕಾಸು ಅಧಿಕಾರಿ** | **ಕುಲಸಚಿವ (ಪರೀಕ್ಷಾಂಗ)**(ಪ್ರಭಾರ) | **ಡೀನ್(ಅಧ್ಯಯನ ಕೇಂದ್ರಗಳು)** (ಪ್ರಭಾರ) |

## 1. ಯು.ಜಿ.ಸಿ ಮುಕ್ತ ಮತ್ತು ದೂರ ಶಿಕ್ಷಣ ನಿಯಮಾವಳಿ–2017

ಭಾರತ ಸರ್ಕಾರದ ಅಧಿಕೃತ ರಾಜ್ಯಪತ್ರದ ದಿನಾಂಕ: 23–06–2017ರಂದು ವಿಶ್ವವಿದ್ಯಾನಿಲಯ ಧನಸಹಾಯ ಆಯೋಗವು ಮುಕ್ತ ಮತ್ತು ದೂರ ಕಲಿಕೆಗೆ ಸಂಬಂಧಿಸಿದಂತೆ ಕ್ಲಾಸ್ (ಜೆ)ಯ ಸೆಕ್ಷನ್ 12(5) ನ್ನು ಒದಿಕೊಂಡಂತೆ ಸೆಕ್ಷನ್ 26 (1)ರ ಅನ್ವಯ (ODL)ನಿಯಾಮಾವಳಿಗಳನ್ನು ಪ್ರಕಟಿಸಿದೆ. ಮುಕ್ತ ಮತ್ತು ದೂರ ಶಿಕ್ಷಣವನ್ನು ನೀಡುವ ಎಲ್ಲಾ ಉನ್ನತ ಶಿಕ್ಷಣ ಸಂಸ್ಥೆಗಳು ಈ ನಿಯಮಾವಳಿಗಳನ್ನು ಕಡ್ಡಾಯವಾಗಿ ಪಾಲಿಸಬೇಕಾಗುತ್ತದೆ. ಯುಜಿಸಿಯು ಶೈಕ್ಷಣಿಕ ಆಡಳಿತದಲ್ಲಿ ಸ್ಕೂಲ್ ಪರಿಕಲ್ಪನೆಯನ್ನು ಅಳವಡಿಸಿಕೊಳ್ಳಬೇಕೆಂದು ನಿರ್ದೇಶಿಸಿದೆ.ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ಯುಜಿಸಿಯಿಂದ ಮಾನ್ಯತೆಯನ್ನು ಹೊಂದಿದ್ದು, ಈ ನಿಯಮಾವಳಿಗಳಲ್ಲಿ ನಿರ್ದಿಷ್ಟಪಡಿಸಿರುವ ಎಲ್ಲಾ ಅಂಶಗಳನ್ನು ಕಡ್ಡಾಯವಾಗಿ ಪಾಲಿಸುತ್ತಿದೆ.

## 2. ಸ್ಕೂಲ್ಸ್ ಆಫ್ ಸ್ಟಡೀಸ್

ವಿಶ್ವವಿದ್ಯಾನಿಲಯಅನುದಾನ ಆಯೋಗದ ನಿರ್ದೇಶನಗಳನ್ನು ಗಮನದಲ್ಲಿಟ್ಟುಕೊಂಡು ವಿಶ್ವವಿದ್ಯಾನಿಲಯವು ಐದು ಸ್ಕೂಲ್ ಆಫ್ ಸ್ಟಡೀಸ್‌ಗಳನ್ನು ಸ್ಥಾಪಿಸಿದೆ. ಈ ಮುಂದಿನ ಸ್ಕೂಲ್ ಆಫ್ ಸ್ಟಡೀಸ್‌ಗಳು ಸ್ಕೂಲ್ ನಿರ್ದೇಶಕರುಗಳ ಮಾರ್ಗದರ್ಶನದಲ್ಲಿ ಕಾರ್ಯ ನಿರ್ವಹಿಸುತ್ತವೆ.

1. ಸ್ಕೂಲ್ : ವಾಣಿಜ್ಯ ಮತ್ತು ನಿರ್ವಹಣಾಶಾಸ್ತ್ರ
2. ಸ್ಕೂಲ್ : ಮಾನವಿಕ
3. ಸ್ಕೂಲ್ : ಸಾಮಾಜಿಕ ವಿಜ್ಞಾನ
4. ಸ್ಕೂಲ್ : ವಿಜ್ಞಾನ ವಿಷಯಗಳು
5. ಸ್ಕೂಲ್ : ಶಿಕ್ಷಣ

**ಸ್ಕೂಲ್ ವಾಣಿಜ್ಯ ಮತ್ತು ನಿರ್ವಹಣಾಶಾಸ್ತ್ರ ಒಳಗೊಂಡಿರುವ ವಿಭಾಗಗಳು**

1. ವಾಣಿಜ್ಯಶಾಸ್ತ್ರ ವಿಭಾಗ
2. ನಿರ್ವಹಣಾಶಾಸ್ತ್ರ ವಿಭಾಗ

**ಸ್ಕೂಲ್ ಮಾನವಿಕ ಒಳಗೊಂಡಿರುವ ವಿಭಾಗಗಳು**

1. ಕನ್ನಡ ವಿಭಾಗ
2. ಇಂಗ್ಲಿಷ್ ವಿಭಾಗ
3. ಹಿಂದಿ ವಿಭಾಗ
4. ಸಂಸ್ಕೃತ ವಿಭಾಗ
5. ಉರ್ದು ವಿಭಾಗ
6. ತೆಲುಗು ವಿಭಾಗ

**ಸ್ಕೂಲ್ ಸಮಾಜ ವಿಜ್ಞಾನ ಒಳಗೊಂಡಿರುವ ವಿಭಾಗಗಳು**

1. ಇತಿಹಾಸ ವಿಭಾಗ
2. ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗ
3. ಅರ್ಥಶಾಸ್ತ್ರ ವಿಭಾಗ
4. ಸಮಾಜಶಾಸ್ತ್ರ ವಿಭಾಗ
5. ರಾಜ್ಯಶಾಸ್ತ್ರ ವಿಭಾಗ
6. ಸಾರ್ವಜನಿಕ ಆಡಳಿತ ವಿಭಾಗ
7.ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ
8. ಮಾನವಶಾಸ್ತ್ರ ವಿಭಾಗ

**ಸ್ಕೂಲ್ ವಿಜ್ಞಾನ ಒಳಗೊಂಡಿರುವ ವಿಭಾಗಗಳು**

1. ಜೀವರಸಾಯನಶಾಸ್ತ್ರ ವಿಭಾಗ
2. ಜೈವಿಕತಂತ್ರಜ್ಞಾನ ವಿಭಾಗ
3. ರಸಾಯನಶಾಸ್ತ್ರ ವಿಭಾಗ
4. ಗಣಕವಿಜ್ಞಾನ ವಿಭಾಗ
5. ಪರಿಸರ ವಿಜ್ಞಾನ ವಿಭಾಗ
7. ಭೂಗೋಳಶಾಸ್ತ್ರ ವಿಭಾಗ
8. ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗ
9.ಗಣಿತಶಾಸ್ತ್ರ ವಿಭಾಗ
10. ಸೂಕ್ಷ್ಮಜೀವಶಾಸ್ತ್ರ ವಿಭಾಗ
11. ಭೌತಶಾಸ್ತ್ರ ವಿಭಾಗ

6. ಆಹಾರ ವಿಜ್ಞಾನ ಮತ್ತು ಪೌಷ್ಟಿಕತೆ ವಿಭಾಗ

12. ಮನೋವಿಜ್ಞಾನ ವಿಭಾಗ

13. ಮಾಹಿತಿ ವಿಜ್ಞಾನ ವಿಭಾಗ

**ಸ್ಕೂಲ್ ಶಿಕ್ಷಣ ಒಳಗೊಂಡಿರುವ ವಿಭಾಗ** : ಶಿಕ್ಷಣಶಾಸ್ತ್ರ ವಿಭಾಗ

## 3. ಖಾಯಂ ಅಧ್ಯಾಪಕರ ವಿವರ

| ಕ್ರ. ಸಂ. | ಅಧ್ಯಾಪಕರ ಹೆಸರು | ಹುದ್ದೆ | ವಿದ್ಯಾರ್ಹತೆ | ವಿಶೇಷ ತಜ್ಞತೆ | ಸೇವಾನುಭವ ವರ್ಷಗಳಲ್ಲಿ | ದೂರವಾಣಿ ಸಂಖ್ಯೆ |
|---|---|---|---|---|---|---|
| | | | **ಕನ್ನಡ ವಿಭಾಗ** | | | |
| 01. | ಡಾ. ಎ. ರಂಗಸ್ವಾಮಿ | ಪ್ರಾಧ್ಯಾಪಕರು | ಎಂ.ಎ., ಪಿಎಚ್.ಡಿ. | ಆಧುನಿಕ ಸಾಹಿತ್ಯ | 29 | 9448166815 |
| 02. | ಡಾ. ಡಿ. ನಾಗಣ್ಣ | ಸಹ ಪ್ರಾಧ್ಯಾಪಕರು | ಎಂ.ಎ., ಪಿಎಚ್.ಡಿ. | ಸಾಹಿತ್ಯವಿಮರ್ಶೆ | 26 | 9738979269 |
| 03. | ಡಾ. ಕವಿತಾ ರೈ | ಸಹ ಪ್ರಾಧ್ಯಾಪಕರು | ಎಂ.ಎ., ಪಿಎಚ್.ಡಿ. | ಕಾವ್ಯ ಮೀಮಾಂಸೆ | 15 | 9482206129 |
| 04. | ಡಾ. ಟಿ.ಎಂ. ಗೀತಾಂಜಲಿ | ಸಹಾಯಕ ಪ್ರಾಧ್ಯಾಪಕರು | ಎಂ.ಎ., ಪಿಎಚ್.ಡಿ. | ತೌಲನಿಕ ಸಾಹಿತ್ಯ | 26 | 9739425639 |
| 05. | ಡಾ. ಎನ್.ಆರ್. ಚಂದ್ರೇಗೌಡ | ಸಹಾಯಕ ಪ್ರಾಧ್ಯಾಪಕರು | ಎಂ.ಎ., ಪಿಎಚ್.ಡಿ. | ಜನಪದ ಮತ್ತು ವಿಮರ್ಶೆ | 24 | 9449668997 |
| 06. | ಡಾ. ಪಿ. ಮಣಿ | ಸಹಾಯಕ ಪ್ರಾಧ್ಯಾಪಕರು | ಎಂ.ಎ., ಪಿಎಚ್.ಡಿ. | ಭಾಷಾ ಸಾಹಿತ್ಯ | 20 | 9480170799 |
| 07. | ಡಾ. ಜ್ಯೋತಿಶಂಕರ್ | ಸಹಾಯಕ ಪ್ರಾಧ್ಯಾಪಕರು | ಎಂ.ಎ., ಪಿಎಚ್.ಡಿ. | ಪ್ರಾಚೀನ ಸಾಹಿತ್ಯ | 17 | 9448603159 |
| | | | **ಇಂಗ್ಲಿಷ್ ವಿಭಾಗ** | | | |
| 09. | ಡಾ. ಜಿ. ನಟರಾಜು | ಸಹಾಯಕ ಪ್ರಾಧ್ಯಾಪಕರು | ಎಂ.ಎ., ಪಿಎಚ್.ಡಿ. | ಬ್ರಿಟಿಷ್ ಸಾಹಿತ್ಯ | 12 | 9741219820 |
| 10. | ಶ್ರೀ. ಎಸ್. ಶ್ರೀಕಾಂತ್ | ಸಹಾಯಕ ಪ್ರಾಧ್ಯಾಪಕರು | ಎಂ.ಎ., ಎಂ.ಫಿಲ್. | ಯುರೋಪಿಯನ್ ಕ್ಲಾಸಿಕ್ಸ್ | 16 | 9986019910 |
| 11. | ಡಾ|| ಎ.ಎಸ್. ಮಧುರ | ಸಹಾಯಕ ಪ್ರಾಧ್ಯಾಪಕರು | ಎಂ.ಎ. ಪಿಎಚ್.ಡಿ | ಹೊಲೋಕಾಸ್ಟ್ ಲಿಟರೇಚರ್ | 13 | 9980900349 |
| | | | **ಹಿಂದಿ ವಿಭಾಗ** | | | |
| 12. | ಡಾ. ಕಾಂಬ್ಳೆ ಅಶೋಕ್ | ಪ್ರಾಧ್ಯಾಪಕರು | ಎಂ.ಎ., ಪಿಎಚ್.ಡಿ. | ವ್ಯಾಕರಣ ಶಾಸ್ತ್ರ | 33 | 9449638999 |
| 13. | ಡಾ. ಡಿ. ಪ್ರಭುಸೇನ | ಸಹಾಯಕ ಪ್ರಾಧ್ಯಾಪಕರು | ಎಂ.ಎ., ಪಿಎಚ್.ಡಿ. | ಪದ್ಯ ಸಾಹಿತ್ಯ | 8 | 9945653167 |
| | | | **ಉರ್ದು ವಿಭಾಗ** | | | |
| 14. | ಶ್ರೀಮತಿ. ಎಂ. ಬಲ್ಕಿಸ್ ಬಾನು | ಸಹ ಪ್ರಾಧ್ಯಾಪಕರು | ಎಂ.ಎ., | ಇಕ್ಬಾಲ್ ಕವಿಯ ವಿಶೇಷ ಅಧ್ಯಯನ | 32 | 9986031230 |

| | | | | | | |
|---|---|---|---|---|---|---|
| **ತೆಲುಗು ವಿಭಾಗ** | | | | | | |
| 15. | ಡಾ. ಎಂ. ರಾಮನಾಥಂ ನಾಯ್ಡು | ಸಹ ಪ್ರಾಧ್ಯಾಪಕರು | ಎಂ.ಎ., ಪಿಎಚ್.ಡಿ. | ತೆಲುಗು ಸಾಹಿತ್ಯ | 26 | 9035363892 |
| **ಇತಿಹಾಸ ವಿಭಾಗ** | | | | | | |
| 16. | ಡಾ. ವಿ. ಎಂ. ರಮೇಶ | ಸಹಾಯಕ ಪ್ರಾಧ್ಯಾಪಕರು | ಎಂ.ಎ., ಪಿಎಚ್.ಡಿ. | ಕರ್ನಾಟಕ ಇತಿಹಾಸ | 16 | 9880903740 |
| 17. | ಡಾ. ಸಿ. ರಾಮೇಗೌಡ | ಸಹಾಯಕ ಪ್ರಾಧ್ಯಾಪಕರು | ಎಂ.ಎ., ಪಿಎಚ್.ಡಿ. | ಸಂವಿಧಾನಿಕ ಇತಿಹಾಸ | 13 | 9008904019 |
| 18. | ಡಾ. ಎನ್.ಸಿ. ಸುಜಾತ | ಸಹಾಯಕ ಪ್ರಾಧ್ಯಾಪಕರು | ಎಂ.ಎ., ಪಿಎಚ್.ಡಿ. | ಭಾರತದ ಇತಿಹಾಸ | 09 | 9035506794 |
| **ಪ್ರಾಚೀನ ಇತಿಹಾಸ ಮತ್ತು ಪುರಾತತ್ವ** | | | | | | |
| 19. | ಡಾ. ಶೆಲ್ವಪಿಳ್ಳೈ ಅಯ್ಯಂಗಾರ್ | ಸಹಾಯಕ ಪ್ರಾಧ್ಯಾಪಕರು | ಎಂ.ಎ., ಪಿಎಚ್.ಡಿ. | ಪ್ರಾಚೀನ ಇತಿಹಾಸ | 13 | 9686215043 |
| **ಅರ್ಥಶಾಸ್ತ್ರ ವಿಭಾಗ** | | | | | | |
| 20. | ಡಾ. ಎಂ.ಎಸ್. ರಮಾನಂದ | ಸಹ ಪ್ರಾಧ್ಯಾಪಕರು | ಎಂ.ಎ., ಪಿಎಚ್.ಡಿ. | ಸೂಕ್ಷ್ಮ ಅರ್ಥಶಾಸ್ತ್ರ | 25 | 9035459768 |
| 21. | ಡಾ. ಶಿವಕುಮಾರ ಸ್ವಾಮಿ | ಸಹಾಯಕ ಪ್ರಾಧ್ಯಾಪಕರು | ಎಂ.ಎ., ಪಿಎಚ್.ಡಿ. | ಅಭಿವೃದ್ಧಿ ಅರ್ಥಶಾಸ್ತ್ರ | 17 | 9972165817 |
| 22. | ಡಾ. ಆರ್.ಎಚ್.ಪವಿತ್ರ | ಸಹಾಯಕ ಪ್ರಾಧ್ಯಾಪಕರು | ಎಂ.ಎ., ಪಿಎಚ್.ಡಿ. | ಎಕಾನೊಮೆಟ್ರಿಕ್ಸ್ | 13 | 9845659987 |
| 23. | ಡಾ. ಟಿ.ಪಿ. ಶಶಿಕುಮಾರ್ | ಸಹಾಯಕ ಪ್ರಾಧ್ಯಾಪಕರು | ಎಂ.ಎ., ಪಿಎಚ್.ಡಿ. | ಪರಿಮಾಣಾತ್ಮಕ ತಂತ್ರಗಳು | 11 | 9036342507 |
| 24. | ಡಾ. ಜೆ.ಎಲ್. ಬನಶಂಕರಿ | ಸಹಾಯಕ ಪ್ರಾಧ್ಯಾಪಕರು | ಎಂ.ಎ., ಪಿಎಚ್.ಡಿ. | ಹಣ ಮತ್ತು ಅರ್ಥಶಾಸ್ತ್ರ | 07 | 8951217787 |
| 25. | ಡಾ. ಕೆ.ಎಸ್. ವೀರೇಂದ್ರಕುಮಾರ | ಸಹಾಯಕ ಪ್ರಾಧ್ಯಾಪಕರು | ಎಂ.ಎ., ಪಿಎಚ್.ಡಿ. | ಅಭಿವೃದ್ಧಿ ಅರ್ಥಶಾಸ್ತ್ರ | 13 | 9901963999 |
| 26. | ಶ್ರೀ. ಎನ್. ಹರೀಶ | ಸಹಾಯಕ ಪ್ರಾಧ್ಯಾಪಕರು | ಎಂ.ಎ., | ಹಣ ಮತ್ತು ಬ್ಯಾಂಕಿಂಗ್ | 08 | 9844189280 |
| **ರಾಜ್ಯಶಾಸ್ತ್ರ ವಿಭಾಗ** | | | | | | |
| 27. | ಡಾ. ಕೆ.ಜೆ. ಸುರೇಶ್ | ಪ್ರಾಧ್ಯಾಪಕರು | ಎಂ.ಎ., ಪಿಎಚ್.ಡಿ. | ರಾಜಕೀಯ ಸಿದ್ಧಾಂತ | 33 | - |
| 28. | ಡಾ. ಶಂಕರನಾರಾಣಪ್ಪ | ಸಹ ಪ್ರಾಧ್ಯಾಪಕರು | ಎಂ.ಎ., ಪಿಎಚ್.ಡಿ. | ಸಾರ್ವಜನಿಕ ಆಡಳಿತ | 21 | 9341243823 |

| | | | | | | |
|---|---|---|---|---|---|---|
| 29. | ಡಾ. ಆನಂದಗೌಡ | ಸಹಾಯಕ ಪ್ರಾಧ್ಯಾಪಕರು | ಎಂ.ಎ., ಪಿಎಚ್.ಡಿ. | ರಾಜಕೀಯ ಸಿದ್ಧಾಂತ | 11 | 9916007312 |
| 30. | ಶ್ರೀಮತಿ. ಆರ್.ಐಶ್ವರ್ಯ | ಸಹಾಯಕ ಪ್ರಾಧ್ಯಾಪಕರು | ಎಂ.ಎ. | ಪಾಶ್ಚಿಮಾತ್ಯ ರಾಜಕೀಯ ಚಿಂತನೆಗಳು | 07 | 9480376763 |
| 31. | ಡಾ. ಕೃಷ್ಣಪ್ಪ. ಜಿ.ನಿಂಬಕ್ಕನವರ್ | ಸಹಾಯಕ ಪ್ರಾಧ್ಯಾಪಕರು | ಎಂ.ಎ., ಪಿಎಚ್.ಡಿ. | ಅಂತರಾಷ್ಟ್ರೀಯ ಸಂಬಂಧಗಳು | 10 | 9738950068 |
| **ಸಾರ್ವಜನಿಕ ಆಡಳಿತ ವಿಭಾಗ** | | | | | | |
| 32. | ಡಾ. ಹೆಚ್.ಕೆ ಜಗದೀಶ್ ಬಾಬು. | ಸಹಾಯಕ ಪ್ರಾಧ್ಯಾಪಕರು | ಎಂ.ಎ., ಪಿಎಚ್.ಡಿ. | ಸಾರ್ವಜನಿಕ ಆಡಳಿತ | 07 | 9880255118 |
| **ಸಮಾಜಶಾಸ್ತ್ರ ವಿಭಾಗ** | | | | | | |
| 33. | ಡಾ. ಎಚ್.ಆರ್. ಜಯಪಾಲ್ | ಸಹಾಯಕ ಪ್ರಾಧ್ಯಾಪಕರು | ಎಂ.ಎ., ಪಿಎಚ್.ಡಿ. | ಸಮಾಜಶಾಸ್ತ್ರೀಯ ಸಿದ್ಧಾಂತಗಳು | 12 | 7406600034 |
| 34. | ಡಾ. ಸಂತೋಷ್ ನಾಯಕ್ | ಸಹಾಯಕ ಪ್ರಾಧ್ಯಾಪಕರು | ಎಂ.ಎ., ಪಿಎಚ್.ಡಿ. | ಸೋಷಿಯಾಲಜಿ ಆಫ್ ರಿಲೀಜಿಯನ್ | 07 | 9845561946 |
| 35. | ಶ್ರೀಮತಿ. ರಮ್ಯ ಎಸ್. | ಸಹಾಯಕ ಪ್ರಾಧ್ಯಾಪಕರು | ಎಂ.ಎ. | ಕಾನೂನು ಸಮಾಜಶಾಸ್ತ್ರ | 10 | 9036595507 |
| **ಮಾನವಶಾಸ್ತ್ರ ವಿಭಾಗ** | | | | | | |
| 36. | ಡಾ. ಅಪ್ಪಾಜಿ ಗೌಡ | ಸಹಾಯಕ ಪ್ರಾಧ್ಯಾಪಕರು | ಎಂ.ಎ., ಪಿಎಚ್.ಡಿ. | ಮಾನವಶಾಸ್ತ್ರ | 07 | 9740660972 |
| **ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ** | | | | | | |
| 37. | ಡಾ. ತೇಜಸ್ವಿ ನವಿಲೂರು | ಸಹ ಪ್ರಾಧ್ಯಾಪಕರು | ಎಂ.ಎ., ಪಿಎಚ್.ಡಿ. | ವರದಿ ಮತ್ತು ಸಂಪಾದನೆ | 16 | 9844009777 |
| 38. | ಡಾ. ಶೈಲೇಶ್ ರಾಜ್ ಅರಸ್ | ಸಹಾಯಕ ಪ್ರಾಧ್ಯಾಪಕರು | ಎಂ.ಎ., ಪಿಎಚ್.ಡಿ. | ಮಾಧ್ಯಮ ಮತ್ತು ಮಾಧ್ಯಮ ಕಾನೂನು | 19 | 9448672473 |
| 39. | ಡಾ. ಆರ್. ಹೇಮಲತಾ | ಸಹಾಯಕ ಪ್ರಾಧ್ಯಾಪಕರು | ಎಂ.ಎ. | ಜಾಹೀರಾತು & ಸಾರ್ವಜನಿಕ ಸಂಪರ್ಕಗಳು | 07 | 9448672473 |
| **ವಾಣಿಜ್ಯಶಾಸ್ತ್ರ ವಿಭಾಗ** | | | | | | |
| 40. | ಡಾ. ವಿ. ಮಹೇಶ | ಸಹಾಯಕ ಪ್ರಾಧ್ಯಾಪಕರು | ಎಂ.ಕಾಂ., ಪಿಎಚ್.ಡಿ. | ಅಕೌಂಟಿಂಗ್ ಅಂಡ್ ಟ್ಯಾಕ್ಸೇಷನ್ | 12 | 9844667411 |
| 41. | ಡಾ. ಆರ್. ಛಾಯಾ | ಸಹಾಯಕ ಪ್ರಾಧ್ಯಾಪಕರು | ಎಂ.ಕಾಂ., ಪಿಎಚ್.ಡಿ. | ಕಾಸ್ಟ್ ಅಕೌಂಟಿಂಗ್ | 18 | 9980974834 |

| | | | | | | |
|---|---|---|---|---|---|---|
| 42. | ಶ್ರೀಮತಿ. ಉಷಾ | ಸಹಾಯಕ ಪ್ರಾಧ್ಯಾಪಕರು | ಎಂ.ಕಾಂ. | ಅಕೌಂಟಿಂಗ್ ಅಂಡ್ ಟ್ಯಾಕ್ಸೇಷನ್ | 10 | 9164012273 |
| 43. | ಡಾ. ಆರ್. ಸುಕನ್ಯಾ | ಸಹಾಯಕ ಪ್ರಾಧ್ಯಾಪಕರು | ಎಂ.ಕಾಂ. | ಹಣಕಾಸು | 12 | 9945018092 |
| 44. | ಶ್ರೀ. ನವೀನ್ ಜಿ.ವಿ. | ಸಹಾಯಕ ಪ್ರಾಧ್ಯಾಪಕರು | ಎಂ.ಕಾಂ. | ಮಾನವ ಸಂಪನ್ಮೂಲ ಮತ್ತು ವ್ಯಾಪಾರ | 15 | 9945898244 |
| 45. | ಶ್ರೀ. ಕೆ.ಎಸ್. ಶಿವಕುಮಾರ | ಸಹಾಯಕ ಪ್ರಾಧ್ಯಾಪಕರು | ಎಂ.ಕಾಂ. | ಬ್ಯಾಂಕಿಂಗ್ | -- | 9844580688 |
| | | | **ಮನೋವಿಜ್ಞಾನ ವಿಭಾಗ** | | | |
| 46. | ಡಾ. ಎಸ್. ಸುರ್ಮಾ | ಸಹಾಯಕ ಪ್ರಾಧ್ಯಾಪಕರು | ಎಂ.ಎಸ್ಸಿ., ಪಿಎಚ್.ಡಿ. | ಚಿಕಿತ್ಸಕ ಮನೋವಿಜ್ಞಾನ | 13 | 9945112468 |
| 47. | ಡಾ. ಪಿ. ಮಂಜುನಾಥ | ಸಹಾಯಕ ಪ್ರಾಧ್ಯಾಪಕರು | ಎಂ.ಎಸ್ಸಿ., ಪಿಎಚ್.ಡಿ. | ಚಿಕಿತ್ಸಕ ಮನೋವಿಜ್ಞಾನ | 11 | 9535547702 |
| 48. | ಡಾ. ಪಿ. ಮಹದೇವಸ್ವಾಮಿ | ಸಹಾಯಕ ಪ್ರಾಧ್ಯಾಪಕರು | ಎಂ.ಎಸ್ಸಿ., ಪಿಎಚ್.ಡಿ. | ಮನೋರೋಗ ನಿದಾನಶಾಸ್ತ್ರ | 07 | 9880239670 |
| | | | **ಭೂಗೋಳಶಾಸ್ತ್ರ ವಿಭಾಗ** | | | |
| 49. | ಡಾ. ವೈಪಿ. ಚಂದ್ರಶೇಖರ್ | ಸಹಾಯಕ ಪ್ರಾಧ್ಯಾಪಕರು | ಎಂ.ಎ., ಪಿಎಚ್.ಡಿ. | ಭೌತಿಕ ಮತ್ತು ನಗರ ಭೂಗೋಳಶಾಸ್ತ್ರ | 24 | 9900119917 |
| 50. | ಶ್ರೀ. ಸಿ.ಎಸ್. ಮಂಜುನಾಥ | ಸಹಾಯಕ ಪ್ರಾಧ್ಯಾಪಕರು | ಎಂ.ಎಸ್ಸಿ., ಪಿಎಚ್.ಡಿ. | ವ್ಯವಸಾಯ ಭೂಗೋಳಶಾಸ್ತ್ರ | 08 | 8762100678 |
| | | | **ಪರಿಸರ ವಿಜ್ಞಾನ ವಿಭಾಗ** | | | |
| 51. | ಡಾ. ಜಿ. ಎಸ್. ಚಂದ್ರಶೇಖರ್ | ಸಹಾಯಕ ಪ್ರಾಧ್ಯಾಪಕರು | ಎಂ.ಎಸ್ಸಿ., ಪಿಎಚ್.ಡಿ. | ಪರಿಸರ | 10 | 8197242133 |
| 52. | ಡಾ. ಟಿ. ಎಸ್. ಹರ್ಷ | ಸಹಾಯಕ ಪ್ರಾಧ್ಯಾಪಕರು | ಎಂ.ಎಸ್ಸಿ., ಪಿಎಚ್.ಡಿ. | ಘನತ್ಯಾಜ್ಯ ನಿರ್ವಹಣೆ | 14 | 9449178802 |
| | | | **ಗಣಕ ವಿಜ್ಞಾನ ವಿಭಾಗ** | | | |
| 53. | ಡಾ. ಸುಮತಿ ರಾಮಕೃಷ್ಣ ಗೌಡ | ಸಹಾಯಕ ಪ್ರಾಧ್ಯಾಪಕರು | ಎಂ.ಎಸ್ಸಿ. ಪಿಎಚ್.ಡಿ. | ಮೊಬೈಲ್ ಅಡಾಕ್ ನೆಟ್‌ವರ್ಕ್ಸ್ | 21 | 9743363293 |
| 54. | ಶ್ರೀಮತಿ. ಸುನೀತ | ಸಹಾಯಕ ಪ್ರಾಧ್ಯಾಪಕರು | ಎಂ.ಎಸ್ಸಿ. (ಪಿ.ಎಚ್.ಡಿ) | ಕಂಪ್ಯೂಟರ್ ನೆಟ್‌ವರ್ಕ್ಸ್ | 16 | 9480326709 |
| 55. | ಶ್ರೀಮತಿ. ಡಿ.ಎನ್. ಭವ್ಯ | ಸಹಾಯಕ ಪ್ರಾಧ್ಯಾಪಕರು | ಎಂ.ಟೆಕ್. (ಪಿ.ಎಚ್.ಡಿ) | ಬಯೋ ಮ್ಯಾಟ್ರಿಕ್ಸ್ | 11 | 8722384750 |
| 56. | ಡಾ. ಡಿ.ಎಮ್ ಮಹೇಶ | ಸಹಾಯಕ ಪ್ರಾಧ್ಯಾಪಕರು | ಎಂ.ಸಿ.ಎ. ಪಿ.ಎಚ್.ಡಿ | ಇಮೇಜ್ ಪ್ರೋಸಸಿಂಗ್ | 11 | 9901249102 |

| | | | | | | |
|---|---|---|---|---|---|---|
| **ಮಾಹಿತಿ ವಿಜ್ಞಾನ ವಿಭಾಗ** | | | | | | |
| 57 | ಶ್ರೀಮತಿ ಬಿ.ಎಸ್. ರಶ್ಮಿ | ಸಹಾಯಕ ಪ್ರಾಧ್ಯಾಪಕರು | ಎಂ.ಎಸ್ಸಿ. ಎಂ.ಫಿಲ್. (ಪಿ.ಎಚ್.ಡಿ) | ಪ್ಯಾಟರ್ನ್ ರೆಕಗ್ನಿಷನ್ | 14 | 9880983081 |
| 58. | ಕುಮಾರಿ. ನಂದಿನಿ ಹೆಚ್.ಎಂ. | ಸಹಾಯಕ ಪ್ರಾಧ್ಯಾಪಕರು | ಎಂ.ಎಸ್ಸಿ. (ಪಿ.ಎಚ್.ಡಿ) | ಇಮೇಜ್ ಪ್ರೋಸಸಿಂಗ್ | 11 | 8123745149 |
| **ಶಿಕ್ಷಣ ವಿಭಾಗ** | | | | | | |
| 59. | ಡಾ. ಎನ್. ಲಕ್ಷ್ಮೀ | ಸಹ ಪ್ರಾಧ್ಯಾಪಕರು | ಎಂ.ಎಡ್., ಪಿಎಚ್.ಡಿ. | ಶಿಕ್ಷಣ ಸಮಾಜಶಾಸ್ತ್ರ | 27 | 9886917952 |
| 60. | ಡಾ. ಷಣ್ಮುಖ | ಸಹಾಯಕ ಪ್ರಾಧ್ಯಾಪಕರು | ಎಂ.ಎಡ್., ಪಿಎಚ್.ಡಿ. | ಶಿಕ್ಷಣ ತತ್ತ್ವಶಾಸ್ತ್ರ | 28 | 9481438829 |
| 61. | ಡಾ. ಆರ್. ನಾಗೇಂದ್ರಕುಮಾರ್ | ಸಹಾಯಕ ಪ್ರಾಧ್ಯಾಪಕರು | ಎಂ.ಎಡ್., ಪಿಎಚ್.ಡಿ. | ವಿಶೇಷ ಶಿಕ್ಷಣ | 27 | 9980737186 |
| 62. | ಡಾ. ಎಂ. ಜಾನಕಿ | ಪ್ರಾಧ್ಯಾಪಕರು | ಎಂ.ಎಡ್., ಪಿಎಚ್.ಡಿ. | ಶಿಕ್ಷಣಮನೋವಿಜ್ಞಾನ | 22 | 9945024886 |
| 63. | ಡಾ. ಶೈಲಜಾ ಪಿ. ಶಾನಭಾಗ್ | ಸಹಾಯಕ ಪ್ರಾಧ್ಯಾಪಕರು | ಎಂ.ಎಡ್., ಪಿಎಚ್.ಡಿ. | ಶಿಕ್ಷಣ ತಂತ್ರಜ್ಞಾನ | 23 | 9483760099 |
| 64. | ಡಾ. ಆರ್. ಶರಣಮ್ಮ | ಸಹಾಯಕ ಪ್ರಾಧ್ಯಾಪಕರು | ಎಂ.ಎಡ್., ಪಿಎಚ್.ಡಿ. | ಶೈಕ್ಷಣಿಕಆಡಳಿತ | 25 | 9739970866 |
| 65. | ಡಾ. ಎನ್. ಕೃಷ್ಣಪ್ಪ | ಸಹಾಯಕ ಪ್ರಾಧ್ಯಾಪಕರು | ಎಂ.ಎಡ್., ಪಿಎಚ್.ಡಿ. | ಸಂಶೋಧನಾ ವಿಧಾನ | 22 | 9964574944 |
| **ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗ** | | | | | | |
| 66. | ಡಾ. ಎನ್.ಆರ್. ಶಿಲ್ಪ ರಾಣಿ | ಸಹಾಯಕ ಪ್ರಾಧ್ಯಾಪಕರು | ಎಮ್.ಎಲ್.ಐ. ಎಸ್ಸಿ., ಪಿಎಚ್.ಡಿ. | ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ | 07 | 8884052680 |
| **ಇತರ ಶೈಕ್ಷಣಿಕ ಸಿಬ್ಬಂದಿ – ಗ್ರಂಥಾಲಯ** | | | | | | |
| 67. | ಡಾ. ಕೆ. ಪ್ರಕಾಶ್ | ಗ್ರಂಥಪಾಲಕರು | ಎಮ್.ಎಲ್.ಐ.ಎಸ್ಸಿ. ಪಿಎಚ್.ಡಿ. | ಗ್ರಂಥಾಲಯ | -- | 9448066788 |
| 67. | ಡಾ. ಎಂ. ಗೋಪಾಲಸ್ವಾಮಿ | ಉಪ ಗ್ರಂಥಪಾಲಕರು | ಎಮ್.ಎಲ್.ಐ.ಎಸ್ಸಿ. ಪಿಎಚ್.ಡಿ. | ಗ್ರಂಥಾಲಯ | -- | 9035125501 |
| 68. | ಡಾ. ವಿ. ಶೀಲ | ಸಹಾಯಕ ಗ್ರಂಥಪಾಲಕರು | ಎಮ್.ಎಲ್.ಐ.ಎಸ್ಸಿ. ಪಿಎಚ್.ಡಿ. | ಗ್ರಂಥಾಲಯ | -- | 9341024224 |

| **ಬೋಧಕ ವರ್ಗದ ವೇತನ ಶ್ರೇಣಿ** | | |
|---|---|---|
| ಸಹಾಯಕ ಪ್ರಾಧ್ಯಾಪಕರು / ಸಹಾಯಕ ಗ್ರಂಥಪಾಲಕರು | ಸಹ ಪ್ರಾಧ್ಯಾಪಕರು / ಉಪ ಗ್ರಂಥಪಾಲಕರು | ಪ್ರಾಧ್ಯಾಪಕರು / ಗ್ರಂಥಪಾಲಕರು |
| 57,700–1,82,400 Level 10 | 1.31.400–2.17,400 Level 13 A | 1,44,200–2,18,200 Level 14 |

| **ಸಂದರ್ಶಕ ಅಧ್ಯಾಪಕರು** | | | |
|---|---|---|---|
| 01. | ಡಾ. ಗುರುರಾಜರಾವ್ | ಎಂ.ಎ., ಪಿಎಚ್.ಡಿ. | ಸಂಸ್ಕೃತ |

## 4. ಸಂಪರ್ಕಿಸಬಹುದಾದ ಇತರ ಅಧಿಕಾರಿಗಳು

| ಕ್ರ.ಸಂ. | ಅಧಿಕಾರಿಗಳು | ಹುದ್ದೆ | ಯಾವ ಮಾಹಿತಿಗಾಗಿ | ದೂರವಾಣಿ ಸಂಖ್ಯೆ |
|---|---|---|---|---|
| 01 | ಡಾ. ಎಂ.ಎಸ್. ರಮಾನಂದ್ | ನಿರ್ದೇಶಕರು (ಪ್ರವೇಶಾತಿ) | ಪ್ರವೇಶಾತಿ | 9686215043 |
| 02 | ಡಾ. ನಿರಂಜನ್ ರಾಜ್ ಎಸ್ | CIQA ನಿರ್ದೇಶಕರು | CIQA | 9886859350 |
| 03 | ಶ್ರೀಮತಿ ಸುನೀತ | ಐ.ಟಿ. ನಿರ್ದೇಶಕರು | ಐ.ಟಿ | 9448066788 |
| 04. | ಡಾ. ಎನ್. ಕೃಷ್ಣಪ್ಪ | ವಿಶೇಷಾಧಿಕಾರಿ | ಮೌಲ್ಯಮಾಪನ | 9964574944 |
| 05 | ಡಾ., ಸಿ. ಅನಿತಾ | ವಿಶೇಷಾಧಿಕಾರಿ | ಮೌಲ್ಯಮಾಪನ | 9880903740 |
| 06 | ಡಾ. ಟಿ.ಎಸ್. ಹರ್ಷ | ವಿಶೇಷಾಧಿಕಾರಿ | ಮೌಲ್ಯಮಾಪನ | 9449178802 |
| 07 | ಡಾ. ವೈ.ಪಿ. ಚಂದ್ರಶೇಖರ್ | ವಿಶೇಷಾಧಿಕಾರಿ | ಮೌಲ್ಯಮಾಪನ | 9900119917 |
| 08 | ಡಾ. ಪಿ. ಮಂಜುನಾಥ್ | ವಿಶೇಷಾಧಿಕಾರಿ | ಮೌಲ್ಯಮಾಪನ | 9342100239 |
| 09 | ಡಾ. ಟಿ.ಪಿ. ಶಶಿಕುಮಾರ್ | ವಿಶೇಷಾಧಿಕಾರಿ | ಮೌಲ್ಯಮಾಪನ | 9036342507 |
| 10 | ಶ್ರೀ. ಜಿ.ವಿ.ನವೀನ್ | ವಿಶೇಷಾಧಿಕಾರಿ | ಮೌಲ್ಯಮಾಪನ | 9945898244 |
| 11 | ಡಾ. ಶಶಿಕುಮಾರ್ | ಸಂಯೋಜನಾಧಿಕಾರಿ | ಮೌಲ್ಯಮಾಪನ | 9036342507 |
| 12 | ಡಾ. ವೀರೇಂದ್ರಕುಮಾರ್ | ಸಂಯೋಜನಾಧಿಕಾರಿ | ಮೌಲ್ಯಮಾಪನ | 9901963999 |
| 13 | ಡಾ. ಡಿ.ಎಂ. ಮಹೇಶ್ | ನೋಡಲ್ ಆಫೀಸರ್ | ಐ.ಟಿ | 9901249102 |
| 14 | ಶ್ರೀ. ಸಿ.ಪಿ. ಶಿವಕುಮಾರ್ | ಉಪ ಕುಲಸಚಿವ | ಮೌಲ್ಯಮಾಪನ | 9845862927 |
| 15 | ಶ್ರೀ ಎನ್.ಬಿ. ಕುಮಾರ್ | ಉಪಕುಲಸಚಿವ | ಮೌಲ್ಯಮಾಪನ | 8123519330 |
| 17 | ಡಾ. ಎನ್. ಜಿ. ರಾಜು | ವಿಶೇಷಾಧಿಕಾರಿ | ಯು.ಜಿ.ಸಿ ಘಟಕ | 9448267255 |
| 18. | ಡಾ. ಹೆಚ್.ರಾಜೇಶ್ವರಿ | ನಿರ್ದೇಶಕರು | ಆರ್. & ಡಿ. ಘಟಕ | 9845528357 |
| 19 | ಡಾ. ಪಿ. ಮಣಿ | ವಿಶೇಷಾಧಿಕಾರಿ | ಪ.ಜಾ. / ಪ.ಪಂ ಘಟಕ | 9945734313 |
| 20 | ಶ್ರೀ. ಆರ್. ಚಲುವಮೂರ್ತಿ | ಉಪಕುಲಸಚಿವ | ಡೀನ್ (ಅ.ಕೇ.) | 9980544074 |
| 21 | ಶ್ರೀ. ರಮೇಶ್ ಜೆ. | ಉಪ ಕುಲಸಚಿವ | ಡೀನ್ (ಶೈಕ್ಷಣಿಕ) | 8050471907 |
| 22 | ಡಾ. ಎಂ. ಗೋಪಾಲಸ್ವಾಮಿ | ಉಪ ಗ್ರಂಥಪಾಲಕ | ಗ್ರಂಥಾಲಯ | 9035125501 |
| 23 | ಶ್ರೀ ಮಂಜು ಪ್ರಸಾದ್ | ಉಪಕುಲಸಚಿವ | ಪ್ರವೇಶಾತಿ | 9449065168 |
| 24 | ಶ್ರೀ ನಂದೀಶ್ ಎಂ.ವಿ | ಉಪ ಕುಲಸಚಿವ | ಸಾಮಾನ್ಯ ವಿಭಾಗ | 9844010407 |
| 25 | ಶ್ರೀ ಚಂದ್ರೇಶ್ | ಉಪ ಕುಲಸಚಿವ | ಸ್ವಯಂ ಕಲಿಕಾ ಸಾಮಗ್ರಿ | 9844242616 |
| 26 | ಡಾ॥ ಜೆ.ಎಸ್. ಚಂದ್ರ ಶೇಖರ್ | ಸಂಯೋಜನಾಧಿಕಾರಿ | ಕೌಶಲ್ಯಾಭಿವೃದ್ದಿ | 8197242133 |
| 27 | ಶ್ರೀಮತಿ ರಶ್ಮಿ | ಸಂಯೋಜನಾಧಿಕಾರಿ | ಯುಜಿಸಿ–ಮೂಕ್ಸ್(MOOCS) | 9880983081 |
| 28 | ಡಾ. ಹೇಮಲತಾ | ಸಂಯೋಜನಾಧಿಕಾರಿ | ಜ್ಞಾನವಾಣಿ | 9535282063 |

ವಿದ್ಯಾರ್ಥಿಗಳ ಸಮಸ್ಯೆಗಳು ಮೇಲೆ ತಿಳಿಸಿರುವ ಅಧಿಕಾರಗಳ ಮಟ್ಟದಲ್ಲಿ ಪರಿಹಾರವಾಗದಿದ್ದರೆ ಮಾತ್ರ ಕುಲಸಚಿವ ಮತ್ತು ಕುಲಸಚಿವ (ಪರೀಕ್ಷಾಂಗ) ರವರನ್ನುಸಂಪರ್ಕಿಸಬಹುದಾಗಿದೆ.

## 5. ವಿದ್ಯಾರ್ಥಿಗಳಿಗೆ ಮುಖ್ಯ ಸೂಚನೆಗಳು

**ಬಿ.ಎ., ಬಿ.ಕಾಂ. ಮತ್ತು ಬಿ.ಲಿಬ್. ಐ. ಎಸ್‌ಸಿ. ಗೆ ಪ್ರವೇಶ ಬಯಸುವ ಅಭ್ಯರ್ಥಿಗಳು ಅರ್ಜಿಯನ್ನು ಸಲ್ಲಸುವ ಮೊದಲು ಈ ಕೆಳಗಿನ ಸೂಚನೆಗಳನ್ನು ಗಮನಿಸಬೇಕು.**

- ಅಭ್ಯರ್ಥಿಗಳು ಆನ್ ಲೈನ್ ಅರ್ಜಿ ಮತ್ತು ಇ–ಪೇ ಚಲನ್ ಅನ್ನು ಯಶಸ್ವಿಯಾಗಿ ಸಲ್ಲಿಸಿದ ನಂತರ, ಚಲನ್ ಮೂಲಕ ಶಿಕ್ಷಣಕ್ರಮಕ್ಕೆ ನಿಗದಿ ಪಡಿಸಿರುವ ಶುಲ್ಕವನ್ನು ಪಾವತಿಸಬೇಕು.
- ನಾಲ್ಕು ಪ್ರತಿಗಳ ಚಲನ್ ಕಚೇರಿಯಲ್ಲಿ ಲಭ್ಯವಿರುತ್ತದೆ. ಅದನ್ನು ಬಳಸಿ ಶುಲ್ಕವನ್ನು ಜಮಾ ಮಾಡಬೇಕು.
- ಕರಾಮುವಿಯ http://www.ksoumysuru.ac.in. ಅಧಿಕೃತ ಜಾಲತಾಣದಿಂದ ಪಡೆಯದ ಯಾವುದೇ ಚಲನ್ ಅನ್ನು ಮಾನ್ಯ ಮಾಡುವುದಿಲ್ಲ.
- ಕರಾಮುವಿಯ ಅಧಿಕೃತ ಜಾಲತಾಣದಿಂದ ಪಡೆಯದ ಯಾವುದೇ ಅರ್ಜಿಯನ್ನು ಮಾನ್ಯ ಮಾಡುವುದಿಲ್ಲ.
- ಅಭ್ಯರ್ಥಿಗಳು ದೇಶದಾದ್ಯಂತ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ (ಎಸ್.ಬಿ.ಐ) ಯಾವುದೇ ಶಾಖೆಯಲ್ಲಿ ನಿಗದಿಪಡಿಸಿದ ಶುಲ್ಕವನ್ನು ಚಲನ್ ಮೂಲಕ ಪಾವತಿಸಬೇಕು. ಚೆಕ್/ಮನಿ ಆರ್ಡರ್/ ಇಂಡಿಯನ್ ಪೋಸ್ಟಲ್ ಆರ್ಡರ್ ಇವುಗಳನ್ನು ಸ್ವೀಕರಿಸುವುದಿಲ್ಲ.
- ಪ್ರವೇಶದ ಅರ್ಜಿಯೊಂದಿಗೆ ಈ ಕೆಳಕಂಡ ದಾಖಲಾತಿಗಳನ್ನು ಸಲ್ಲಿಸಬೇಕು. (ಛಾಯಾಪ್ರತಿ)
    - ಎಸ್.ಎಸ್.ಎಲ್.ಸಿ ಅಂಕ ಪಟ್ಟಿ
    - ಪಿಯುಸಿ ಅಂಕಪಟ್ಟಿ ಅಥವಾ ತತ್ಸಮಾನ ಅಂಕಪಟ್ಟಿ
    - ಸ್ನಾತಕೋತ್ತರ ಪದವಿ ಕಾರ್ಯಕ್ರಮಕ್ಕೆ ಪದವಿ ಅಂಕಪಟ್ಟಿಗಳು
    - ಎಸ್.ಸಿ./ಎಸ್.ಟಿ. ಜಾತಿ ದೃಢೀಕರಣ ಪತ್ರ. (ಅನ್ವಯವಾದರೆ ಮಾತ್ರ)
    - ಬಿ.ಪಿ.ಎಲ್ ಕಾರ್ಡ್ ಪ್ರತಿ (ಮಹಿಳಾ ಅಭ್ಯರ್ಥಿಗಳಿಗೆ)
    - ಆದಾಯ ದೃಢೀಕರಣ ಪತ್ರ. (ಅನ್ವಯವಾದರೆ ಮಾತ್ರ)
    - ಆಧಾರ್ ಕಾರ್ಡ್
    - ಎರಡು ಸ್ಟ್ಯಾಂಪ್ ಅಳತೆಯ ಹಾಗೂ ಎರಡು ಪಾಸ್‌ಪೋರ್ಟ್ ಅಳತೆಯ ಭಾವಚಿತ್ರಗಳು ಅರ್ಜಿ ಪರಿಶೀಲನೆ ವೇಳೆ ಸಲ್ಲಿಸುವುದು.
- ಭರ್ತಿ ಮಾಡಿದ ಚಲನ್ ಮತ್ತು ಶುಲ್ಕ ಪಾವತಿಸಿದ ಚಲನ್‌ನೊಂದಿಗೆ (ವಿವಿ ಪ್ರತಿ), ನೀವು ಆಯ್ಕೆ ಮಾಡಿಕೊಂಡ **ಪ್ರಾದೇಶಿಕ ನಿರ್ದೇಶಕರಿಗೆ** ಅಥವಾ **ನಿರ್ದೇಶಕರು (ಪ್ರವೇಶಾತಿ), ಕ.ರಾ.ಮು.ವಿ ಕೇಂದ್ರ ಕಚೇರಿ, ಮೈಸೂರು** ಇಲ್ಲಿಗೆ, ಕಡೆಯ ದಿನಾಂಕದ ಒಳಗೆ ಸಲ್ಲಿಸುವುದು.
- ಅಭ್ಯರ್ಥಿಗಳು ಆಯ್ಕೆ ಮಾಡಿಕೊಂಡ ಪ್ರಾದೇಶಿಕ ಕೇಂದ್ರದ ಕೋಡ್ ಸಂಖ್ಯೆ ಮತ್ತು ಕಲಿಕಾರ್ಥಿ ಸಹಾಯ ಕೇಂದ್ರದ ಕೋಡ್ ಸಂಖ್ಯೆಯನ್ನು ಅರ್ಜಿಯಲ್ಲಿ ಬರೆಯತಕ್ಕದ್ದು. (ಪ್ರಾದೇಶಿಕ ಕೇಂದ್ರಗಳ ವಿವರಗಳನ್ನು **ಅನುಬಂಧ–II** ರಲ್ಲಿ ನೀಡಿದೆ).
- ದಾಖಲಾತಿಗಳ ಪರಿಶೀಲನೆಯನ್ನು ನೀವು ಅರ್ಜಿ ಸಲ್ಲಿಸಿದ ಪ್ರಾದೇಶಿಕ ಕೇಂದ್ರಗಳಲ್ಲಿ / ಕೇಂದ್ರ ಕಛೇರಿ, ಮೈಸೂರು ಇಲ್ಲಿ ನಡೆಸಲಾಗುವುದು. ಅರ್ಜಿ ಪರಿಶೀಲಿಸುವ ವೇಳೆಯಲ್ಲಿ ಅಭ್ಯರ್ಥಿಗಳು ಸಂಬಂಧಿಸಿದ ಮೂಲ ದಾಖಲೆಗಳನ್ನು ಹಾಜರುಪಡಿಸಬೇಕು.
- ವಿಶ್ವವಿದ್ಯಾನಿಲಯದ ಅನುಮೋದನೆ ನಂತರವೇ ಪ್ರವೇಶಾತಿಯು ಸಂಪೂರ್ಣಗೊಳ್ಳುತ್ತದೆ.

- ವಿವಿಧ ಶಿಕ್ಷಣ ಕ್ರಮಗಳಿಗೆ ಪ್ರವೇಶಾತಿ ಪಡೆದ ಸಂದರ್ಭದಲ್ಲಿಯೇ ಅಧ್ಯಯನ ಸಾಮಗ್ರಿಗಳನ್ನು ಸ್ವೀಕರಿಸಬೇಕು.
- ವಿದ್ಯಾರ್ಥಿಗಳು ತಮಗೆ ಅಗತ್ಯವಾದ ಸ್ಪಷ್ಟೀಕರಣಗಳನ್ನು ವಿದ್ಯಾರ್ಥಿ ಸಹಾಯ ಕೇಂದ್ರದಿಂದ ಪಡೆದುಕೊಳ್ಳಬಹುದು.
  - ಡಾ. ಎಂ.ಎಸ್. ರಮಾನಂದ್, 7899854594 ಡಾ.ಎ.ವೈ. ವಿಜಯಕುಮಾರ್: 98453–63573 ಮತ್ತು ಡಾ.ಎ.ಎಸ್.ಮಹದೇವ 99024–45879, 97422–85347, ಸ್ಥಿರ ದೂರವಾಣಿ ಸಂಖ್ಯೆ 0821–2519950 ಇವರುಗಳು ಸಹಾಯ ಕೇಂದ್ರದ ಅಧಿಕಾರಿಗಳಾಗಿರುತ್ತಾರೆ.
- ವಿದ್ಯಾರ್ಥಿಗಳು ಒಂದಕ್ಕಿಂತ ಹೆಚ್ಚು ಪದವಿಗೆ ಪ್ರವೇಶಾತಿ ಹೊಂದಿದರೆ ವಿಶ್ವವಿದ್ಯಾನಿಲಯವು, ವಿದ್ಯಾರ್ಥಿಯು ಎರಡನೇ ಬಾರಿ ಪಡೆದ ಪ್ರವೇಶಾತಿಯನ್ನು ರದ್ದುಪಡಿಸುತ್ತದೆ.
- ಪ್ರವೇಶಾತಿ ಬಯಸುವ ಎಸ್.ಸಿ./ಎಸ್.ಟಿ. ಅಭ್ಯರ್ಥಿಗಳು ಸಮಾಜಕಲ್ಯಾಣ ಇಲಾಖೆಯಿಂದ ಶುಲ್ಕ ಮರುಭರಿಕೆ ಪಡೆಯಲು ಅರ್ಹರಾಗಿರುತ್ತಾರೆ. ಅವರ ಕುಟುಂಬದ ವಾರ್ಷಿಕ ಆದಾಯವು ಸರ್ಕಾರವು ಕಾಲಕಾಲಕ್ಕೆ ನಿಗದಿ ಪಡಿಸಿದ ಮಿತಿಯಲ್ಲಿರಬೇಕು. **(ನೋಡಿ ಅನುಬಂಧ–IV)**.
- ಬಿ.ಪಿ.ಎಲ್. ಕುಟುಂಬಕ್ಕೆ ಸೇರಿದ ಮಹಿಳಾ ಅಭ್ಯರ್ಥಿಗಳು ಬೋಧನಾ ಶುಲ್ಕದಲ್ಲಿ ಶೇಕಡ 25%ರಷ್ಟು ರಿಯಾಯಿತಿ ಪಡೆಯಲು ಅರ್ಹರಾಗಿರುತ್ತಾರೆ. ಇದಕ್ಕಾಗಿ ಪ್ರವೇಶ ಸಮಯದಲ್ಲಿ ಸಮಕ್ಷಮ ಪ್ರಾಧಿಕಾರದಿಂದ ಪಡೆದಿರುವ ಬಿ.ಪಿ.ಎಲ್. ಕಾರ್ಡ್‌ನ್ನು ಹಾಜರುಪಡಿಸಬೇಕು.
- ಗುರುತಿನ ಚೀಟಿಯನ್ನು ವಿದ್ಯಾರ್ಥಿಗಳಿಗೆ ಪ್ರವೇಶವು ಅಂಗೀಕೃತವಾದ ನಂತರ ನೀಡಲಾಗುವುದು. ಗುರುತಿನ ಚೀಟಿಯನ್ನು ಶಿಕ್ಷಣ ಕ್ರಮ ಮುಗಿಯುವವರೆಗೂ ಹೊಂದಿರಬೇಕು. ವಿಶ್ವವಿದ್ಯಾನಿಲಯದೊಂದಿಗೆ ವ್ಯವಹರಿಸುವ ಎಲ್ಲಾ ಸಂದರ್ಭಗಳಲ್ಲಿಯೂ ವಿದ್ಯಾರ್ಥಿಯು ತನ್ನ ನೊಂದಣಿ ಸಂಖ್ಯೆ ಶಿಕ್ಷಣ ಕ್ರಮವನ್ನು ಬರೆಯಬೇಕು.
- ಶಿಕ್ಷಣಕ್ರಮಗಳಿಗೆ ಸೇರುವ ವಿದ್ಯಾರ್ಥಿಗಳು ಅವರ ನಡತೆ ಮತ್ತು ಪ್ರಗತಿ ಬಗ್ಗೆ ಸಂಬಂಧಪಟ್ಟಂತೆ, ಪ್ರಾದೇಶಿಕ ನಿರ್ದೇಶಕರು ಅಥವಾ ಸಹಾಯಕ ಕುಲಸಚಿವರು ಕರಾಮುವಿ, ಮೈಸೂರು ರವರಿಗೆ ವಿ.ವಿ. ನಿಗದಿಪಡಿಸಿರುವ ಮುಚ್ಚಳಿಕೆ ಪತ್ರವನ್ನು ಭರ್ತಿಮಾಡಿ ಸಲ್ಲಿಸಬೇಕು.
- ಅಭ್ಯರ್ಥಿಗಳು ಸ್ನಾತಕ ಕಾರ್ಯಕ್ರಮ ಮತ್ತು ಡಿಪ್ಲೊಮ/ಸರ್ಟಿಫಿಕೇಟ್ ಕಾರ್ಯಕ್ರಮವನ್ನು ಏಕಕಾಲದಲ್ಲಿ ಓದಬಹುದು
- ಅಭ್ಯರ್ಥಿಗಳು ಕಾಲಕಾಲಕ್ಕೆ ವಿಶ್ವವಿದ್ಯಾನಿಲಯವು ಹೊರಡಿಸುವ ನಿಯಮ ನಿಬಂಧನೆಗಳನ್ನು ಪಾಲಿಸತಕ್ಕದ್ದು.
- ವಿದ್ಯಾರ್ಥಿಯು ತನ್ನ ವಯಸ್ಸು / ವಿದ್ಯಾರ್ಹತೆ ಮೊದಲಾದವುಗಳಿಗೆ ಸಂಬಂಧಿಸಿದಂತೆ ತಪ್ಪು ಮಾಹಿತಿಗಳನ್ನು ನೀಡಿದರೆ ಅಥವಾ ಯಾವುದಾದರೂ ನಿಯಮಗಳನ್ನು ಉಲ್ಲಂಘಿಸಿದರೆ ಶಿಕ್ಷಣ ಕ್ರಮದಿಂದ ಹಾಗೂ ನೊಂದಣಿಯಿಂದ ಹೊರಗಿಡಲಾಗುವುದು, ಕಾನೂನು ಪ್ರಕಾರ ದಂಡ ವಿಧಿಸಲಾಗುವುದು ಹಾಗೂ ಶಿಸ್ತು ಕ್ರಮ ಕೈಗೊಳ್ಳಲಾಗುವುದು.
- ಅಪೂರ್ಣ ಅರ್ಜಿಗಳನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸಲಾಗುವುದು.
- ಎಲ್ಲಾ ನ್ಯಾಯ ವ್ಯಾಜ್ಯಗಳು ಮೈಸೂರು ನಗರ ನ್ಯಾಯಾಲಯಗಳ ವ್ಯಾಪ್ತಿಗೆ ಮಾತ್ರ ಬರುತ್ತವೆ.
- ವಿವಿಧ ಶಿಕ್ಷಣ ಕ್ರಮಗಳ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಚಿನ್ನದ ಪದಕ ಮತ್ತು ನಗದು ಪುರಸ್ಕಾರ ನೀಡಲಾಗುವುದು. (ನೋಡಿ **ಅನುಬಂಧ–V)**
- ಸಾಮಾನ್ಯ ಶುಲ್ಕ ವಿವರಗಳು (ನೋಡಿ **ಅನುಬಂಧ–VI)**

## 6. ಶಿಕ್ಷಣ ಕ್ರಮಗಳು

**ಅ. ಸ್ನಾತಕಶಿಕ್ಷಣ ಕ್ರಮ**

| ಕ್ರ.ಸಂ. | ಶಿಕ್ಷಣ ಕ್ರಮ | ಅವಧಿ | ಕ್ರಮ | ಶ್ರೇಯಾಂಕ |
|---|---|---|---|---|
| 1 | ಬಿ,ಎ, | 3 ವರ್ಷಗಳು | ವಾರ್ಷಿಕ | 100 |
| 2 | ಬಿ.ಕಾಂ | 3 ವರ್ಷಗಳು | ವಾರ್ಷಿಕ | 100 |
| 3 | ಬಿ.ಲಿಬ್.ಐ.ಎಸ್ಸಿ | 1 ವರ್ಷ | ವಾರ್ಷಿಕ | 32 |

**ಆ. ಸ್ನಾತಕೋತ್ತರ ಶಿಕ್ಷಣ ಕ್ರಮ**

| ಕ್ರ.ಸಂ. | ಶಿಕ್ಷಣ ಕ್ರಮ | ಅವಧಿ | ಕ್ರಮ | ಶ್ರೇಯಾಂಕ |
|---|---|---|---|---|
| 1 | ಎಂ.ಎ. ಕನ್ನಡ | 2 ವರ್ಷಗಳು | ವಾರ್ಷಿಕ | 70 |
| 2 | ಎಂ.ಎ. ಇಂಗ್ಲಿಷ್ | 2 ವರ್ಷಗಳು | ವಾರ್ಷಿಕ | 70 |
| 3 | ಎಂ.ಎ. ಹಿಂದಿ | 2 ವರ್ಷಗಳು | ವಾರ್ಷಿಕ | 70 |
| 4 | ಎಂ.ಎ. ಉರ್ದು | 2 ವರ್ಷಗಳು | ವಾರ್ಷಿಕ | 70 |
| 5 | ಎಂ.ಎ. ಇತಿಹಾಸ | 2 ವರ್ಷಗಳು | ವಾರ್ಷಿಕ | 70 |
| 6 | ಎಂ.ಎ. ಅರ್ಥಶಾಸ್ತ್ರ | 2 ವರ್ಷಗಳು | ವಾರ್ಷಿಕ | 70 |
| 7 | ಎಂ.ಎ. ರಾಜ್ಯಶಾಸ್ತ್ರ | 2 ವರ್ಷಗಳು | ವಾರ್ಷಿಕ | 70 |
| 8 | ಎಂ.ಎ. ಸಾರ್ವಜನಿಕ ಆಡಳಿತ | 2 ವರ್ಷಗಳು | ವಾರ್ಷಿಕ | 70 |
| 9 | ಎಂ.ಎ. ಸಮಾಜಶಾಸ್ತ್ರ | 2 ವರ್ಷಗಳು | ವಾರ್ಷಿಕ | 70 |
| 10 | ಎಂ.ಎ. ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಶಾಸ್ತ್ರ | 2 ವರ್ಷಗಳು | ವಾರ್ಷಿಕ | 70 |
| 11 | ಎಂ.ಎ. ಪ್ರಾಚೀನ ಇತಿಹಾಸ ಮತ್ತು ಪುರಾತತ್ವ | 2 ವರ್ಷಗಳು | ವಾರ್ಷಿಕ | 70 |
| 12 | ಎಂ.ಕಾಂ | 2 ವರ್ಷಗಳು | ವಾರ್ಷಿಕ | 70 |
| 13 | ಎಂ.ಎಸ್ಸಿ ಪರಿಸರ ವಿಜ್ಞಾನ | 2 ವರ್ಷಗಳು | ಸೆಮಿಸ್ಟರ್ | 72 |
| 14 | ಎಂ.ಲಿಬ್.ಐ.ಎಸ್ಸಿ. | 1 ವರ್ಷ | ವಾರ್ಷಿಕ | 36 |

## 7. ಪ್ರವೇಶಾತಿ ಶುಲ್ಕ ಸಂರಚನೆ

ವಿಶ್ವವಿದ್ಯಾನಿಲಯವು ವಿವಿಧ ಶಿಕ್ಷಣ ಕ್ರಮಗಳಿಗೆ ಕೆಳಕಂಡಂತೆ ಶುಲ್ಕ ಸಂರಚನೆಯನ್ನು ನಿಗದಿಪಡಿಸಿದೆ.

**ಬಿ.ಎ./ಬಿ.ಕಾಂ ಶುಲ್ಕ ವಿವರ**

| ವಿವರಗಳು | ಪ್ರಥಮ ವರ್ಷ | ದ್ವಿತೀಯ ವರ್ಷ | ತೃತೀಯ ವರ್ಷ |
|---|---|---|---|
| ಪ್ರವೇಶ ಪ್ರಕ್ರಿಯೆ ಶುಲ್ಕ | 300 | – | – |
| ನೋಂದಣಿ ಶುಲ್ಕ | 400 | – | – |
| ಬೋಧನಾ ಶುಲ್ಕ | 3400 | 3200 | 3700 |
| ಕೌಶಲ್ಯ ಅಭಿವೃದ್ಧಿ ಶುಲ್ಕ | 500 | 500 | 500 |
| ಮನೋವಿಜ್ಞಾನ ವಿದ್ಯಾರ್ಥಿಗಳಿಗೆ ಪ್ರಯೋಗಾಲಯ ಶುಲ್ಕ | | | 800 |

| | | | |
|---|---|---|---|
| ಒಟ್ಟು | 4600/– | 3700/– | 5000/– |

**ಪ್ರವೇಶಾತಿ ಶುಲ್ಕ ಬಿ.ಲಿಬ್.ಐ.ಎಸ್ಸಿ.**

| ವಿವರಗಳು | ಶುಲ್ಕ (ರೂ.) |
|---|---|
| ಪ್ರವೇಶ ಪ್ರಕ್ರಿಯೆ ಶುಲ್ಕ | 500 |
| ನೋಂದಣಿ ಶುಲ್ಕ | 600 |
| ಬೋಧನಾ ಶುಲ್ಕ | 5400 |
| ಕೌಶಲ್ಯ ಅಭಿವೃದ್ಧಿ ಶುಲ್ಕ | 500 |
| **ಒಟ್ಟು** | **7000/–** |

**ಶಿಕ್ಷಣ ಕ್ರಮಗಳ ಶ್ರೇಯಾಂಕ ಪದ್ಧತಿ**

ವಿಶ್ವವಿದ್ಯಾನಿಲಯವು ತನ್ನ ಶಿಕ್ಷಣ ಕ್ರಮಗಳಿಗೆ ಶ್ರೇಯಾಂಕ ಪದ್ಧತಿಯನ್ನು ಅನುಸರಿಸುತ್ತಿದೆ. ಪ್ರತಿ ಶ್ರೇಯಾಂಕವು 30 ಗಂಟೆಗಳ ಅಧ್ಯಯನ ಅವಧಿಯನ್ನು ಹೊಂದಿದ್ದು, ಇದರಲ್ಲಿ ಕಲಿಕಾ ಚಟುವಟಿಕೆಗಳು ಅಂದರೆ ಸ್ವಕಲಿಕಾ ಸಾಮಗ್ರಿಯನ್ನು ಅಧ್ಯಯನ ಮಾಡುವುದು, ಸಮಾಲೋಚನ ಕಾರ್ಯಕ್ರಮದಲ್ಲಿ ಭಾಗವಹಿಸುವುದು. ಸಂಪರ್ಕ ಕಾರ್ಯಕ್ರಮಗಳಿಗೆ ಹಾಜರಾಗುವುದು. ನಿಬಂಧಗಳನ್ನು ಬರೆಯುವುದು, ಗ್ರಂಥಾಲಯ / ಶಿಕ್ಷಣ ಸಂಸ್ಥೆಗಳಿಗೆ ಕೈಗಾರಿಕೆಗಳಿಗೆ ಭೇಟಿ ಮಾಡುವುದು, ದೃಶ್ಯ–ಶ್ರವ್ಯ ಮಾಧ್ಯಮದಲ್ಲಿರುವ ಕಲಿಕಾ ಸಾಮಗ್ರಿಗಳೊಡನೆ ಸಂವಹಿಸುವುದು, ಪರೀಕ್ಷೆಗಳಿಗೆ ಸಿದ್ಧರಾಗುವುದನ್ನು ಒಳಗೊಂಡಿದೆ. ನಾಲ್ಕು ಶ್ರೇಯಾಂಕದ ಪತ್ರಿಕೆಯು 120 ಗಂಟೆಗಳ ಅಧ್ಯಯನ ಅವಧಿಯನ್ನು ಒಳಗೊಂಡಿದೆ. ಆರು ಶ್ರೇಯಾಂಕದ ಪತ್ರಿಕೆಯು 180 ಗಂಟೆಗಳ ಅಧ್ಯಯನ ಗಂಟೆಗಳನ್ನು ಹೊಂದಿದೆ. ಈ ಶ್ರೇಯಾಂಕ ಪದ್ಧತಿಯು ವಿದ್ಯಾರ್ಥಿಗಳಿಗೆ ತಮ್ಮ ಶೈಕ್ಷಣಿಕ ಪ್ರಯತ್ನಗಳು ಎಷ್ಟು ಅವಧಿಯದ್ದಾಗಿರಬೇಕು ಎಂಬುದನ್ನು ಅರ್ಥಮಾಡಿಕೊಳ್ಳಲು ಸಹಕರಿಸುತ್ತದೆ. ಹಾಗೂ ತಮ್ಮ ಶಿಕ್ಷಣ ಕ್ರಮವನ್ನು ಫಲಪ್ರದವಾಗಿ ಪೂರ್ಣಗಳಿಸಲು ಸನ್ನದ್ದುಗೊಳಿಸುತ್ತದೆ.

**ಪದವಿಯನ್ನು ಪೂರ್ಣಗೊಳಿಸಲು ಗರಿಷ್ಠ ಅವಧಿ:**

ಸಾಧಾರಣವಾಗಿ ಕಲಿಕಾರ್ಥಿಯು ಪದವಿಯನ್ನು ವಿಶ್ವನಿದ್ಯಾನಿಲಯವು ನಿಗದಿ ಪಡಿಸಿದ ಸಮಯದಲ್ಲಿ ಪೂರ್ಣಗೊಳಿಸಬೇಕು. ಆದಾಗ್ಯೂ ಒಬ್ಬ ವಿದ್ಯಾರ್ಥಿ ಬೇರೆ ಬೇರೆ ಕಾರಣಗಳಿಂದಾಗಿ ಕನಿಷ್ಟ ಅವಧಿಯಲ್ಲಿ ಪದವಿಯನ್ನು ಪೂರ್ಣಗೊಳಿಸಲು ಸಾಧ್ಯವಾಗದಿದ್ದಲ್ಲಿ ಅಂತಹವರಿಗೆ ನಿಗದಿತ ಅವಧಿಗಿಂತ ಎರಡು ವರ್ಷ ಹೆಚ್ಚಿನ ಸಮಯಾವಕಾಶವನ್ನು ನೀಡಲಾಗುವುದು. ಇದರ ಸಾಮಾನ್ಯ ಸಮೀಕರಣವೆಂದರೆ N+2 ವರ್ಷಗಳು (N= ಶಿಕ್ಷಣ ಕ್ರಮವನ್ನು ಪೂರ್ಣಗೊಳಿಸಲು ನೀಡಿರುವ ಕನಿಷ್ಟ / ಸಾಮಾನ್ಯ ಅವಧಿ). ಈ ಸೂತ್ರವು ಕಾಲಕಾಲಕ್ಕೆ ಯುಜಿಸಿ ನಿಯಮಗಳಂತೆ ಪರಿಷ್ಕರಣೆಗೊಳ್ಳುತ್ತದೆ.

## 8.ಪದವಿ ಶಿಕ್ಷಣಕ್ರಮಗಳು – ಬಿ.ಎ., ಬಿ.ಕಾಂ., ಬಿ.ಲಿಬ್.ಐ.ಎಸ್ಸಿ.

### 8.1 ಬಿ.ಎ. ಶಿಕ್ಷಣ ಕ್ರಮ

ಅ. **ಅವಧಿ** : ಮೂರು ವರ್ಷಗಳು

ಆ. **ಪ್ರವೇಶಾರ್ಹತೆ**

- ಕರ್ನಾಟಕ ರಾಜ್ಯದ ಪ್ರಿಯೂನಿವರ್ಸಿಟಿ ಶಿಕ್ಷಣ ಮಂಡಲಿ ನಡೆಸುವ ಎರಡು ವರ್ಷಗಳ ಪ್ರಿಯೂನಿವರ್ಸಿಟಿ ಪರೀಕ್ಷೆಯಲ್ಲಿ ತೇರ್ಗಡೆಯಾದ ಅಭ್ಯರ್ಥಿಗಳು

**ಅಥವಾ**

ಮೇಲೆ ಸೂಚಿಸಿದ ಪ್ರಿಯೂನಿವರ್ಸಿಟಿ ಪರೀಕ್ಷೆಗೆ ಸಮಾನವೆಂದು ಪರಿಗಣಿಸಿರುವ ಇತರ ಯಾವುದೇ ಪರೀಕ್ಷೆಯಲ್ಲಿ ತೇರ್ಗಡೆಯಾದ ಅಭ್ಯರ್ಥಿಗಳು.

- 12 ವರ್ಷಗಳ ಶಾಲಾ ಶಿಕ್ಷಣವನ್ನು ಯಶಸ್ವಿಯಾಗಿ ಪೂರೈಸಿರುವ ಇತರ ರಾಜ್ಯಗಳ ಅಭ್ಯರ್ಥಿಗಳು (10 + 2 ಅಥವಾ 11 + 1 ಅಥವಾ 12 ವರ್ಷಗಳ ಶಿಕ್ಷಣಾ ನಂತರದ ಹೈಯರ್ ಸೆಕೆಂಡರಿ ಪರೀಕ್ಷೆ) ಶಿಶುವಿಹಾರ ಶಿಕ್ಷಣ ಹೊರತುಪಡಿಸಿ

**ಅಥವಾ**

- ಕರ್ನಾಟಕ ಸರ್ಕಾರದ ವೃತ್ತಿ ಶಿಕ್ಷಣ ಇಲಾಖೆ ನಡೆಸುವ ವೃತ್ತಿ ಶಿಕ್ಷಣಕ್ರಮದ ಪ್ರಿಯೂನಿವರ್ಸಿಟಿ ಪರೀಕ್ಷೆಯಲ್ಲಿ ತೇರ್ಗಡೆಯಾದ ಅಭ್ಯರ್ಥಿಗಳು.

**ಇ. ಬೋಧನಾ ಮಾಧ್ಯಮ**

ಆಯಾ ಭಾಷೆಗಳನ್ನು ಹೊರತುಪಡಿಸಿ ಬಿ.ಎ ಕೋರ್ಸ್‌ಗಳ ಬೋಧನಾ ಮಾಧ್ಯಮ ಕನ್ನಡ ಮತ್ತು ಇಂಗ್ಲಿಷ್ ಮಾಧ್ಯಮದಲ್ಲಿರುತ್ತದೆ. ವಿದ್ಯಾರ್ಥಿಗಳು ಪರೀಕ್ಷೆಯನ್ನು ಕನ್ನಡ ಅಥವಾ ಇಂಗ್ಲಿಷ್ ಮಾಧ್ಯಮದಲ್ಲಿ ಬರೆಯಲು ಅವಕಾಶವಿರುತ್ತದೆ.

**ಈ. ಕಾರ್ಯಕ್ರಮ ಸಂರಚನೆ**

ಕಲಿಕಾರ್ಥಿಗಳು ಪದವಿ ಶಿಕ್ಷಣ ಕ್ರಮದಲ್ಲಿ ಎರಡು ಭಾಷೆಗಳನ್ನು ಮತ್ತು ಮೂರು ಐಚ್ಛಿಕ ವಿಷಯಗಳನ್ನು ತಮ್ಮ ಆಯ್ಕೆಗೆ ಅನುಸಾರ ಆರಿಸಿಕೊಳ್ಳಬೇಕು.

- **ಭಾಷೆಗಳು:**ಕನ್ನಡ, ಇಂಗ್ಲಿಷ್, ಹಿಂದಿ, ಸಂಸ್ಕೃತ, ಉರ್ದು, ತೆಲುಗು
- **ಐಚ್ಛಿಕ ವಿಷಯಗಳು:** ಕನ್ನಡ, ಇಂಗ್ಲಿಷ್, ಹಿಂದಿ, ಉರ್ದು, ಇತಿಹಾಸ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಸಾರ್ವಜನಿಕ ಆಡಳಿತ, ಸಮಾಜ ಶಾಸ್ತ್ರ, ಮಾನವ ಶಾಸ್ತ್ರ, ಶಿಕ್ಷಣಶಾಸ್ತ್ರ,ಮನೋವಿಜ್ಞಾನ, ಭೂಗೋಳಶಾಸ್ತ್ರ
- 

**ಪ್ರಥಮ ಬಿ.ಎ.**

| | | | | | |
|---|---|---|---|---|---|
| ಭಾಗ-1 | 1 | ಕೋರ್ಸ್-1 | ಭಾಷೆ 1, 2 | ಪ್ರತಿಯೊಂದು4 ಶ್ರೇಯಾಂಕಗಳು | 8 ಶ್ರೇಯಾಂಕಗಳು |
| ಭಾಗ-2 | 2 | ಭಾರತದ ಸಂವಿಧಾನ, ಮಾನವ ಹಕ್ಕುಗಳು ಮತ್ತು ಪರಿಸರ ಅಧ್ಯಯನ(ಐ.ಸಿ.ಹೆಚ್.ಆರ್.ಇ.ಎಸ್) | | | 6 ಶ್ರೇಯಾಂಕಗಳು |
| ಭಾಗ-3 | 3 | ಕೋರ್ಸ್-1 | ಐಚ್ಛಿಕ 1,2&3 | ಪ್ರತಿಯೊಂದು 6 ಶ್ರೇಯಾಂಕಗಳು | 18 ಶ್ರೇಯಾಂಕಗಳು |
| | | | | | 32 ಶ್ರೇಯಾಂಕಗಳು |

**ದ್ವಿತೀಯ ಬಿ.ಎ.**

| | | | | | |
|---|---|---|---|---|---|
| ಭಾಗ- 1 | 1 | ಕೋರ್ಸ್ 2 | ಭಾಷೆ 1,2 | ಪ್ರತಿಯೊಂದು 4 ಶ್ರೇಯಾಂಕಗಳು | 8 ಶ್ರೇಯಾಂಕಗಳು |
| ಭಾಗ- 2 | 2 | ಗಣಕಯಂತ್ರದ ಮೂಲ ತತ್ವಗಳ ಅಳವಡಿಕೆ (ಎಫ್.ಸಿ.ಎ) | | | 6 ಶ್ರೇಯಾಂಕಗಳು |
| ಭಾಗ-3 | 3 | ಕೋರ್ಸ್ 2 | ಐಚ್ಛಿಕ1,2 &3 | ಪ್ರತಿಯೊಂದು 6 ಶ್ರೇಯಾಂಕಗಳು | 18 ಶ್ರೇಯಾಂಕಗಳು |
| | | | | | 32 ಶ್ರೇಯಾಂಕಗಳು |

**ತೃತೀಯ ಬಿ.ಎ.**

| | | | | | |
|---|---|---|---|---|---|
| ಭಾಗ- 3 | 1 | ಕೋರ್ಸ್3, 4, 5 | ಐಚ್ಛಿಕ-1 | ಪ್ರತಿಯೊಂದು4 ಶ್ರೇಯಾಂಕಗಳು | 12 ಶ್ರೇಯಾಂಕಗಳು |
| | 2 | ಕೋರ್ಸ್3, 4, 5 | ಐಚ್ಛಿಕ-2 | ಪ್ರತಿಯೊಂದು4 ಶ್ರೇಯಾಂಕಗಳು | 12 ಶ್ರೇಯಾಂಕಗಳು |
| | 3 | ಕೋರ್ಸ್3, 4, 5 | ಐಚ್ಛಿಕ-3 | ಪ್ರತಿಯೊಂದು4 ಶ್ರೇಯಾಂಕಗಳು | 12 ಶ್ರೇಯಾಂಕಗಳು |

| | |
|---|---|
| | 36 ಶ್ರೇಯಾಂಕಗಳು |

**ಬಿ.ಎ. ಶಿಕ್ಷಣ ಕ್ರಮಗಳ ಭಾಷಿಕ ಪತ್ರಿಕೆಗಳು**

| ಭಾಷೆಗಳು | ವರ್ಷ | ಕೋರ್ಸ್ ಕೋಡ್ | ಪತ್ರಿಕೆಯ ಹೆಸರು |
|---|---|---|---|
| ಕನ್ನಡ | 1 | ಬಿಕೆಎನ್–01 | ಹೊಸಗನ್ನಡ ಕವಿತೆಗಳು, ನಾಟಕ, ಪ್ರಬಂಧ, ಆಡಳಿತ ಕನ್ನಡ |
| | 2 | ಬಿಕೆಎನ್–02 | ಪ್ರಾಚೀನ ಕನ್ನಡ ಕಾವ್ಯ, ಸಣ್ಣ ಕಥೆಗಳು, ಗದ್ಯಸಂಪದ, ವಿಮರ್ಶೆ. |
| ಇಂಗ್ಲಿಷ್ | 1 | ಬಿಇಎನ್–01 | Poetry, Prose, Fiction and Grammar |
| | 2 | ಬಿಇಎನ್–02 | Poetry, Prose, Drama and Grammar |
| ಹಿಂದಿ | 1 | ಬಿಎಚ್ಎನ್–01 | ಪದ್ಯ, ಗದ್ಯ, ಕಥಾ ಸಂಕಲನ, ವ್ಯಾಕರಣ ಮತ್ತು ಅನುವಾದ |
| | 2 | ಬಿಎಚ್ಎನ್–02 | ಪದ್ಯ, ನಾಟಕ, ಕಾದಂಬರಿ, ವ್ಯಾಕರಣ ಮತ್ತು ಅನುವಾದ |
| ಉರ್ದು | 1 | ಬಿಯುಆರ್–01 | ಪದ್ಯ, ಗದ್ಯ, ಕಾದಂಬರಿ ಮತ್ತು ವ್ಯಾಕರಣ |
| | 2 | ಬಿಯುಆರ್–02 | ಪದ್ಯ, ಗದ್ಯ, ನಾಟಕ ಮತ್ತು ಅನುವಾದ |
| ಸಂಸ್ಕೃತ | 1 | ಬಿಎಸ್ಎನ್–01 | ಪದ್ಯ, ಗದ್ಯ, ಭಾಷಾ ರಚನೆ ಅಂಶಗಳು |
| | 2 | ಬಿಎಸ್ಎನ್–02 | ನಾಟಕ, ಚಂಪೂ ಮತ್ತು ಅವಿಸ್ತರ ಪಠ್ಯ, ಭಾಷಾ ರಚನೆ ಅಂಶಗಳು |
| ತೆಲುಗು | 1 | ಬಿಟಿಯು–01 | ಪ್ರಾಚೀನ ಕಾವ್ಯ, ಗದ್ಯ, ತೆಲುಗು ಸಾಹಿತ್ಯ ಚರಿತ್ರೆ, ಭಾಷಾ ರಚನೆ ಅಂಶಗಳು |
| | 2 | ಬಿಟಿಯು–02 | ಆಧುನಿಕ ಕಾವ್ಯ, ಕಥನ ಸಾಹಿತ್ಯ, ನಾಟಕ, ಭಾಷೆ ಮತ್ತು ಸಂಸ್ಕೃತಿ |

**ಐಚ್ಛಿಕ**

| ಐಚ್ಛಿಕ ವಿಷಯಗಳು | ವರ್ಷ | ಕೋರ್ಸ್ ಕೋಡ್ | ಪತ್ರಿಕೆಯ ಹೆಸರು |
|---|---|---|---|
| ಕನ್ನಡ | 1 | ಬಿಕೆಎನ್–11 | ಕನ್ನಡ ಸಾಹಿತ್ಯ ಚರಿತ್ರೆ |
| | 2 | ಬಿಕೆಎನ್–22 | ನಡುಗನ್ನಡ ಮತ್ತು ಹೊಸಗನ್ನಡ ಪಠ್ಯಗಳು |
| | 3 | ಬಿಕೆಎನ್–33 | ಛಂದಸ್ಸು ಮತ್ತು ಹಳಗನ್ನಡ ಪಠ್ಯಗಳು |
| | | ಬಿಕೆಎನ್–34 | ಭಾರತೀಯ ಕಾವ್ಯ ಮೀಮಾಂಸೆ ಮತ್ತು ಸಾಹಿತ್ಯ ವಿಮರ್ಶೆಯ ತತ್ತ್ವಗಳು |
| | | ಬಿಕೆಎನ್–35 | ಹಳಗನ್ನಡ ವ್ಯಾಕರಣ ಮತ್ತು ಕನ್ನಡ ಭಾಷೆಯ ಚರಿತ್ರೆ |
| ಇಂಗ್ಲೀಷ್ | 1 | ಬಿಇಎನ್–11 | Poetry, Prose, Fiction and Drama |
| | 2 | ಬಿಇಎನ್–22 | Poetry, Drama and Fiction |
| | 3 | ಬಿಇಎನ್–33 | Poetry, Drama and Fiction |
| | | ಬಿಇಎನ್–34 | Poetry, Drama and Fiction |
| | | ಬಿಇಎನ್–35 | Growth of the English Language Modern English and Study of Literature |
| ಹಿಂದಿ | 1 | ಬಿಎಚ್ಎನ್–11 | ಪದ್ಯ, ಗದ್ಯ, ಕಾದಂಬರಿ, ಸಂಸ್ಮರಣ್ |
| | 2 | ಬಿಎಚ್ಎನ್–22 | ಪದ್ಯ, ನಾಟಕ, ಏಕಾಂಕಿ |
| | 3 | ಬಿಎಚ್ಎನ್–33 | ಹಿಂದಿ ಭಾಷಾ ವಿಜ್ಞಾನ ಮತ್ತು ಹಿಂದಿ ಭಾಷಾ ಚರಿತ್ರೆ |
| | | ಬಿಎಚ್ಎನ್–34 | ಹಿಂದಿ ಸಾಹಿತ್ಯ ಚರಿತ್ರೆ ಮತ್ತು ಹಿಂದಿ ವ್ಯಾಕರಣ |

| | | | |
|---|---|---|---|
| | | ಬಿಎಚ್‌ಎನ್–35 | ಮಧ್ಯಕಾಲೀನ್ ಹಿಂದಿ ಕಾವ್ಯ (ಸುಂದರ ಕಾಂಡ) ಮತ್ತು ರಸ್, ಛಂದ್, ಅಲಂಕಾರ್ |
| ಉರ್ದು | 1 | ಬಿಯುಆರ್–11 | ಪದ್ಯ ಮತ್ತು ಗದ್ಯ |
| | 2 | ಬಿಯುಆರ್–22 | ಪದ್ಯ ಮತ್ತು ಗದ್ಯ |
| | 3 | ಬಿಯುಆರ್–33 | ಉರ್ದು ಭಾಷೆ ಮತ್ತು ಸಾಹಿತ್ಯದ ಇತಿಹಾಸ |
| | | ಬಿಯುಆರ್–34 | ನಾಟಕ ಮತ್ತು ಕಥನ ಸಾಹಿತ್ಯ |
| | | ಬಿಯುಆರ್–35 | ಸಾಹಿತ್ಯ ವಿಮರ್ಶೆ, ಅಲಂಕಾರ ಮತ್ತು ಛಂದಸ್ಸು |
| ಇತಿಹಾಸ | 1 | ಬಿಎಚ್‌ಐ–11 | ಭಾರತದ ಇತಿಹಾಸ ಮತ್ತು ಸಂಸ್ಕೃತಿ(ಕ್ರಿ.ಶ. 1526 ರವರೆಗೆ) |
| | 2 | ಬಿಎಚ್‌ಐ–22 | ಭಾರತದ ಇತಿಹಾಸ ಮತ್ತು ಸಂಸ್ಕೃತಿ (ಕ್ರಿ.ಶ. 1526 ರಿಂದ ಕ್ರಿ.ಶ. 1857 ರವರೆಗೆ) |
| | 3 | ಬಿಎಚ್‌ಐ–33 | ಕರ್ನಾಟಕದ ಇತಿಹಾಸ ಮತ್ತು ಸಂಸ್ಕೃತಿ(ಕ್ರಿ.ಶ. 1336 ರಿಂದ 1956 ರವರೆಗೆ) |
| | | ಬಿಎಚ್‌ಐ–34 | ಆಧುನಿಕ ಜಗತ್ತಿನ ಇತಿಹಾಸ (ಕ್ರಿ.ಶ. 1600 ರಿಂದ 1990 ರವರೆಗೆ) |
| | | ಬಿಎಚ್‌ಐ–35 | ಏಷ್ಯಾದಲ್ಲಿ ವಸಾಹತುಶಾಹಿತ್ವ ಮತ್ತು ರಾಷ್ಟ್ರೀಯತೆ (ವಿಶೇಷವಾಗಿ ಭಾರತಕ್ಕೆ ಸಂಬಂಧಿಸಿದಂತೆ) |
| ಅರ್ಥಶಾಸ್ತ್ರ | 1 | ಬಿಇಸಿ–11 | ಆರ್ಥಿಕ ಸಿದ್ಧಾಂತ |
| | 2 | ಬಿಇಸಿ–22 | ಹಣ, ಬ್ಯಾಂಕಿಂಗ್ ಮತ್ತು ಸಾರ್ವಜನಿಕ ಅರ್ಥಶಾಸ್ತ್ರ |
| | 3 | ಬಿಇಸಿ–33 | ಅಂತಾರಾಷ್ಟ್ರೀಯ ವ್ಯಾಪಾರ ಮತ್ತು ಹಣಕಾಸು |
| | | ಬಿಇಸಿ–34 | ಭಾರತದ ಆರ್ಥಿಕತೆ |
| | | ಬಿಇಸಿ–35 | ಅಭಿವೃದ್ಧಿ ಅರ್ಥಶಾಸ್ತ್ರ |
| ಭಾಷೆಗಳು | ವರ್ಷ | ಕೋರ್ಸ್ ಕೋಡ್ | ಪತ್ರಿಕೆಯ ಹೆಸರು |
| ರಾಜ್ಯಶಾಸ್ತ್ರ | 1 | ಬಿಪಿಎಸ್–11 | ರಾಜಕೀಯ ಸಿದ್ಧಾಂತ |
| | 2 | ಬಿಪಿಎಸ್–22 | ಆಧುನಿಕ ಸರ್ಕಾರಗಳು |
| | 3 | ಬಿಪಿಎಸ್–33 | ಭಾರತ ಸಂವಿಧಾನ ಮತ್ತು ಸರ್ಕಾರ |
| | | ಬಿಪಿಎಸ್–34 | ಸಾರ್ವಜನಿಕ ಆಡಳಿತ |
| | | ಬಿಪಿಎಸ್–35 | ಅಂತಾರಾಷ್ಟ್ರೀಯ ಸಂಬಂಧಗಳು |
| **ಅಥವಾ** | | | |
| ಸಾರ್ವಜನಿಕ ಆಡಳಿತ | 1 | ಬಿಪಿಎ–11 | ಆಧುನಿಕ ಸರ್ಕಾರಗಳ ಸಿದ್ಧಾಂತ ಮತ್ತು ಆಚರಣೆ |
| | 2 | ಬಿಪಿಎ–22 | ಸಾರ್ವಜನಿಕ ಆಡಳಿತದ ತತ್ತ್ವಗಳ ಪರಿಚಯ |
| | 3 | ಬಿಪಿಎ–33 | ಸಾರ್ವಜನಿಕ ಹಣಕಾಸು ಆಡಳಿತ |
| | | ಬಿಪಿಎ–34 | ಆಧುನಿಕ ರಾಜ್ಯಗಳ ಸ್ಥಳೀಯ ಸರ್ಕಾರಗಳು |
| | | ಬಿಪಿಎ–35 | ಭಾರತದ ಸರ್ಕಾರ ಮತ್ತು ಆಡಳಿತ |
| ಸಮಾಜಶಾಸ್ತ್ರ | 1 | ಬಿಎಸ್‌ಓ–11 | ಸಮಾಜಶಾಸ್ತ್ರದ ಭೂಮಿಕೆ |
| | 2 | ಬಿಎಸ್‌ಓ–22 | ಭಾರತೀಯ ಸಮಾಜದ ಅಧ್ಯಯನ |
| | 3 | ಬಿಎಸ್‌ಓ–33 | ಗ್ರಾಮ–ನಗರ ಸಮಾಜಶಾಸ್ತ್ರದ ಅಧ್ಯಯನ |
| | | ಬಿಎಸ್‌ಓ–34 | ಸಾಮಾಜಿಕ ಸಮಸ್ಯೆಗಳ ಅಧ್ಯಯನ |
| | | ಬಿಎಸ್‌ಓ–35 | ಸಾಮಾಜಿಕ ಚಿಂತನೆಯ ಆಚಾರ್ಯರು |
| ಶಿಕ್ಷಣಶಾಸ್ತ್ರ | 1 | ಬಿಇಯು–11 | ಶಿಕ್ಷಣದ ಆಧಾರಗಳು |

| | | | |
|---|---|---|---|
| | 2 | ಬಿಇಯು–22 | ವಿಕಾಸ ಮತ್ತು ಕಲಿಕೆಯ ಮನೋವಿಜ್ಞಾನ |
| | 3 | ಬಿಇಯು–33 | ಪಠ್ಯಕ್ರಮ, ಬೋಧನೆ ಮತ್ತು ಮೌಲ್ಯಮಾಪನ |
| | | ಬಿಇಯು–34 | ಭಾರತದಲ್ಲಿ ಶೈಕ್ಷಣಿಕ ವ್ಯವಸ್ಥೆಗಳು |
| | | ಬಿಇಯು–35 | ಶಿಕ್ಷಣದ ಉದಯೋನ್ಮುಖ ಪ್ರವೃತ್ತಿಗಳು ಮತ್ತು ಸವಾಲುಗಳು |
| ಮನೋ ವಿಜ್ಞಾನ | 1 | ಬಿಪಿವೈ–11 | ಮೂಲ ಮನೋವೈಜ್ಞಾನಿಕ ಪ್ರಕ್ರಿಯೆಗಳು |
| | 2 | ಬಿಪಿವೈ–22 | ಮಾನವ ವಿಕಾಸ |
| | 3 | ಬಿಪಿವೈ–33 | ಸಾಮಾಜಿಕ ಮನೋವಿಜ್ಞಾನ |
| | | ಬಿಪಿವೈ–34 | ಅಪಸಾಮಾನ್ಯ ಮನೋವಿಜ್ಞಾನ |
| | | ಬಿಪಿವೈ–35 | ಮನೋವಿಜ್ಞಾನ ಪ್ರಯೋಗಗಳು |
| ಮಾನವಶಾಸ್ತ್ರ | 1 | ಬಿಎಎನ್–11 | ಮಾನವಶಾಸ್ತ್ರದ ತಳಹದಿ |
| | 2 | ಬಿಎಎನ್–22 | ಸಾಮಾಜಿಕ ಮತ್ತು ಸಾಂಸ್ಕೃತಿಕ ಮಾನವಶಾಸ್ತ್ರ |
| | 3 | ಬಿಎಎನ್–33 | ಜೈವಿಕ ಹಾಗೂ ಪುರಾತತ್ವ ಮಾನವಶಾಸ್ತ್ರ |
| | | ಬಿಎಎನ್–34 | ಮಾನವಶಾಸ್ತ್ರದ ಸಿದ್ಧಾಂತಗಳು |
| | | ಬಿಎಎನ್–35 | ಅನ್ವಯಿಕ ಮಾನವಶಾಸ್ತ್ರ |
| ಭೂಗೋಳ ಶಾಸ್ತ್ರ | 1 | ಬಿಜಿಇ–11 | ಪ್ರಾಕೃತಿಕ ಭೂಗೋಳಶಾಸ್ತ್ರ (ಪ್ರಾಯೋಗಿಕ ಪತ್ರಿಕೆ–1 ನಕಾಶೆಗಳು ಮತ್ತು ಪ್ರಮಾಣ) |
| | 2 | ಬಿಜಿಇ–22 | ಮಾನವ ಭೂಗೋಳಶಾಸ್ತ್ರ ಪ್ರಾಯೋಗಿಕ (ಪತ್ರಿಕೆ–2 ಭೂಸ್ವರೂಪಗಳನ್ನು ಪ್ರತಿನಿಧಿಸುವಿಕೆ) |
| | 3 | ಬಿಜಿಇ–33 | ಭಾರತದ ಭೂಗೋಳಶಾಸ್ತ್ರ |
| | | ಬಿಜಿಇ–34 | ಪ್ರಪಂಚದ ಪ್ರಾದೇಶಿಕ ಭೂಗೋಳಶಾಸ್ತ್ರ |
| | | ಬಿಜಿಇ–35 | ಪ್ರಾಯೋಗಿಕ ಪತ್ರಿಕೆ–3 – ನಕ್ಷ ವಿಕ್ಷೇಪಗಳು<br>ಪ್ರಾಯೋಗಿಕ ಪತ್ರಿಕೆ–4 – ಸಂಖ್ಯಾಶಾಸ್ತ್ರ ಮತ್ತು ನಕಾಶೆಗಳು |

***ಸೂಚನೆ :***

1. ಬಿ.ಎ., ಪದವಿಗೆ ಪ್ರವೇಶ ಪಡೆದ ವಿದ್ಯಾರ್ಥಿಗಳು ಪ್ರಥಮ ಮತ್ತು ದ್ವಿತೀಯ ವರ್ಷಗಳಲ್ಲಿ ಎರಡು ಭಾಷೆಗಳನ್ನು ಮತ್ತು ಮೂರು ಐಚ್ಛಿಕ ವಿಷಯಗಳನ್ನು ಆರಿಸಿಕೊಳ್ಳತಕ್ಕದು. ಭಾರತದ ಸಂವಿಧಾನ, ಮಾನವ ಹಕ್ಕುಗಳು ಮತ್ತು ಪರಿಸರ ಅಧ್ಯಯನ ಮತ್ತು ಗಣಕಯಂತ್ರದ ಮೂಲ ತತ್ವಗಳ ಅಳವಡಿಕೆ (ಎಫ್.ಸಿ.ಎ) ಇವುಗಳನ್ನು ಕಡ್ಡಾಯವಾಗಿ ಓದಬೇಕು.
2. ವಿದ್ಯಾರ್ಥಿಗಳು ರಾಜ್ಯಶಾಸ್ತ್ರ ಅಥವಾ ಸಾರ್ವಜನಿಕ ಆಡಳಿತ ಇವೆರಡರಲ್ಲಿ ಒಂದನ್ನು ಐಚ್ಛಿಕವಾಗಿ ಆರಿಸಿಕೊಳ್ಳಬೇಕು. ಇವೆರಡನ್ನೂ ಐಚ್ಛಿಕ ವಿಷಯಗಳನ್ನು ಆಯ್ಕೆ ಮಾಡಿಕೊಳ್ಳಲು ವಿದ್ಯಾರ್ಥಿಗಳಿಗೆ ಅವಕಾಶವಿಲ್ಲ.

**8.2 ಬಿ.ಕಾಂ ಶಿಕ್ಷಣಕ್ರಮ**

**ಅ.ಅವಧಿ** : 3 ವರ್ಷಗಳು

**ಆ.ಪ್ರವೇಶಾರ್ಹತೆ**

- ಕರ್ನಾಟಕ ರಾಜ್ಯ ಪ್ರಿಯೂನಿವರ್ಸಿಟಿ ಶಿಕ್ಷಣ ಮಂಡಲಿ ನಡೆಸುವ ಎರಡು ವರ್ಷಗಳ ಪ್ರಿಯೂನಿವರ್ಸಿಟಿ ಪರೀಕ್ಷೆಯಲ್ಲಿ ತೇರ್ಗಡೆಯಾದ ಅಭ್ಯರ್ಥಿಗಳು

**ಅಥವಾ**

ಮೇಲೆ ಸೂಚಿಸಿದ ಪ್ರಿಯೂನಿವರ್ಸಿಟಿ ಪರೀಕ್ಷೆಗೆ ಸಮಾನವೆಂದು ಪರಿಗಣಿಸಿರುವ ಇತರ ಯಾವುದೇ ಪರೀಕ್ಷೆಯಲ್ಲಿ ತೇರ್ಗಡೆಯಾದ ಅಭ್ಯರ್ಥಿಗಳು.

- 12 ವರ್ಷಗಳ ಶಾಲಾ ಶಿಕ್ಷಣವನ್ನು ಯಶಸ್ವಿಯಾಗಿ ಪೂರೈಸಿರುವ ಇತರ ರಾಜ್ಯಗಳ ಅಭ್ಯರ್ಥಿಗಳು (10 + 2 ಅಥವಾ 11 + 1 ಅಥವಾ 12 ವರ್ಷಗಳ ಶಿಕ್ಷಣಾ ನಂತರದ ಹೈಯರ್ ಸೆಕೆಂಡರಿ ಪರೀಕ್ಷೆ) ಶಿಶುವಿಹಾರ ಶಿಕ್ಷಣ ಹೊರತುಪಡಿಸಿ

**ಅಥವಾ**

ಕರ್ನಾಟಕ ಸರ್ಕಾರದ ವೃತ್ತಿ ಶಿಕ್ಷಣ ಇಲಾಖೆ ನಡೆಸುವ ವೃತ್ತಿ ಶಿಕ್ಷಣದ ಪ್ರಿಯೂನಿವರ್ಸಿಟಿ ಪರೀಕ್ಷೆಯಲ್ಲಿ ಸಂಬಂಧಪಟ್ಟ ವಿಷಯಗಳನ್ನು ಅಧ್ಯಯನ ಮಾಡಿ ತೇರ್ಗಡೆಯಾದ ಅಭ್ಯರ್ಥಿಗಳು.

**ಎರಡನೇ ವರ್ಷದ ಬಿ.ಕಾಂ ಗೆ ನೇರ ಪ್ರವೇಶಾತಿ ತಾಂತ್ರಿಕ ಶಿಕ್ಷಣ ವಿಭಾಗ, ಕರ್ನಾಟಕ ಸರ್ಕಾರ ಇವರು ನಡೆಸುವ ಕಮರ್ಶಿಯಲ್ ಅಥವಾ ಸೆಕ್ರೆಟರೀಯಲ್ ಪ್ರಾಕ್ಟೀಸ್ ಎಂಬ ಮೂರು ವರ್ಷದ ಡಿಪ್ಲೊಮೊದಲ್ಲಿ ಉತ್ತೀರ್ಣರಾಗಿರುವ ಅಭ್ಯರ್ಥಿಗಳು ಎರಡನೇ ವರ್ಷದ ಬಿ.ಕಾಂ ಗೆ ನೇರ ಪ್ರವೇಶಾತಿ ಪಡೆಯಬಹುದಾಗಿದೆ. ಅದಾಗ್ಯೂ ಅವರು ಮೊದಲನೇ ವರ್ಷದ ಭಾಷಾ ಪತ್ರಿಕೆಗಳು ಹಾಗೂ ICHRES ಪತ್ರಿಕೆಯಲ್ಲಿ ಉತ್ತೀರ್ಣರಾಗಬೇಕು. ನೇರ ಪ್ರವೇಶಾತಿಗೆ ಹೆಚ್ಚುವರಿ ಶುಲ್ಕ ರೂ 3.000/-**

**ಇ. ಬೋಧನಾ ಮಾಧ್ಯಮ**

ಬಿ.ಕಾಂ ಕೋರ್ಸ್‌ಗಳ ಬೋಧನಾ ಮಾಧ್ಯಮ ಇಂಗ್ಲಿಷ್‌ನಲ್ಲಿ ಮಾತ್ರ ಇರುತ್ತದೆ. ಸಂಸ್ಕೃತ ಭಾಷೆಗೆ ಸಂಬಂಧಿಸಿದಂತೆ ಕಲಿಕಾ ಸಾಮಗ್ರಿ ಕನ್ನಡ ಮಾಧ್ಯಮದಲ್ಲಿ ಮಾತ್ರ ಇರುತ್ತದೆ. ವಿದ್ಯಾರ್ಥಿಗಳು ಪರೀಕ್ಷೆಯನ್ನು ಕನ್ನಡ ಅಥವಾ ಇಂಗ್ಲಿಷ್ ಮಾಧ್ಯಮದಲ್ಲಿ ಬರೆಯಲು ಅವಕಾಶವಿರುತ್ತದೆ.

**ಈ. ಬಿ.ಕಾಂ ಪದವಿ ಶಿಕ್ಷಣಕ್ರಮ**

ಕಲಿಕಾರ್ಥಿಗಳು ಎರಡು ಭಾಷೆಗಳನ್ನು ಆಯ್ಕೆ ಮಾಡಿಕೊಳ್ಳಬೇಕು ಮತ್ತು ಇತರೆ ಕಡ್ಡಾಯ ವಿಷಯಗಳನ್ನು ಅಧ್ಯಯನ ಮಾಡಬೇಕು.

| **ಪ್ರಥಮ ಬಿ.ಕಾಂ** | | | |
|---|---|---|---|
| ಭಾಗ- 1 | ಭಾಷೆ 1, 2 | ಪ್ರತಿಯೊಂದು 4 ಶ್ರೇಯಾಂಕಗಳು | 8 ಶ್ರೇಯಾಂಕಗಳು |
| ಭಾಗ- 2 | ಭಾರತದ ಸಂವಿಧಾನ, ಮಾನವ ಹಕ್ಕುಗಳು ಮತ್ತು ಪರಿಸರ ಅಧ್ಯಯನ | | 6 ಶ್ರೇಯಾಂಕಗಳು |
| ಭಾಗ-3 | ಐಚ್ಛಿಕ 1,2&3 | ಪ್ರತಿಯೊಂದು 6 ಶ್ರೇಯಾಂಕಗಳು | 18 ಶ್ರೇಯಾಂಕಗಳು |
| | | | 32 ಶ್ರೇಯಾಂಕಗಳು |

| **ದ್ವಿತೀಯ ಬಿ.ಕಾಂ.** | | | |
|---|---|---|---|
| ಭಾಗ- 1 | ಭಾಷೆ 3 & 4 | ಪ್ರತಿಯೊಂದು 4 ಶ್ರೇಯಾಂಕಗಳು | 8 ಶ್ರೇಯಾಂಕಗಳು |
| ಭಾಗ- 2 | ಗಣಕಯಂತ್ರದ ಮೂಲ ತತ್ವಗಳ ಅಳವಡಿಕೆ (ಎಫ್.ಸಿ.ಎ) | | 6 ಶ್ರೇಯಾಂಕಗಳು |
| ಭಾಗ-3 | ಐಚ್ಛಿಕ 4,5&6 | ಪ್ರತಿಯೊಂದು 6 ಶ್ರೇಯಾಂಕಗಳು | 18 ಶ್ರೇಯಾಂಕಗಳು |
| | | | 32 ಶ್ರೇಯಾಂಕಗಳು |

**ತೃತೀಯ ಬಿ.ಕಾಂ.**

| | | | |
|---|---|---|---|
| ಭಾಗ - 3 | ಕೋರ್ಸ್ 7,8,9 | ಪ್ರತಿಯೊಂದಕ್ಕು 4 ಶ್ರೇಯಾಂಕಗಳು | 12 ಶ್ರೇಯಾಂಕಗಳು |
| | ಕೋರ್ಸ್ 10,11,12 | ಪ್ರತಿಯೊಂದಕ್ಕು 4 ಶ್ರೇಯಾಂಕಗಳು | 12 ಶ್ರೇಯಾಂಕಗಳು |
| | ಕೋರ್ಸ್ 13,14,15 | ಪ್ರತಿಯೊಂದಕ್ಕು 4 ಶ್ರೇಯಾಂಕಗಳು | 12 ಶ್ರೇಯಾಂಕಗಳು |
| | | | 36 ಶ್ರೇಯಾಂಕಗಳು |

**ಅ. ಬಿ.ಕಾಂ., ಶಿಕ್ಷಣ ಕ್ರಮದ ಭಾಷಿಕ ಪತ್ರಿಕೆಗಳು**

| ಭಾಷೆಗಳು | ವರ್ಷ | ಕೋರ್ಸ್‌ಕೋಡ್ | ಪತ್ರಿಕೆಯ ಹೆಸರು |
|---|---|---|---|
| ಕನ್ನಡ | 1 | ಬಿಕೆಎನ್–01 | ಆಧುನಿಕ ಕನ್ನಡ ಕಾವ್ಯ, ನಾಟಕ, ಕಾದಂಬರಿ, ಆಡಳಿತ ಕನ್ನಡ |
| | 2 | ಬಿಕೆಎನ್–03 | ಪ್ರಾಚೀನ ಕನ್ನಡ ಕಾವ್ಯ, ಸಣ್ಣ ಕಥೆಗಳು ಮತ್ತು ಗದ್ಯ ಸಂಪದ, ವಿಮರ್ಶೆ |
| ಇಂಗ್ಲಿಷ್ | 1 | ಬಿಇಎನ್–01 | Poetry, Prose, Fiction and Grammar |
| | 2 | ಬಿಇಎನ್–03 | Commercial English & Drama |
| ಹಿಂದಿ | 1 | ಬಿಎಚ್‌ಎನ್–01 | ಪದ್ಯ, ಗದ್ಯ, ಕಥಾ ಸಂಕಲನ, ವ್ಯಾಕರಣ ಮತ್ತು ಅನುವಾದ |
| | 2 | ಬಿಎಚ್‌ಎನ್–03 | ಏಕಾಂಕಿ, ಪ್ರಯೋಜನ್ ಮೂಲಕ್ ಹಿಂದಿ, ಸಂಕ್ಷಿಪ್ತೀಕರಣ್ ವ್ಯಾಕರಣ ಮತ್ತು ಅನುವಾದ |
| ಉರ್ದು | 1 | ಬಿಯುಆರ್–01 | ಪದ್ಯ, ಗದ್ಯ, ಕಾದಂಬರಿ ಸಾಹಿತ್ಯ ಮತ್ತು ವ್ಯಾಕರಣ |
| | 2 | ಬಿಯುಆರ್–03 | ಅವಿಸ್ತರ ಪಠ್ಯ, ವಾಣಿಜ್ಯ ಪತ್ರ ವ್ಯವಹಾರ ಮತ್ತು ಸಾರಾಂಶ ಲೇಖನ |
| ಸಂಸ್ಕೃತ | 1 | ಬಿಎಸ್‌ಎನ್–01 | ಪದ್ಯ, ಗದ್ಯ, ಭಾಷಾ ರಚನೆ ಅಂಶಗಳು |
| | 2 | ಬಿಎಸ್‌ಎನ್–03 | ನಾಟಕ, ಅವಿಸ್ತರ ಪಠ್ಯ, ವಾಣಿಜ್ಯ ಸಂಸ್ಕೃತ, ಭಾಷಾ ರಚನೆ ಅಂಶಗಳು |
| ತೆಲುಗು | 1 | ಬಿಟಿಯು–01 | ಪ್ರಾಚೀನ ಕಾವ್ಯ, ಗದ್ಯ, ತೆಲುಗು ಸಾಹಿತ್ಯ ಚರಿತ್ರೆ, ಭಾಷಾ ರಚನೆ ಅಂಶಗಳು |
| | 2 | ಬಿಟಿಯು–03 | ಆಧುನಿಕ ಕಾವ್ಯ, ಗದ್ಯ, ವಾಣಿಜ್ಯ ತೆಲುಗು I & II |

**ಆ. ಬಿ.ಕಾಂ., ಐಚ್ಛಿಕ ಪತ್ರಿಕೆಗಳು**

| ಭಾಷೆಗಳು | ಪತ್ರಿಕೆಗಳು | ಕೋರ್ಸ್ ಕೋಡ್ | ಪತ್ರಿಕೆಯ ಹೆಸರು |
|---|---|---|---|
| ಪ್ರಥಮ ವರ್ಷ | 1 | ಬಿಸಿಒ–11 | ವ್ಯವಹಾರ ಸಂಘಟನೆ ಮತ್ತು ನಿರ್ವಹಣೆ |
| | 2 | ಬಿಸಿಒ–12 | ಭಾರತೀಯ ವ್ಯವಹಾರ ಪರಿಸರ |
| | 3 | ಬಿಸಿಒ–13 | ಹಣಕಾಸು ಲೆಕ್ಕಶಾಸ್ತ್ರ–I |
| ದ್ವಿತೀಯ ವರ್ಷ | 4 | ಬಿಸಿಒ–24 | ಹಣಕಾಸು ಮಾರುಕಟ್ಟೆ ಮತ್ತು ಸೇವೆಗಳು |
| | 5 | ಬಿಸಿಒ–25 | ಕಂಪನಿಯ ಕಾನೂನು |
| | 6 | ಬಿಸಿಒ–26 | ಹಣಕಾಸು ಲೆಕ್ಕಶಾಸ್ತ್ರ–II |
| ತೃತೀಯ ವರ್ಷ | 7 | ಬಿಸಿಒ–307 | ಆದಾಯ ತೆರಿಗೆ |
| | 8 | ಬಿಸಿಒ–308 | ವೆಚ್ಚ ಮತ್ತು ನಿರ್ವಹಣಾ ಲೆಕ್ಕಶಾಸ್ತ್ರ |
| | 9 | ಬಿಸಿಒ–309 | ಲೆಕ್ಕಪರಿಶೋಧನೆ |
| | 10 | ಬಿಸಿಒ–310 | ವ್ಯವಹಾರದ ಕಾನೂನು |
| | 11 | ಬಿಸಿಒ–311 | ಭಾರತದಲ್ಲಿ ಬ್ಯಾಂಕಿಂಗ್ ಪದ್ಧತಿ |
| | 12 | ಬಿಸಿಒ–312 | ವ್ಯವಹಾರದ ಸಂಖ್ಯಾಶಾಸ್ತ್ರ ಮತ್ತು ಪರಿಮಾಣಾತ್ಮಕ ವಿಧಾನ |
| | 13 | ಬಿಸಿಒ–313 | ಕಾರ್ಯಾತ್ಮಕ ನಿರ್ವಹಣೆ |

| | | | |
|---|---|---|---|
| | 14 | ಬಿಸಿಓ–314 | ವ್ಯವಹಾರದಲ್ಲಿ ಕಂಪ್ಯೂಟರ್ |
| | 15 | ಬಿಸಿಓ–315 | ಕಂಪನಿಯ ಲೆಕ್ಕಶಾಸ್ತ್ರ |

***ಸೂಚನೆ :***

1. ಬಿ.ಕಾಂ., ಪದವಿಗೆ ಪ್ರವೇಶ ಪಡೆದ ವಿದ್ಯಾರ್ಥಿಗಳು ಪ್ರಥಮ ಮತ್ತು ದ್ವಿತೀಯ ವರ್ಷಗಳಲ್ಲಿ ಎರಡು ಭಾಷೆಗಳನ್ನು ಆರಿಸಿಕೊಳ್ಳತಕ್ಕದು.
2. ವಿದ್ಯಾರ್ಥಿಗಳು ಭಾರತ ಸಂವಿಧಾನ ಮಾನವ ಹಕ್ಕುಗಳು ಮತ್ತು ಪರಿಸರ ಅಧ್ಯಯನ ಮತ್ತು ಗಣಕಯಂತ್ರದ ಮೂಲತತ್ತ್ವಗಳ ಅಳವಡಿಕೆ ಹಾಗೂ ಇತರ ಎಲ್ಲಾ ವಾಣಿಜ್ಯಶಾಸ್ತ್ರ ಪತ್ರಿಕೆಗಳನ್ನು ಅಧ್ಯಯನ ಮಾಡಬೇಕು.

**ಇ. ಬೋಧನಾ ವಿಧಾನ ಬಿ.ಎ/ಬಿ.ಕಾಂ.**

ಸಾಂಪ್ರದಾಯಿಕ ವಿಶ್ವವಿದ್ಯಾನಿಲಯಗಳಲ್ಲಿ ಇರುವುದಕ್ಕಿಂತ ಭಿನ್ನವಾದ ಬೋಧನಾ ವಿಧಾನ ನಮ್ಮ ವಿಶ್ವವಿದ್ಯಾನಿಲಯದಲ್ಲಿದೆ. ಈ ಬೋಧನಾ ವ್ಯವಸ್ಥೆ ಅತ್ಯಂತ ಕಲಿಕಾರ್ಥಿ ಆಧಾರಿತವಾಗಿದ್ದು, ವಿದ್ಯಾರ್ಥಿಯು ಬೋಧನಾ ಕಲಿಕಾ ಪ್ರಕ್ರಿಯೆಯಲ್ಲಿ ಕ್ರಿಯಾತ್ಮಕವಾಗಿ ಪಾಲ್ಗೊಳ್ಳಲು ಅಗತ್ಯ ಪ್ರೇರಣೆಯನ್ನು ಒದಗಿಸುತ್ತದೆ. ವಿದ್ಯಾರ್ಥಿಗಳಿಗೆ ಬೋಧನೆಯನ್ನು ವಿವಿಧ ಕ್ರಮಗಳ ಮುಖಾಂತರ ನೀಡಲಾಗುತ್ತದೆ. ಅವುಗಳೆಂದರೆ ಮುದ್ರಿತ ಸಾಮಗ್ರಿ, ಶ್ರವಣ ಸಾಮಗ್ರಿಯೊಂದಿಗೆ ಸಮಾಲೋಚನೆ ಕಾರ್ಯದಲ್ಲಿ ಮುಖಾಮುಖಿ ಸಂವಾಹನ ನಡೆಸಲಾಗುತ್ತದೆ. ವಿಶ್ವವಿದ್ಯಾನಿಲಯವು ಬಹುಮಾಧ್ಯಮ ಉಪಕ್ರಮವನ್ನು ಬೋಧನೆಗಾಗಿ ಅನುಸರಿಸುತ್ತಿದೆ.

ಬೋಧನಾ ಮಾಧ್ಯಮವು ಈ ಕೆಳಕಂಡ ಕ್ರಮಗಳ ಸಮ್ಮಿಳಿತವಾಗಿದೆ.

- ಮುದ್ರಿತ ಸ್ವಯಂ ಕಲಿಕಾ ಸಾಮಗ್ರಿ
- ಶ್ರವ್ಯ ಕಾರ್ಯಕ್ರಮ
- ಕಲಿಕಾರ್ಥಿ ಸಹಾಯ ಕೇಂದ್ರಗಳಲ್ಲಿ (ಅಧ್ಯಯನ ಕೇಂದ್ರ) ಶೈಕ್ಷಣಿಕ ಸಮಾಲೋಚಕರೊಂದಿಗೆ ಮುಖಾಮುಖಿ ಕಾರ್ಯಕ್ರಮ

**ಈ. ಅಧ್ಯಯನ ಸಾಮಾಗ್ರಿ ಮತ್ತು ವಿತರಣೆ ಬಿ.ಎ/ಬಿ.ಕಾಂ.**

ಯುಜಿಸಿ ನಿಗದಿಪಡಿಸಿರುವ ನಿಯಮಗಳನ್ನು ಗಮನದಲ್ಲಿಟ್ಟುಕೊಂಡು ಅಧ್ಯಯನ ಸಾಮಗ್ರಿಯನ್ನು ರಚಿಸಲಾಗಿದೆ. ಅಧ್ಯಯನ ಸಾಮಗ್ರಿಯನ್ನು ವಿವಿಧ ಬ್ಲಾಕ್‌ಗಳಾಗಿ ವಿಭಾಗಿಸಲಾಗಿದೆ. ಅಧ್ಯಯನ ಸಾಮಗ್ರಿಯನ್ನು ಕಲಿಕಾರ್ಥಿಯ ಹಿನ್ನೆಲೆ, ಅಧ್ಯಯನ ಮಟ್ಟ ಇವುಗಳನ್ನು ಆಧರಿಸಿ ರಚಿಸಲಾಗಿದೆ. ವಿವಿಧ ಶಿಕ್ಷಣ ಕ್ರಮದ ಅಗತ್ಯತೆಯನ್ನು ಪೂರೈಸಿಕೊಳ್ಳಲು ಅಧ್ಯಯನ ಸಾಮಗ್ರಿ ಪ್ರಾಥಮಿಕ ಮೂಲದ ಮಾಹಿತಿಯಾಗಿದೆ. ಅಧ್ಯಯನ ಸಾಮಾಗ್ರಿಯನ್ನು ಪ್ರವೇಶಾತಿ ಸಂದರ್ಭದಲ್ಲಿ ನೀಡಲಾಗುವುದು.

ವೈಯಕ್ತಿಕವಾಗಿ ಅಧ್ಯಯನ ಸಾಮಗ್ರಿಯನ್ನು ಪಡೆಯದಿದ್ದ ವಿದ್ಯಾರ್ಥಿಗಳಿಗೆ ಅಧ್ಯಯನ ಸಾಮಗ್ರಿಯನ್ನು ರವಾನಿಸಲಾಗುವುದು. ಅಧ್ಯಯನ ಸಾಮಗ್ರಿ ವಿದ್ಯಾರ್ಥಿಗೆ ತಲುಪದೆ/ವಿದ್ಯಾರ್ಥಿ ಸ್ವೀಕರಿಸದೆ ಹಿಂದಕ್ಕೆ ಬಂದರೆ ನಂತರ ವಿದ್ಯಾರ್ಥಿಗಳಿಗೆ ಅಂಚೆ ವೆಚ್ಚವನ್ನು ಭರಿಸಬೇಕು ಎಂಬ ಷರತ್ತಿನೊಂದಿಗೆ ರವಾನಿಸಲಾಗುವುದು. ಇಂತಹ ವಿದ್ಯಾರ್ಥಿಗಳ ವಿಳಾಸವನ್ನು ಕರಾಮುವಿ ಜಾಲತಾಣದಲ್ಲಿ ಪ್ರಕಟಿಸಲಾಗುವುದು. http://ksoumysuru.ac.in

ವಿಶ್ವವಿದ್ಯಾನಿಲಯವು ವಿದ್ಯಾರ್ಥಿಗಳು ಸ್ವಯಂ ಕಲಿಕಾ ಸಾಮಗ್ರಿಯನ್ನು ಮೌಲ್ಯಮಾಪನ ಮಾಡುವ ವ್ಯವಸ್ಥೆಯನ್ನು ಪರಿಚಯಿಸಿದೆ. ಈ ಉದ್ದೇಶಕ್ಕಾಗಿ ಸ್ವಯಂ ಕಲಿಕಾ ಸಾಮಗ್ರಿಯೊಂದಿಗೆ ಹಿನ್ನುಣಿಕೆ (ಫೀಡ್ ಬ್ಯಾಕ್) ನಮೂನೆಯನ್ನು ಕಳುಹಿಸಿಕೊಡಲಾಗುವುದು. ಪ್ರತಿಯೊಬ್ಬ ಕಲಿಕಾರ್ಥಿಯು ಕಲಿಕಾ ಸಾಮಗ್ರಿಯನ್ನು ಗುಣಮಟ್ಟ ಆಧರಿಸಿ ಸೂಚನೆಗಳನ್ನು ಅನುಸರಿಸಿ ಮೌಲ್ಯಮಾಪನ ಮಾಡಿ ಪ್ರಾದೇಶಿಕ ಕೇಂದ್ರದ ನಿರ್ದೇಶಕರಿಗೆ ಅಥವಾ ಡೀನ್ (ಅಧ್ಯಯನ ಕೇಂದ್ರಗಳು) ಕೇಂದ್ರ ಕಛೇರಿ, ಮೈಸೂರು ಇವರಿಗೆ ಮುಂದಿನ ಕ್ರಮಕ್ಕಾಗಿ ನಮೂನೆಯನ್ನು ಸಲ್ಲಿಸಬೇಕು.

**ಉ. ಸಮಾಲೋಚನಾ ಕಾರ್ಯಕ್ರಮ ಬಿ.ಎ/ಬಿ.ಕಾಂ.**

ಬಿ.ಎ/ಬಿ.ಕಾಂ. ಶಿಕ್ಷಣ ಕ್ರಮಗಳಿಗೆ ವಿಶ್ವವಿದ್ಯಾನಿಲಯವು ವಾರಾಂತ್ಯ ಸಮಾಲೋಚನಾ ಕಾರ್ಯಕ್ರಮಗಳನ್ನು ಏರ್ಪಡಿಸುತ್ತದೆ. ಇದು ಕಲಿಕಾರ್ಥಿ ಮತ್ತು ಸಮಾಲೋಚಕರು ಶೈಕ್ಷಣಿಕ ಚಟುವಟಿಕೆಗಳ ಬಗ್ಗೆ ಚರ್ಚೆ ನಡೆಸಲು ಅವಕಾಶ ಒದಗಿಸುತ್ತದೆ. ಇಂತಹ ಸಮಾಲೋಚನೆಯ ಉದ್ದೇಶವೆಂದರೆ ವಿದ್ಯಾರ್ಥಿಗಳಿಗೆ ಎದುರಾಗುವ ಕೆಲವು ಸಮಸ್ಯೆಗಳಿಗೆ ಪರಿಣಿತ ಸಮಾಲೋಚಕರಿಂದ ಸ್ಪಷ್ಟೀಕರಣ ದೊರಕಿಸಿಕೊಡುವುದೇ ಆಗಿದೆ.

ಸಮಾಲೋಚನಾ ಕಾರ್ಯಕ್ರಮವನ್ನು ಯು.ಜಿ.ಸಿ. ಒ.ಡಿ.ಎಲ್. ನಿಯಮಾವಳಿ 2017 ರಂತೆ ನಡೆಸಲಾಗುತ್ತದೆ. ಸಮಾಲೋಚನಾ ಕಾರ್ಯಕ್ರಮವನ್ನು ಅಧಿಸೂಚಿಸಿದ ಕಲಿಕಾರ್ಥಿ ಸಹಾಯ ಕೇಂದ್ರಗಳಲ್ಲಿ ನಡೆಸಲಾಗುವುದು. ಡೀನ್(ಅಧ್ಯಯನ ಕೇಂದ್ರ) ಕೇಂದ್ರ ಕಛೇರಿ, ಮೈಸೂರು, ಇವರು ವಿದ್ಯಾರ್ಥಿಗಳಿಗೆ ಸಮಾಲೋಚನಾ ಕಾರ್ಯಕ್ರಮದ ದಿನಾಂಕ, ಅವಧಿ ಮತ್ತು ಕೇಂದ್ರಗಳ ಬಗ್ಗೆ ಮಾಹಿತಿಯನ್ನು ಸುತ್ತೋಲೆಯ ಮೂಲಕವಾಗಲಿ, ಅಥವಾ ವಿಶ್ವವಿದ್ಯಾನಿಲಯದ ಅಧಿಕೃತ ವೆಬ್‌ಸೈಟ್‌ನಲ್ಲಿ ಪ್ರಕಟಿಸುವ ಮುಖಾಂತರ ತಿಳಿಸುವರು.

ಸಮಾಲೋಚನಾ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ವಿಷಯ ವಸ್ತುವನ್ನು ಅಭ್ಯಾಸ ಮಾಡುವಾಗ ಎದುರಾಗುವ ಕ್ಲಿಷ್ಟಕರ ಅಂಶಗಳ ಬಗ್ಗೆ ಹಾಗೂ ಅದನ್ನು ಪರಿಹರಿಸಿಕೊಳ್ಳುವ ಬಗ್ಗೆ ಸಮಲೋಚಕರು ಅಗತ್ಯ ಸಹಾಯ ಮಾಡುವರು. ಆದ್ದರಿಂದ ಕಲಿಕಾರ್ಥಿಗಳು ಸಮಾಲೋಚನಾ ಕಾರ್ಯಕ್ರಮಕ್ಕೆ ಹೋಗುವುದಕ್ಕೆ ಮುಂಚಿತವಾಗಿ ಸ್ವಯಂ ಕಲಿಕಾ ಸಾಮಗ್ರಿಯನ್ನು ಅಭ್ಯಾಸ ಮಾಡಿ, ಚರ್ಚೆ ಮಾಡಬೇಕಾದ ಅಂಶಗಳನ್ನು ಗುರುತಿಸಿಕೊಂಡು ಕಲಿಕಾರ್ಥಿ ಸಹಾಯ ಕೇಂದ್ರಕ್ಕೆ ಹೋಗಬೇಕು.

ವಿಶ್ವವಿದ್ಯಾನಿಲಯವು ಕಲಿಕಾರ್ಥಿಗಳಿಂದ ಅಧ್ಯಾಪಕರ ಮೌಲ್ಯಮಾಪನ ಎಂಬ ಪರಾದರ್ಶಕ ಮೌಲ್ಯಮಾಪನ ವ್ಯವಸ್ಥೆಯನ್ನು ಪರಿಚಯಿಸಿದೆ. ಇದಕ್ಕೆ ಸಂಬಂಧಿಸಿದಂತೆ ನಿಗದಿತ ನಮೂನೆಯನ್ನು ಕಲಿಕಾರ್ಥಿ ಸಹಾಯ ಕೇಂದ್ರಗಳಿಂದ ನೀಡಲಾಗುವುದು. ಕಲಿಕಾರ್ಥಿಗಳು ಸೂಚನೆಗಳನ್ನು ಆಧರಿಸಿ ಈ ನಮೂನೆಯನ್ನು ಭರ್ತಿಮಾಡಿ ಪ್ರಾದೇಶಿಕ ಕೇಂದ್ರದ ನಿರ್ದೇಶಕರಿಗೆ ಕಳುಹಿಸಬೇಕು.

**ಊ. ಮೌಲ್ಯಮಾಪನ ಕ್ರಮ ಬಿ.ಎ/ಬಿ.ಕಾಂ.**

ಬಿ.ಎ/ಬಿ.ಕಾಂ. ಮೌಲ್ಯಮಾಪನ ಕ್ರಮವು ಈ ಕೆಳಗಿನ ಅಂಶಗಳಿಂದ ಕೂಡಿದೆ.

ಅ.ಆಂತರಿಕ ಮೌಲ್ಯಮಾಪನ (ಐ.ಎ. ನಿಬಂಧನ ಸಲ್ಲಿಸುವ ಮುಖಾಂತರ) – 20 ಅಂಕಗಳು

ಆ. ವರ್ಷಾಂತ್ಯ ಪರೀಕ್ಷೆ 80 ಅಂಕಗಳಿಗೆ

**ಆಂತರಿಕ ಮೌಲ್ಯಮಾಪನ**

ಆಂತರಿಕ ಮೌಲ್ಯಮಾಪನವು ದೂರಶಿಕ್ಷಣ ಕ್ರಮದ ಅವಿಭಾಜ್ಯ ಅಂಗವಾಗಿದೆ.ನಿಬಂಧಗಳ ಮುಖ್ಯಉದ್ದೇಶ ಅಧ್ಯಯನ ಸಾಮಗ್ರಿಗಳಿಂದ ವಿದ್ಯಾರ್ಥಿಗಳು ಎಷ್ಟರಮಟ್ಟಿನ ತಿಳುವಳಿಕೆ ಮೂಡಿಸಿಕೊಂಡಿದ್ದಾರೆ ಎಂಬುದನ್ನು ಪರೀಕ್ಷಿಸುವುದೇ ಆಗಿದೆ. ಅಧ್ಯಯನವನ್ನು ಹೇಗೆ ನಡೆಸಿದ್ದಾರೆ ಎಂಬುದನ್ನು ತಿಳಿದುಕೊಂಡು, ವಿದ್ಯಾರ್ಥಿಯ ಸಾಧನಾ ಮಟ್ಟವನ್ನು ಅರ್ಥಮಾಡಿಕೊಳ್ಳಲು ಸಹಾಯಕವಾಗಿದೆ.

- ಆಂತರಿಕ ನಿಬಂಧಗಳನ್ನು ಪ್ರವೇಶ ಪಡೆದ ವರ್ಷದಲ್ಲಿಯೇ ಸಲ್ಲಿಸಬೇಕು. ಮುಂದಿನ ವರ್ಷಗಳಲ್ಲಿ ನಿಬಂಧ ಸಲ್ಲಿಕೆಗೆ ಅವಕಾಶವಿರುವುದಿಲ್ಲ. ಒಂದು ವೇಳೆ ವಿದ್ಯಾರ್ಥಿಯ ಆಂತರಿಕ ನಿಬಂಧಗಳನ್ನು ಸಲ್ಲಿಸದಿದ್ದರೆ ಆಂತರಿಕ ಅಂಕಗಳು ದೊರೆಯುವುದಿಲ್ಲ. ವಿದ್ಯಾರ್ಥಿಯನ್ನು ವಾರ್ಷಿಕ ಪರೀಕ್ಷೆಯ 80 ಅಂಕಗಳಿಂದ ಮಾತ್ರ ಮೌಲ್ಯಮಾಪನ ಮಾಡಲಾಗುವುದು.
- ಮೈಸೂರು ಕೇಂದ್ರ ಹೊರತುಪಡಿಸಿ ಉಳಿದ ವಿದ್ಯಾರ್ಥಿಗಳು ನಿಬಂಧಗಳನ್ನು ಆಯ್ಕೆ ಮಾಡಿಕೊಂಡಿರುವ ಪ್ರಾದೇಶಿಕ ಕೇಂದ್ರದ ನಿರ್ದೇಶಕರಿಗೆ ಸಲ್ಲಿಸಬೇಕು.
- ನಿಬಂಧಗಳ ಪ್ರಶ್ನೆಗಳು ವಿಶ್ವವಿದ್ಯಾನಿಲಯದ ಅಧಿಕೃತ ಜಾಲತಾಣದಲ್ಲಿ ಲಭ್ಯವಾಗುವುದು.

- ವಿಶ್ವವಿದ್ಯಾನಿಲಯದ ಜಾಲತಾಣದಲ್ಲಿ ಪ್ರಕಟವಾಗುವ ಸುತ್ತೋಲೆ ಆನುಸಾರ ನಿಗದಿತ ದಿನಾಂಕದೊಳಗೆ ಬಿ.ಎ/ಬಿ.ಕಾಂ. ವಿದ್ಯಾರ್ಥಿಗಳು ಮೊದಲ ಹಂತದ ಹಾಗೂ ಎರಡನೇ ಹಂತದ ಆಂತರಿಕ ನಿಬಂಧಗಳನ್ನು ಸಲ್ಲಿಸಬೇಕು
- ಅವಧಿ ಮುಗಿದ ನಂತರ ಸಲ್ಲಿಸುವ ನಿಬಂಧಗಳನ್ನು ತಿರಸ್ಕರಿಸುವ ಹಕ್ಕನ್ನು ವಿಶ್ವವಿದ್ಯಾನಿಲಯ ಹೊಂದಿದೆ. ಆದ್ದರಿಂದ ವಿದ್ಯಾರ್ಥಿಗಳು ನಿಗದಿತ ದಿನಾಂಕದೊಳಗೆ ನಿಬಂಧಗಳನ್ನು ಸಲ್ಲಿಸಬೇಕು.
- ವಿದ್ಯಾರ್ಥಿಗಳು ಸಲ್ಲಿಸಿದ ಎಲ್ಲಾ ನಿಬಂಧಗಳ ಛಾಯಾ ಪ್ರತಿಗಳನ್ನು ಕಾಯ್ದಿಟ್ಟುಕೊಳ್ಳಬೇಕು ಹಾಗೂ ಸ್ವೀಕೃತಿ ಪತ್ರವನ್ನು ಕಾಪಾಡಿಕೊಳ್ಳಬೇಕು.
- ವಿದ್ಯಾರ್ಥಿಗಳು ನಿಬಂಧನೆಗಳನ್ನು ಬ್ಲೂ ಬುಕ್‌ನಲ್ಲೇ ಬರೆದು ಸಲ್ಲಿಸಬೇಕು
- ಆಂತರಿಕ ನಿಬಂಧಗಳ ಮರುಮೌಲ್ಯಮಾಪನಕ್ಕೆ ಅವಕಾಶವಿಲ್ಲ.

**ವಾರ್ಷಿಕ ಪರೀಕ್ಷೆ :**

ಬಿ.ಎ/ಬಿ.ಕಾಂ. ಪರೀಕ್ಷೆಗಳು ವರ್ಷದಲ್ಲಿ ಎರಡು ಬಾರಿ ನಡೆಯುತ್ತವೆ. ಮುಖ್ಯ ಪರೀಕ್ಷೆ ಮತ್ತು ಪೂರಕ ಪರೀಕ್ಷೆಗಳು ಕಾರ್ಯಕ್ರಮ ದಿನಸೂಚಿಯಂತೆ ನಡೆಯುತ್ತವೆ.

**ಪರೀಕ್ಷಾ ಕ್ರಮ ಬಿ.ಎ/ಬಿ.ಕಾಂ**

| ವಿವರಗಳು | ಅಂಕಗಳು | ಕನಿಷ್ಟ ಅಂಕ |
|---|---|---|
| ಆಂತರಿಕ ಅಂಕ | 20 | ಇಲ್ಲ |
| ವಾರ್ಷಿಕ ಪರೀಕ್ಷೆ | 80 | 28 |
| **ಒಟ್ಟು** | **100** | **35** |
| ಪತ್ರಿಕೆ ವಿನಾಯಿತಿ | | 35 |
| ಉತ್ತೀರ್ಣತೆಗೆ ಸರಾಸರಿ | | 35% |

**ಪರೀಕ್ಷಾ ಶುಲ್ಕ ವಿವರ ಬಿ.ಎ/ಬಿ.ಕಾಂ**

| ಬಿ.ಎ/ಬಿ.ಕಾಂ | ಪ್ರಥಮ ವರ್ಷ | ದ್ವಿತೀಯ ವರ್ಷ | ತೃತೀಯ ವರ್ಷ |
|---|---|---|---|
| ಪರೀಕ್ಷಾ ಶುಲ್ಕ | ರೂ. 850/– | ರೂ. 850/– | ರೂ. 950/– |

## 8.3 ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಪದವಿ ಕಾರ್ಯಕ್ರಮ (ಬಿ.ಲಿಬ್.ಐ.ಎಸ್‌ಸಿ)

**ಅ. ಅವಧಿ** : ಒಂದು ವರ್ಷ

**ಆ. ಪ್ರವೇಶ ಅರ್ಹತೆಗಳು** : ಈ ವಿಶ್ವವಿದ್ಯಾನಿಲಯದಿಂದ ಅಥವಾ ಅಂಗೀಕೃತವಾದ ಇತರ ಯಾವುದೇ ವಿಶ್ವವಿದ್ಯಾನಿಲಯದಿಂದ ಯಾವುದೇ ವಿಷಯದಲ್ಲಿ ಪದವಿ ಪಡೆದಿರುವ ಅಭ್ಯರ್ಥಿಗಳು

**ಇ. ಬೋಧನಾ ಮಾಧ್ಯಮ** : ಈ ಶಿಕ್ಷಣಕ್ರಮವನ್ನು ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಬೋಧಿಸಲಾಗುತ್ತದೆ.

**ಈ. ಕಾರ್ಯಕ್ರಮ ಸಂರಚನೆ:** ಬಿ.ಲಿಬ್.ಐ.ಎಸ್ಸಿ., ಶಿಕ್ಷಣ ಕ್ರಮಕ್ಕೆ ಪ್ರವೇಶ ಪಡೆದ ವಿದ್ಯಾರ್ಥಿಗಳು ಈ ಕೆಳಕಂಡ ಪತ್ರಿಕೆಗಳನ್ನು ಅಭ್ಯಾಸ ಮಾಡಬೇಕು.

| ಕ್ರ.ಸಂ. | ಕೋರ್ಸ್‌ಗಳು | ಶ್ರೇಯಾಂಕ |
|---|---|---|
| ಬಿಎಲ್‌ಐ–51 | ಗ್ರಂಥಾಲಯ, ಮಾಹಿತಿ ಮತ್ತು ಸಮಾಜ | 4 |
| ಬಿಎಲ್‌ಐ–52 | ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರಗಳ ನಿರ್ವಹಣೆ | 4 |
| ಬಿಎಲ್‌ಐ–53 | ಮಾಹಿತಿ ಸಂಸ್ಕರಣ (ಸಿದ್ಧಾಂತ I) : ವರ್ಗೀಕರಣ | 4 |

| | | |
|---|---|---|
| ಬಿಎಲ್ಐ–54 | ಮಾಹಿತಿ ಸಂಸ್ಕರಣ (ಸಿದ್ಧಾಂತ II) : ಸೂಚೀಕರಣ | 4 |
| ಬಿಎಲ್ಐ–55 | ಮಾಹಿತಿ ಮೂಲಗಳು ಮತ್ತು ಸೇವೆಗಳು | 4 |
| ಬಿಎಲ್ಐ–56 | ಮಾಹಿತಿ ತಂತ್ರಜ್ಞಾನದ ಮೂಲಾಂಶಗಳು | 4 |
| ಬಿಎಲ್ಐ–57 | ಮಾಹಿತಿ ಸಂಸ್ಕರಣ– I: ವರ್ಗೀಕರಣ (ಪ್ರಾಯೋಗಿಕ) | 4 |
| ಬಿಎಲ್ಐ–58 | ಮಾಹಿತಿ ಸಂಸ್ಕರಣ– II: ಸೂಚೀಕರಣ (ಪ್ರಾಯೋಗಿಕ) | 4 |
| | ಒಟ್ಟು | 32 |

**ಉ. ಬೋಧನಾ ವಿಧಾನ:**

ಸಾಂಪ್ರದಾಯಿಕ ವಿಶ್ವವಿದ್ಯಾನಿಲಯಗಳಲ್ಲಿ ಇರುವುದಕ್ಕಿಂತ ಭಿನ್ನವಾದ ಬೋಧನಾ ವಿಧಾನ ನಮ್ಮ ವಿಶ್ವವಿದ್ಯಾನಿಲಯದಲ್ಲಿದೆ. ಈ ಬೋಧನಾ ವ್ಯವಸ್ಥೆ ಅತ್ಯಂತ ಕಲಿಕಾರ್ಥಿ ಆಧಾರಿತವಾಗಿದ್ದು, ವಿದ್ಯಾರ್ಥಿಯು ಬೋಧನಾ ಕಲಿಕಾ ಪ್ರಕ್ರಿಯೆಯಲ್ಲಿ ಕ್ರಿಯಾತ್ಮಕವಾಗಿ ಪಾಲ್ಗೊಳ್ಳಲು ಅಗತ್ಯ ಪ್ರೇರಣೆಯನ್ನು ಒದಗಿಸುತ್ತದೆ. ವಿದ್ಯಾರ್ಥಿಗಳಿಗೆ ಬೋಧನೆಯನ್ನು ವಿವಿಧ ಕ್ರಮಗಳ ಮುಖಾಂತರ ನೀಡಲಾಗುತ್ತದೆ. ಅವುಗಳೆಂದರೆ ಮುದ್ರಿತ ಸಾಮಗ್ರಿ, ಶ್ರವಣ ಸಾಮಗ್ರಿಯೊಂದಿಗೆ ಸಮಾಲೋಚನೆ ಕಾರ್ಯದಲ್ಲಿ ಮುಖಾಮುಖಿ ಸಂವಹನ ನಡೆಸಲಾಗುತ್ತದೆ. ವಿಶ್ವವಿದ್ಯಾನಿಲಯವು ಬಹುಮಾಧ್ಯಮ ಉಪಕ್ರಮವನ್ನು ಬೋಧನೆಗಾಗಿ ಅನುಸರಿಸುತ್ತಿದೆ.

**ಬೋಧನಾ ಮಾಧ್ಯಮವು ಈ ಕೆಳಕಂಡ ಕ್ರಮಗಳ ಸಮ್ಮಿಳಿತವಾಗಿದೆ.**

- ಮುದ್ರಿತ ಸ್ವಯಂ ಕಲಿಕಾ ಸಾಮಗ್ರಿ
- ಶ್ರವ್ಯ ಕಾರ್ಯಕ್ರಮ
- ಸಂಪರ್ಕ ಕಾರ್ಯಕ್ರಮ

**ಊ. ಅಧ್ಯಯನ ಸಾಮಗ್ರಿ ಮತ್ತು ವಿತರಣೆ**

1. ಯುಜಿಸಿ ನಿಗಧಿಪಡಿಸಿರುವ ನಿಯಮಗಳನ್ನು ಗಮನದಲ್ಲಿಟ್ಟುಕೊಂಡು ರಚಿಸಿರುವ ಅಧ್ಯಯನ ಸಾಮಗ್ರಿಯನ್ನು ಪ್ರವೇಶಾತಿ ಸಮಯದಲ್ಲಿ ನೀಡಲಾಗುವುದು.
2. ವೈಯಕ್ತಿಕವಾಗಿ ಅಧ್ಯಯನ ಸಾಮಗ್ರಿಯನ್ನು ಪಡೆಯದಿದ್ದ ವಿದ್ಯಾರ್ಥಿಗಳಿಗೆ ಅಧ್ಯಯನ ಸಾಮಗ್ರಿಯನ್ನು ರವಾನಿಸಲಾಗುವುದು.
3. ವಿಶ್ವವಿದ್ಯಾನಿಲಯವು ವಿದ್ಯಾರ್ಥಿಗಳು ಸ್ವಯಂ ಕಲಿಕಾ ಸಾಮಗ್ರಿಯನ್ನು ಮೌಲ್ಯಮಾಪನ ಮಾಡುವ ವ್ಯವಸ್ಥೆಯನ್ನು ಪರಿಚಯಿಸಿದೆ. ಈ ಉದ್ದೇಶಕ್ಕಾಗಿ ಸ್ವಯಂ ಕಲಿಕಾ ಸಾಮಗ್ರಿಯೊಂದಿಗೆ ಹಿನ್ನುಣಿಕೆ (ಫೀಡ್ ಬ್ಯಾಕ್) ನಮೂನೆಯನ್ನು ಕಳುಹಿಸಿಕೊಡಲಾಗುವುದು. ಪ್ರತಿಯೊಬ್ಬ ಕಲಿಕಾರ್ಥಿಯು ಕಲಿಕಾ ಸಾಮಗ್ರಿಯನ್ನು ಗುಣಮಟ್ಟ ಆಧರಿಸಿ ಸೂಚನೆಗಳನ್ನು ಅನುಸರಿಸಿ ಮೌಲ್ಯಮಾಪನ ಮಾಡಿ ಡೀನ್ (ಅಧ್ಯಯನ ಕೇಂದ್ರಗಳು) ಕೇಂದ್ರ ಕಛೇರಿ, ಮೈಸೂರು ಇವರಿಗೆ ಮುಂದಿನ ಕ್ರಮಕ್ಕಾಗಿ ನಮೂನೆಯನ್ನು ಸಲ್ಲಿಸಬೇಕು.

**ಋ. ಸಂಪರ್ಕ ಕಾರ್ಯಕ್ರಮ:**

ವಿಶ್ವವಿದ್ಯಾನಿಲಯವು ಬಿ.ಲಿಬ್.ಐ.ಎಸ್ಸಿ., ವಿದ್ಯಾರ್ಥಿಗಳಿಗೆ ಸಂಪರ್ಕ ಕಾರ್ಯಕ್ರಮವನ್ನು ವ್ಯವಸ್ಥೆ ಮಾಡುತ್ತದೆ. ಸಂಪರ್ಕ ಕಾರ್ಯಕ್ರಮವು ಸೂಚಿತ ಕೇಂದ್ರಗಳಲ್ಲಿ ನಡೆಯುತ್ತದೆ. ಅವಧಿ, ದಿನಾಂಕ ಮತ್ತು ಕೇಂದ್ರಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಸುತ್ತೋಲೆ ಅಥವಾ ಜಾಲತಾಣಗಳ ಮೂಲಕ ವಿದ್ಯಾರ್ಥಿಗಳಿಗೆ ತಿಳಿಸಲಾಗುವುದು. ವಿಶ್ವವಿದ್ಯಾನಿಲಯದ ಪರಿಣಿತ ಅಧ್ಯಾಪಕರು ಮತ್ತು ಶೈಕ್ಷಣಿಕ ಸಮಾಲೋಚಕರು ಪಠ್ಯಕ್ರಮ ಆಧರಿಸಿ ಉಪನ್ಯಾಸ ನೀಡುವರು. ನಿಂಬಧಗಳನ್ನು ಬರೆಯುವುದರ ಬಗ್ಗೆ ಸಲಹೆ ನೀಡುವುದರ ಜೊತೆಗೆ ಸ್ವಯಂ ಕಲಿಕಾ ಸಾಮಗ್ರಿಗೆ ಸಂಬಂಧಿಸಿದ ಅನುಮಾನಗಳನ್ನು ಪರಿಹರಿಸುವರು. ಸಂಪರ್ಕ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಂದ ಅಧ್ಯಾಪಕರ ಮೌಲ್ಯಮಾಪನದ ಬಗ್ಗೆಯೂ ಸಹ ಮಾಹಿತಿಯನ್ನು ನೀಡಲಾಗುವುದು.

**ಎ. ಮೌಲ್ಯಮಾಪನ ಕ್ರಮ**

ಬಿ.ಲಿಬ್.ಐ.ಎಸ್ಸಿ., ಮೌಲ್ಯಮಾಪನ ಕ್ರಮವು ಈ ಕೆಳಗಿನ ಅಂಶಗಳಿಂದ ಕೂಡಿದೆ.

1. ಆಂತರಿಕ ಮೌಲ್ಯಮಾಪನ (ಐ.ಎ. ನಿಬಂದ ಸಲ್ಲಿಸುವ ಮುಖಾಂತರ – 20 ಅಂಕಗಳು)
2. ವರ್ಷಾಂತ್ಯ ಪರೀಕ್ಷೆ 80 ಅಂಕಗಳಿಗೆ

**ಎ. ಆಂತರಿಕ ಮೌಲ್ಯಮಾಪನ**

ಆಂತರಿಕ ನಿಬಂಧಗಳು ದೂರಶಿಕ್ಷಣ ಕ್ರಮದ ಅವಿಭಾಜ್ಯ ಅಂಗವಾಗಿದೆ. ನಿಬಂಧಗಳ ಮುಖ್ಯ ಉದ್ದೇಶ ಅಧ್ಯಯನ ಸಾಮಗ್ರಿಗಳಿಂದ ವಿದ್ಯಾರ್ಥಿಗಳು ಎಷ್ಟರಮಟ್ಟಿನ ತಿಳುವಳಿಕೆ ಮೂಡಿಸಿಕೊಂಡಿದ್ದಾರೆ ಎಂಬುದನ್ನು ಪರೀಕ್ಷಿಸುವುದೇ ಆಗಿದೆ. ಅಧ್ಯಯನವನ್ನು ಹೇಗೆ ನಡೆಸಿದ್ದಾರೆ ಎಂಬುದನ್ನು ತಿಳಿದುಕೊಂಡು, ವಿದ್ಯಾರ್ಥಿಯ ಸಾಧನಾ ಮಟ್ಟವನ್ನು ಅರ್ಥಮಾಡಿಕೊಳ್ಳಲು ಸಹಾಯಕವಾಗಿದೆ.

- ಆಂತರಿಕ ನಿಬಂಧಗಳನ್ನು ಪ್ರವೇಶ ಪಡೆದ ವರ್ಷದಲ್ಲಿಯೇ ಸಲ್ಲಿಸಬೇಕು. ಮುಂದಿನ ವರ್ಷಗಳಲ್ಲಿ ನಿಬಂಧ ಸಲ್ಲಿಕೆಗೆ ಅವಕಾಶವಿರುವುದಿಲ್ಲ. ಒಂದು ವೇಳೆ ವಿದ್ಯಾರ್ಥಿಯ ಆಂತರಿಕ ನಿಬಂಧಗಳನ್ನು ಸಲ್ಲಿಸದಿದ್ದರೆ ಆಂತರಿಕ ಅಂಕಗಳು ದೊರೆಯುವುದಿಲ್ಲ. ವಿದ್ಯಾರ್ಥಿಯನ್ನು ವಾರ್ಷಿಕ ಪರೀಕ್ಷೆಯ 80 ಅಂಕಗಳಿಂದ ಮಾತ್ರ ಮೌಲ್ಯಮಾಪನ ಮಾಡಲಾಗುವುದು.
- ನಿಬಂಧಗಳ ಪ್ರಶ್ನೆಗಳು ವಿಶ್ವವಿದ್ಯಾನಿಲಯದ ಅಧಿಕೃತ ಜಾಲತಾಣದಲ್ಲಿ ದೊರೆಯುತ್ತವೆ.
- ಬಿ.ಲಿಬ್.ಐ.ಎಸ್ಸಿ., ಶಿಕ್ಷಣ ಕ್ರಮದ ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯದ ಜಾಲತಾಣದಲ್ಲಿ ಪ್ರಕಟವಾಗುವ ಸುತ್ತೋಲೆ ಆನುಸಾರ ನಿಗದಿತ ದಿನಾಂಕದೊಳಗೆ ಮೊದಲ ಹಂತದ ಹಾಗೂ ಎರಡನೇ ಹಂತದ ಆಂತರಿಕ ನಿಬಂಧಗಳನ್ನು ಸಲ್ಲಿಸಬೇಕು
- ಅವಧಿ ಮುಗಿದ ನಂತರ ಸಲ್ಲಿಸುವ ನಿಬಂಧಗಳನ್ನು ತಿರಸ್ಕರಿಸುವ ಹಕ್ಕನ್ನು ವಿಶ್ವವಿದ್ಯಾನಿಲಯ ಹೊಂದಿದೆ. ಆದ್ದರಿಂದ ವಿದ್ಯಾರ್ಥಿಗಳು ನಿಗದಿತ ದಿನಾಂಕದೊಳಗೆ ನಿಬಂಧಗಳನ್ನು ಸಲ್ಲಿಸಬೇಕು.
- ವಿದ್ಯಾರ್ಥಿಗಳು ಸಲ್ಲಿಸಿದ ಎಲ್ಲಾ ನಿಬಂಧಗಳ ಛಾಯಾ ಪ್ರತಿಗಳನ್ನು ಕಾಯ್ದಿಟ್ಟುಕೊಳ್ಳಬೇಕು ಹಾಗೂ ಸ್ವೀಕೃತಿ ಪತ್ರವನ್ನು ಕಾಪಾಡಿಕೊಳ್ಳಬೇಕು.
- ಆಂತರಿಕ ನಿಬಂಧಗಳ ಮರುಮೌಲ್ಯಮಾಪನಕ್ಕೆ ಅವಕಾಶವಿಲ್ಲ.

**ವಾರ್ಷಿಕ ಪರೀಕ್ಷೆ :**

ವಿಶ್ವವಿದ್ಯಾನಿಲಯವು ವರ್ಷಾಂತ್ಯ ಪರೀಕ್ಷೆಯನ್ನು ವಾರ್ಷಿಕವಾಗಿ ನಡೆಸುತ್ತದೆ. ವಾರ್ಷಿಕವಾಗಿ ಕಾರ್ಯಕ್ರಮ ದಿನಸೂಚಿಯಂತೆ ನಡೆಸುತ್ತದೆ. ಪೂರಕ ಪರೀಕ್ಷೆಗೆ ಅವಕಾಶವಿಲ್ಲ.

| ವಿವರಗಳು | ಅಂಕಗಳು | ಕನಿಷ್ಟ ಅಂಕ |
|---|---|---|
| ಆಂತರಿಕ ನಿಬಂಧಗಳು | 20 | ಇಲ್ಲ |
| ವಾರ್ಷಿಕ ಪರೀಕ್ಷೆ | 80 | 28* |
| **ಒಟ್ಟು** | **100** | **40** |
| ಪತ್ರಿಕೆ ವಿನಾಯಿತಿ | | 40 |
| ಉತ್ತೀರ್ಣತೆಗೆ ಸರಾಸರಿ | | 40% |

***ಆಧ್ಯಾದೇಶದ ಅನುಸಾರ**

**ಪರೀಕ್ಷಾ ಶುಲ್ಕದ ವಿವರಗಳು**

| ಬಿ.ಲಿಬ್.ಐ.ಎಸ್ಸಿ. | ಶುಲ್ಕ |
|---|---|
| ಪರೀಕ್ಷಾ ಶುಲ್ಕ | 1600/– |

## 09. ಕೌಶಲ್ಯ ಅಭಿವೃದ್ಧಿ ತರಬೇತಿ:

ಭಾರತ ಸರ್ಕಾರ, ವಿಶ್ವವಿದ್ಯಾನಿಲಯ ಅನುದಾನ ಆಯೋಗವಮತ್ತು ಕರ್ನಾಟಕ ರಾಜ್ಯ ಕೌಶಲ್ಯ ಅಭಿವೃದ್ಧಿ ಮಂಡಲಿ ಇವುಗಳ ನಿರ್ದೇಶನದಂತೆ, ವಿಶ್ವವಿದ್ಯಾನಿಲಯುವು ಕೌಶಲ್ಯ ಅಭಿವೃದ್ಧಿ ತರಬೇತಿಯನ್ನು ಆರಂಭಿಸಿದೆ. ವಿಶ್ವವಿದ್ಯಾನಿಲಯುದಲ್ಲಿ ಪ್ರವೇಶ ಪಡೆಯುವ **ಪದವಿ, ಸ್ನಾತಕೋತ್ತರ ಪದವಿಯ** ಕಲಿಕಾರ್ಥಿಗಳು ಕೆಳಕಂಡ ಯಾವುದಾದರೂ ವಿಷಯುಗಳನ್ನು ಆರಿಸಿಕೊಳ್ಳಬಹುದು.

ವಿದ್ಯಾರ್ಥಿಗಳಿಗೆ ಕೌಶಲ್ಯ ತರಬೇತಿಯನ್ನು ಪ್ರಾದೇಶಿಕ ಕೇಂದ್ರಗಳಲ್ಲಿ ಮತ್ತು ಕೇಂದ್ರಸ್ಥಾನ ಮೈಸೂರಿನಲ್ಲಿ ಮಾತ್ರ ನೀಡಲಾಗುವುದು. ಪರಿಣತ ಅನುಭವೀ ತರಬೇತುದಾರರು ಕಲಿಕಾರ್ಥಿಗಳಿಗೆ ಎಲ್ಲಾ ಹಂತಗಳಲ್ಲಿ ಕೌಶಲ್ಯ ತರಬೇತಿ ನೀಡುವರು. ಕಲಿಕಾರ್ಥಿಗಳು ಎಚ್ಚರಿಕೆಯಿಂದ ಕೌಶಲ್ಯ ವಿಷಯುಗಳನ್ನು ಆರಿಸಿಕೊಂಡು, ಪ್ರವೇಶ ಅರ್ಜಿಯಲ್ಲಿ ನಮೂದಿಸಬೇಕು.

ಈ ಕಾರ್ಯಕ್ರಮವವನ್ನು ವಿದ್ಯಾರ್ಥಿ ಪ್ರವೇಶ ಪಡೆದ ಪ್ರಥಮ ವರ್ಷದಲ್ಲಿ ಆರಿಸಿಕೊಂಡು ತನ್ನ ಶಿಕ್ಷಣಕ್ರಮ ಪೂರ್ಣಗೊಳ್ಳುವವರೆವಿಗೂ ಮುಂದುವರೆಸಬಹುದಾಗಿದೆ. ವಿದ್ಯಾರ್ಥಿ ಒಮ್ಮೆ ನಿರ್ದಿಷ್ಟ ವಿಷಯುವನ್ನು ಆರಿಸಿಕೊಂಡ ನಂತರ ಯಾವುದೇ ಸಂದರ್ಭದಲ್ಲೂ ಬದಲಾಯಿಸಲೂ ಅವಕಾಶವಿರುವುದಿಲ್ಲ. ಪ್ರತಿ ಹಂತದ ಕೌಶಲ್ಯ ಅಭಿವೃದ್ಧಿ ಶಿಕ್ಷಣವು 2 ಶ್ರೇಯಾಂಕಗಳನ್ನು (Two credits) ಹೊಂದಿದೆ. ಈ ವಿಷಯುಗಳಿಗೆ ವಿಶ್ವವಿದ್ಯಾನಿಲಯುವು ಯಾವುದೇ ಪರೀಕ್ಷೆಗಳನ್ನು ನಡೆಸುವುದಿಲ್ಲ. ಆದಾಗ್ಯೂ ಶ್ರೇಯಾಂಕ ಗಳಿಕೆಯನ್ನು ಪರಿಗಣಿಸಲಾಗುವುದು. ಕೌಶಲ್ಯ ಅಭಿವೃದ್ಧಿ ತರಬೇತಿಯಲ್ಲಿ ಪಾಲ್ಗೊಳ್ಳುವುದು ಕಡ್ಡಾಯುವಾಗಿರುತ್ತದೆ.

**ಕೌಶಲ್ಯ ಅಭಿವೃದ್ಧಿ ತರಬೇತಿ ವಿಷಯುಗಳು:**

1. ಬೇಸಿಕ್ ಕಂಪ್ಯೂಟರ್ ನೆಟ್‌ವರ್ಕಿಂಗ್
2. ಕಂಪ್ಯೂಟರ್‌ನ ಮೂಲತತ್ತ್ವಗಳು (Computer fundamentals)
3. ಬಹುಮಾಧ್ಯಮ (Multimedia)
4. ವೆಬ್‌ಡಿಸೈನಿಂಗ್
5. ಡೆಸ್ಕ್‌ಟಾಪ್ ಪಬ್ಲಿಷಿಂಗ್
6. ಇಂಗ್ಲಿಷ್ ಫಾರ್ ಕಮ್ಯೂನಿಕೇಷನ್ ಅಂಡ್ ಸಾಫ್ಟ್ ಸ್ಕಿಲ್ಸ್
7. ಆಡಳಿತ ಕನ್ನಡ

ನೀವು ಆಯ್ಕೆ ಮಾಡಿಕೊಂಡಿರುವ ವಿಷಯುದ ಆಧಾರದ ಮೇಲೆ ಉಪನ್ಯಾಸ (ಥಿಯುರಿ) ಮತ್ತು ಪ್ರಾಯೋಗಿಕ ತರಗತಿಗಳ ಅವಧಿಯು ಅವಲಂಬಿತವಾಗುವುದು. ವಿಶ್ವವಿದ್ಯಾನಿಲಯುದ ಜಾಲತಾಣದಿಂದ ಪಠ್ಯಕ್ರಮವವನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು. ಕೌಶಲ್ಯ ಅಭಿವೃದ್ಧಿ ತರಬೇತಿಯ ವೇಳಾಪಟ್ಟಿಯನ್ನು ತಿಳಿಸಲಾಗುವುದು.

## 10. ತಾತ್ಕಾಲಿಕ ಶೈಕ್ಷಣಿಕ ಯೋಜನೆ

ವಿಶ್ವವಿದ್ಯಾನಿಲಯುದ ವಿವಿಧ ಶಿಕ್ಷಣ ಕ್ರಮಗಳಿಗೆ ಸಂಬಂಧಿಸಿದಂತೆ ತಾತ್ಕಾಲಿಕವಾಗಿ ಶೈಕ್ಷಣಿಕ ಯೋಜನೆಯನ್ನು ಈ ಕೆಳಕಂಡಂತೆ ನೀಡಿದೆ.

### ಪಟ್ಟಿ–1 ಬಿ.ಎ./ಬಿ.ಕಾಂ ಕಾರ್ಯಕ್ರಮಗಳ ತಾತ್ಕಾಲಿಕ ವಾರ್ಷಿಕ ಶೈಕ್ಷಣಿಕ ಯೋಜನೆ

| ಕ್ರಮ ಸಂ. | ಶೈಕ್ಷಣಿಕ ಚಟುವಟಿಕೆಗಳು | ಮೊದಲನೇ ವರ್ಷ ಬಿ.ಎ./ಬಿ.ಕಾಂ | ಎರಡನೇ ವರ್ಷ ಬಿ.ಎ./ಬಿ.ಕಾಂ | ಮೂರನೇ ವರ್ಷ ಬಿ.ಎ./ಬಿ.ಕಾಂ |
|---|---|---|---|---|
| 1 | ಪ್ರವೇಶ ಪ್ರಕಟಣೆ ಮತ್ತು ವಿವರಣಾ ಪುಸ್ತಕ ವಿತರಣೆ | 16 ಡಿಸೆಂಬರ್ 2019 | ಜನವರಿ/ಫೆಬ್ರುವರಿ 2021 | ಜನವರಿ/ಫೆಬ್ರುವರಿ 2022 |

| | | | | |
|---|---|---|---|---|
| 2 | ಪ್ರವೇಶಾತಿ | 16 ಡಿಸೆಂಬರ್ 2019ರಿಂದ 29 ಫೆಬ್ರುವರಿ 2020 | ಜನವರಿ 2021ರಿಂದ ಮಾರ್ಚ್ 2021 | ಜನವರಿ 2022ರಿಂದ ಮಾರ್ಚ್ 2022 |
| 3 | ಸ್ವಯಂ ಕಲಿಕಾ ಸಾಮಗ್ರಿ ವಿತರಣೆ | ಪ್ರವೇಶಾತಿ ಸಂದರ್ಭದಲ್ಲಿ | ಪ್ರವೇಶಾತಿ ಸಂದರ್ಭದಲ್ಲಿ | ಪ್ರವೇಶಾತಿ ಸಂದರ್ಭದಲ್ಲಿ |
| 4 | ಸಂಪರ್ಕ ಕಾರ್ಯಕ್ರಮ / ಸಮಾಲೋಚನೆ | ಮೇ/ಜೂನ್ 2020 | ಮೇ/ಜೂನ್ 2021 | ಮೇ/ಜೂನ್ 2022 |
| 5 | ಪರೀಕ್ಷಾ ಪ್ರಕಟಣೆ | ಜುಲೈ 2020 | ಜುಲೈ 2021 | ಜುಲೈ 2022 |
| 6 | ನಿಬಂಧಗಳ ಸಲ್ಲಿಕೆ | ಜಾಲತಾಣದಲ್ಲಿ ಪ್ರಕಟಿಸಲಾಗುವುದು | ಜಾಲತಾಣದಲ್ಲಿ ಪ್ರಕಟಿಸಲಾಗುವುದು | ಜಾಲತಾಣದಲ್ಲಿ ಪ್ರಕಟಿಸಲಾಗುವುದು |
| 7 | ಪರೀಕ್ಷೆ | ಅಕ್ಟೋಬರ್/ನವೆಂಬರ್ 2020 | ಅಕ್ಟೋಬರ್/ನವೆಂಬರ್ 2021 | ಅಕ್ಟೋಬರ್/ನವೆಂಬರ್ 2022 |
| 8 | ಪರೀಕ್ಷಾ ಫಲಿತಾಂಶ ಪ್ರಕಟಣೆ | ಜನವರಿ 2021 | ಜನವರಿ 2022 | ಜನವರಿ 2023 |

**ಪಟ್ಟಿ–2 ಬಿ.ಲಿಬ್.ಐ.ಎಸ್ಸಿ ಕಾರ್ಯಕ್ರಮಗಳ ತಾತ್ಕಾಲಿಕ ವಾರ್ಷಿಕ ಶೈಕ್ಷಣಿಕ ಯೋಜನೆ**

| ಕ್ರಮ ಸಂ. | ಶೈಕ್ಷಣಿಕ ಚಟುವಟಿಕೆಗಳು | ಮೊದಲನೇ ವರ್ಷ ಬಿ.ಲಿಬ್.ಐ.ಎಸ್ಸಿ |
|---|---|---|
| 1 | ಪ್ರವೇಶ ಪ್ರಕಟಣೆ ಮತ್ತು ವಿವರಣಾ ಪುಸ್ತಕ ವಿತರಣೆ | 16 ಡಿಸೆಂಬರ್ 2019 |
| 2 | ಪ್ರವೇಶಾತಿ | 16 ಡಿಸೆಂಬರ್ 2019 ರಿಂದ 29 ಫೆಬ್ರುವರಿ 2020 |
| 3 | ಸ್ವಯಂ ಕಲಿಕಾ ಸಾಮಗ್ರಿ ವಿತರಣೆ | ಪ್ರವೇಶಾತಿ ಸಂದರ್ಭದಲ್ಲಿ |
| 4 | ಸಂಪರ್ಕ ಕಾರ್ಯಕ್ರಮ / ಸಮಾಲೋಚನೆ | ಮೇ/ಜೂನ್ 2020 |
| 5 | ಪರೀಕ್ಷಾ ಪ್ರಕಟಣೆ | ಜುಲೈ 2020 |
| 6 | ನಿಬಂಧಗಳ ಸಲ್ಲಿಕೆ | ಜಾಲತಾಣದಲ್ಲಿ ಪ್ರಕಟಿಸಲಾಗುವುದು |
| 7 | ಪರೀಕ್ಷೆ | ಅಕ್ಟೋಬರ್/ನವೆಂಬರ್ 2020 |
| 8 | ಪರೀಕ್ಷಾ ಫಲಿತಾಂಶ ಪ್ರಕಟಣೆ | ಜನವರಿ 2021 |

## 11. ವಿದ್ಯಾರ್ಥಿ ಬೆಂಬಲ ಸೇವೆಗಳು

ವಿಶ್ವವಿದ್ಯಾನಿಲಯವು ವಿದ್ಯಾರ್ಥಿ ಸ್ನೇಹಿ ಬೆಂಬಲ ಸೇವೆಗಳನ್ನು ಸೃಜಿಸಿದೆ. ವಿದ್ಯಾರ್ಥಿ ಬೆಂಬಲ ಸೇವೆಗಳು ಯಾವುದೇ ತೊಂದರೆಗಳಿಲ್ಲದೆ ಕೇಂದ್ರ ಸ್ಥಾನದಲ್ಲಿ ಅತ್ಯುತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ. ಮುಂದಿನ ದಿನಗಳಲ್ಲಿ

ಇಂತಹ ಸೇವೆಗಳನ್ನು ಪ್ರಾದೇಶಿಕ ಕೇಂದ್ರ ಮತ್ತು ಕಲಿಕಾರ್ಥಿ ಸಹಾಯ ಕೇಂದ್ರಗಳಲ್ಲಿ ಅಗತ್ಯ ಕ್ರಮ ಕೈಗೊಳ್ಳುವುದರ ಮೂಲಕ ಒದಗಿಸಲಾಗುವುದು.

**ಪ್ರಾದೇಶಿಕ ಕೇಂದ್ರಗಳು ಮತ್ತು ಕಲಿಕಾರ್ಥಿ ಸಹಾಯ ಕೇಂದ್ರಗಳು**

ವಿಶ್ವವಿದ್ಯಾನಿಲಯವು ವಿದ್ಯಾರ್ಥಿಗಳ ಅಗತ್ಯತೆಗಳನ್ನು ಪೂರೈಸಲು ಕಟಿಬದ್ಧವಾಗಿದೆ. ಕರಾಮುವಿಯು ಪ್ರಾದೇಶಿಕ ಕೇಂದ್ರಗಳನ್ನು ಕರ್ನಾಟಕ ರಾಜ್ಯಾದ್ಯಂತ ಸ್ಥಾಪಿಸಿದೆ ಮತ್ತು ಶೈಕ್ಷಣಿಕ ದೃಷ್ಟಿಯಿಂದ ವಿದ್ಯಾರ್ಥಿ ಮತ್ತು ವಿಶ್ವವಿದ್ಯಾನಿಲಯದ ನಡುವೆ ಅನ್ಯೋನ್ಯ ಕ್ರಿಯೆಯನ್ನು ಒದಗಿಸುತ್ತಿದೆ **(ನೋಡಿ:ಅನುಬಂಧ-2)**.

ಕರಾಮುವಿಯು ಮೂರು ಹಂತದ ವ್ಯವಸ್ಥೆಯ ವಿದ್ಯಾರ್ಥಿ ಬೆಂಬಲ ಸೇವಾ ಕಾರ್ಯಗಳನ್ನು ನಿರ್ವಹಿಸುತ್ತದೆ. ಅವುಗಳೆಂದರೆ –

ಅ. ಕೇಂದ್ರಸ್ಥಾನ

ಆ. ಪ್ರಾದೇಶಿಕ ಕೇಂದ್ರಗಳು

ಇ. ಕಲಿಕಾರ್ಥಿ ಸಹಾಯ ಕೇಂದ್ರಗಳು(ಅಧ್ಯಯನ ಕೇಂದ್ರಗಳು)

ಕೇಂದ್ರ ಕಚೇರಿಯು ಪ್ರಾದೇಶಿಕ ಕೇಂದ್ರಗಳ ಮತ್ತು ಅಧ್ಯಯನ ಕೇಂದ್ರಗಳ ಎಲ್ಲಾ ಚಟುವಟಿಕೆಗಳನ್ನು ನಿಯಂತ್ರಿಸುತ್ತದೆ. ಪ್ರಾದೇಶಿಕ ಕೇಂದ್ರದಲ್ಲಿ ಪ್ರಾದೇಶಿಕ ನಿರ್ದೇಶಕರು ಇರುತ್ತಾರೆ. ಇಲ್ಲಿ ಪ್ರವೇಶಾತಿ ಪ್ರಕ್ರಿಯೆ, ಅಧ್ಯಯನ ಸಾಮಗ್ರಿಗಳ ವಿತರಣೆ, ಸಮಾಲೋಚನೆ ಮತ್ತು ಸಂಪರ್ಕ ಕಾರ್ಯಕ್ರಮಗಳ ನಿರ್ವಹಣೆ ಹಾಗೂ ನಿರಂತರ ಮೌಲ್ಯಮಾಪನ ನಡೆಯುತ್ತದೆ. ವಿಶ್ವವಿದ್ಯಾನಿಲಯದ ಸೂಚನೆಯಂತೆ ಪ್ರಾದೇಶಿಕ ಕೇಂದ್ರಗಳು ಕಾಲಕಾಲಕ್ಕೆ ವಿದ್ಯಾರ್ಥಿಗಳಿಗೆ ಎಲ್ಲಾ ಮಾಹಿತಿಗಳನ್ನು ಒದಗಿಸುತ್ತವೆ. (ನೋಡಿ: ಪ್ರಾದೇಶಿಕ ಕೇಂದ್ರ ಮತ್ತು ಅಧ್ಯಯನ ಕೇಂದ್ರಗಳ ಪಟ್ಟಿ : **ಅನುಬಂಧ-II**)

**ಮೈಸೂರಿನ ಕೇಂದ್ರ ಕಛೇರಿಯಲ್ಲಿರುವ ಗ್ರಂಥಾಲಯ**

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಗ್ರಂಥಾಲಯವು 1996 ರಿಂದ ವಿದ್ಯಾರ್ಥಿಗಳು, ಸಂಶೋಧನಾ ವಿದ್ಯಾರ್ಥಿಗಳು, ಅಧ್ಯಾಪಕರು ಮತ್ತು ವಿಶ್ವವಿದ್ಯಾನಿಲಯದ ಅಧ್ಯಾಪಕೇತರ ಸಿಬ್ಬಂದಿಗಳ ಶೈಕ್ಷಣಿಕ ಮತ್ತು ಸಂಶೋಧನೆಯ ಅಗತ್ಯವನ್ನು ಪೂರೈಸುತ್ತಿದೆ.ಇಂದು ಗ್ರಂಥಾಲಯದಲ್ಲಿ ಒಂದು ಲಕ್ಷಕ್ಕೂಅಧಿಕ ಗ್ರಂಥಗಳು ಓದುಗರಿಗೆ ಗ್ರಂಥಾಲಯದಲ್ಲಿ ಲಭ್ಯವಿದ್ದು, ಪುಸ್ತಕಗಳು, ನಿಯತಕಾಲಿಕೆಗಳು, ಪರಾಮರ್ಶನ ಪುಸ್ತಕಗಳು, ವಿಶ್ವಕೋಶಗಳು, ವರದಿಗಳು, ಪ್ರಬಂಧಗಳು, ದೃಶ್ಯ-ಶ್ರವ್ಯ ಸಾಮಗ್ರಿಗಳು ಮುಂತಾದವು ಗ್ರಂಥಾಲಯದಲ್ಲಿ ಲಭ್ಯವಿದೆ.ಪ್ರಸ್ತುತ 300ಕ್ಕೂ ಹೆಚ್ಚು ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ನಿಯತಕಾಲಿಕೆಗಳು ಪರಾಮಾರ್ಶನೆಗೆ ಲಭ್ಯವಿದೆ. ಗ್ರಂಥಾಲಯವು ಈಗಿರುವ ಡಿಜಿಟಲ್ ಲೈಬ್ರರಿಯನ್ನು ಉತ್ತಮ ಪಡಿಸುವ ಪ್ರಯತ್ನ ಮಾಡುತ್ತಿದೆ.

**ಸದಸ್ಯತ್ವ ಮತ್ತು ಎರವಲು ಚೀಟಿ:**

- ವಿಶ್ವವಿದ್ಯಾನಿಲಯದಲ್ಲಿ ಪ್ರವೇಶಾತಿ ಪಡೆದ ನಂತರ ವಿತರಿಸಲ್ಪಟ್ಟ ವಿದ್ಯಾರ್ಥಿ ಗುರುತಿನ ಕಾರ್ಡನ್ನು ಪಡೆದ ಮೇಲೆ ವಿಶ್ವವಿದ್ಯಾನಿಲಯದ ಎಲ್ಲಾ ವಿದ್ಯಾರ್ಥಿಗಳು ಗ್ರಂಥಾಲಯಕ್ಕೆ ಸದಸ್ಯರಾಗಬಹುದು.
- ಸದಸ್ಯತ್ವವನ್ನು ಪಡೆಯಬೇಕಾದರೆ ಸದಸ್ಯತ್ವ ಅರ್ಜಿಯನ್ನು ಭರ್ತಿಮಾಡಿ ಅದರ ಜೊತೆಯಲ್ಲಿ ಸ್ನಾತಕಪೂರ್ವ, ಸ್ನಾತಕೋತ್ತರ ವಿದ್ಯಾರ್ಥಿಗಳು 2 ಪಾಸ್‌ಪೋರ್ಟ್ ಹಾಗೂ 1 ಸ್ಟ್ಯಾಂಪ್ ಸೈಜ್ ಅಳತೆಯ ಒಟ್ಟು ಮೂರುಭಾವಚಿತ್ರಗಳನ್ನು ಗ್ರಂಥಾಲಯ ಕಛೇರಿಯಲ್ಲಿ ಸಲ್ಲಿಸಬೇಕು.
- ಸ್ನಾತಕಪೂರ್ವ, ಸ್ನಾತಕೋತ್ತರ, ವಿದ್ಯಾರ್ಥಿಗಳು ರೂ. 250/- ಗಳನ್ನು ಹಿಂಪಾವತಿಸುವ ಭದ್ರತಾ ಠೇವಣಿಯಾಗಿ ಪಾವತಿಸಿದ ಮೇಲೆ ಗ್ರಂಥಾಲಯದ ಎರವಲು ಕಾರ್ಡುಗಳನ್ನು ನೀಡಲಾಗುವುದು.
- ಸ್ನಾತಕಪೂರ್ವ ಮತ್ತುಸ್ನಾತಕೋತ್ತರತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಎರಡುಎರವಲು ಚೀಟಿಗಳನ್ನು ನೀಡಲಾಗುತ್ತದೆ.

- ಒಂದು ಕಾರ್ಡಿಗೆ ಒಂದು ಗ್ರಂಥವನ್ನು ಪಡೆಯಬಹುದಾಗಿದೆ.ಪಡೆದ ಗ್ರಂಥವನ್ನು 60 ದಿನಗಳವರೆವಿಗೂ ಬಳಸಿಕೊಳ್ಳಬಹುದು. 60 ದಿನಗಳ ನಂತರ ಗ್ರಂಥಾಲಯಕ್ಕೆ ಹಿಂದಿರುಗಿಸದಿದ್ದಲ್ಲಿ ಒಂದು ದಿನಕ್ಕೆ ಒಂದು ಗ್ರಂಥಕ್ಕೆ ಒಂದು ರೂ.ನಂತೆ ದಂಡ ಶುಲ್ಕ ನೀಡಬೇಕಾಗುತ್ತದೆ.

- ಶೈಕ್ಷಣಿಕ ವರ್ಷದ ಕೊನೆಯಲ್ಲಿ ಅಂದರೆ, ಪರೀಕ್ಷೆ ಪ್ರಾರಂಭವಾಗುವ 30 ದಿನಗಳ ಮುಂಚಿತವಾಗಿ ಎರವಲು ಪಡೆದಿರುವ ಗ್ರಂಥಗಳು ಮತ್ತು ಎರವಲು ಕಾರ್ಡುಗಳನ್ನು ಹಿಂದಿರುಗಿಸಲೇಬೇಕು. ತಪ್ಪಿದಲ್ಲಿ, ಪರೀಕ್ಷಾ ಪ್ರವೇಶಾತಿ ಪತ್ರವನ್ನು ನೀಡಲಾಗುವುದಿಲ್ಲ.

- ವಿಶ್ವವಿದ್ಯಾನಿಲಯದ ನಿಬಂಧನೆಗಳ ಪ್ರಕಾರ ವಿದ್ಯಾರ್ಥಿಗಳು ಗ್ರಂಥಾಲಯ ಬೇಬಾಕಿ ಪತ್ರವನ್ನು ಪಡೆಯಬೇಕಾದಲ್ಲಿ ಅವಶ್ಯವಾಗಿ ಗುರುತಿನ ಕಾರ್ಡನ್ನು ತೋರಿಸಿ, ಎರವಲು ಕಾರ್ಡುಗಳನ್ನು ಪಡೆದಿದ್ದಲ್ಲಿ ಅವುಗಳನ್ನು ಕಡ್ಡಾಯವಾಗಿ ಹಿಂದಿರುಗಿಸಬೇಕು.

**ಗ್ರಂಥಾಲಯ ಸೇವೆಗಳು :**

1. ಗ್ರಂಥಾಲಯದಲ್ಲಿ ಓದುಗರಿಗೆ, ರೆಫರೆನ್ಸ್ ಮತ್ತು ರೆಫರಲ್ ಸೇವೆಗಳು, ಪ್ರಸ್ತುತ ಜಾಗೃತಿ ಸೇವೆ, ಒಪ್ಯಾಕ್ ಸೇವೆ, ಓರಿಯಂಟೇಷನ್ ಸೇವೆ, ಬಿಬ್ಲಿಯೋಗ್ರಾಫಿಕ್ ಸೇವೆ, ನ್ಯೂಸ್ ಪೇಪರ್ ಕ್ಲಿಪ್ಪಿಂಗ್ಸ್ ಸೇವೆ, ಛಾಯಾಪ್ರತಿ ಸೇವೆ, ಇತ್ಯಾದಿ ಸೇವೆಗಳನ್ನು ಕ.ರಾ.ಮು.ವಿ ಗ್ರಂಥಾಲಯವು ಒದಗಿಸುತ್ತದೆ.

2. ಇತರೆ ಸಂಪನ್ಮೂಲಗಳಾದ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ಅಗತ್ಯತೆಗಳ ಪೂರೈಕೆಗೆ ಇಂಟರ್‌ನೆಟ್ ಸೌಲಭ್ಯ ಹೊಂದಿರುವ ಸುಸಜ್ಜಿತ ಕಂಪ್ಯೂಟರ್ ಲ್ಯಾಬ್ ಹೊಂದಿದೆ.

3. ಎಲ್ಲಾ ಕೆಲಸದ ದಿನಗಳಂದು ಬೆಳಿಗ್ಗೆ 10.00 ಗಂಟೆಯಿಂದ ಸಂಜೆ 5.30 ಗಂಟೆಯವರೆಗೆ ಗ್ರಂಥಾಲಯವು ಕಾರ್ಯನಿರ್ವಹಿಸುತ್ತದೆ.

4. ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಶೈಕ್ಷಣಿಕ ಸಂಪರ್ಕ ಕಾರ್ಯಕ್ರಮಗಳು, ಹಾಗೂ ಪರೀಕ್ಷೆಗಳು ನಡೆಯುವ ಸಂದರ್ಭದಲ್ಲಿ ಬೆಳಿಗ್ಗೆ 8.00 ಗಂಟೆಯಿಂದ ರಾತ್ರಿ 8.00 ಗಂಟೆಯವರೆಗೆ ಹಾಗೂ ಸಾರ್ವಜನಿಕ ಸರ್ಕಾರಿ ರಜಾ ದಿನಗಳಂದು ಬೆಳಿಗ್ಗೆ 10.00 ಗಂಟೆಯಿಂದ ಸಂಜೆ 5.30 ಗಂಟೆಯವರೆಗೆ ಕಾರ್ಯನಿರ್ವಹಿಸುತ್ತದೆ.

5. ಹೌಸ್ ಕೀಪಿಂಗ್ ಆಪರೇಶನ್ಸ್ ಮತ್ತು ಕೆಟಲಾಗ್ ಅನ್ನು ನ್ಯೂಜೆನ್‌ಲಿಬ್ ಇಂಟಿಗ್ರೇಟೆಡ್ ಲೈಬ್ರರಿ ಮ್ಯಾನೇಜ್ ಮೆಂಟ್ ತಂತ್ರಾಂಶದ ಮೂಲಕ ಗಣಕೀಕೃತಗೊಳಿಸಿದೆ.

6. ವೆಬ್ ಆಧಾರಿತ ಆನ್‌ಲೈನ್ ಪಬ್ಲಿಕ್ ಆಕ್ಸಸ್ ಕ್ಯಾಟಲಾಗ್ ಓದುಗರಿಗೆ ಒದಗಿಸಲಾಗುತ್ತಿದೆ.

7. ಗ್ರಂಥಾಲಯದ ವೆಬ್‌ಸೈಟ್ ನಲ್ಲಿ ಇ–ಪತ್ರಿಕೆಗಳು, ಇ–ಪುಸ್ತಕಗಳು, ಹಳೆಯ ಪ್ರಶ್ನೆಪತ್ರಿಕೆಗಳನ್ನು ಇತ್ಯಾದಿ ಮತ್ತು ಗ್ರಂಥಾಲಯವು ಆನ್‌ಲೈನ್ ಪಬ್ಲಿಕ ಆಕ್ಸಸ್ ಕ್ಯಾಟಲಾಗ್ ಲಿಂಕ್ ನಿಲುಕಿಸಿ ಕೊಳ್ಳಲು [http://ksoumysore.edu.in/library.html]ಸಂಪರ್ಕ ಕೊಂಡಿಯನ್ನು ಏರ್ಪಡಿಸಿದೆ.

ಗ್ರಂಥಾಲಯದ ಸೇವೆಗಳಿಗೆ ಸಂಬಂಧಿಸಿದಂತೆ ಯಾವುದೇ ಪ್ರಶ್ನೆಗಳನ್ನು ಹಾಗೂ ಅನಿಸಿಕೆಗಳನ್ನುksoulibrary@gmail.com. ಇ–ಮೇಲ್ ಐ.ಡಿ ಗೆ ಕಳುಹಿಸಬಹುದು ಹಾಗೂ ದೂರವಾಣಿ ಸಂಖ್ಯೆ: 0821–2519943 ಆಂತರಿಕ ಸಂಪರ್ಕ 525 / 526 ಅನ್ನು ಸಂಪರ್ಕಿಸಬಹುದು.

**ಆರೋಗ್ಯ ಕೇಂದ್ರ :**

ವಿದ್ಯಾರ್ಥಿಗಳು ವಿವಿ ಆವರಣದಲ್ಲಿ ತಂಗಿರುವಾಗ ಅವರ ತುರ್ತು ಮತ್ತು ತಕ್ಷಣದ ವೈದ್ಯಕೀಯ ಅಗತ್ಯಗಳಿಗೆ ವಿಶ್ವವಿದ್ಯಾನಿಲಯವು ವಿವಿ ಆವರಣದಲ್ಲಿ ಒಂದು ಆರೋಗ್ಯ ಕೇಂದ್ರವನ್ನು ಸ್ಥಾಪಿಸಿದೆ. ಕೇವಲ ಹೊರ ರೋಗಿ ವಿಭಾಗ (OPD)ಸೌಲಭ್ಯವಿದ್ದು, ವೈದ್ಯರು ಮತ್ತು ಇತರ ಸಿಬ್ಬಂದಿಗಳು ಕರ್ತವ್ಯದಲ್ಲಿ ನಿರತರಿರುತ್ತಾರೆ.

**ವಿದ್ಯಾರ್ಥಿ ನಿಲಯ:**

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ವಿವಿ ಆವರಣದಲ್ಲಿ ಪುರುಷ ಮತ್ತು ಮಹಿಳಾ ವಿದ್ಯಾರ್ಥಿಗಳಿಗೆ ಪ್ರತ್ಯೇಕವಾಗಿ ವಿದ್ಯಾರ್ಥಿನಿಲಯ ಸೌಲಭ್ಯವನ್ನು ಕಲ್ಪಿಸಿದೆ.

**ಪುರುಷ ವಿದ್ಯಾರ್ಥಿ ವಸತಿ ನಿಲಯ :**

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಆವರಣದಲ್ಲಿರುವ ಪುರುಷ ವಿದ್ಯಾರ್ಥಿನಿಲಯದಲ್ಲಿ ಒಟ್ಟು 33 ಕೊಠಡಿಗಳಿವೆ. ಪ್ರತಿ ಕೊಠಡಿಯಲ್ಲಿ ಐದು ವಿದ್ಯಾರ್ಥಿಗಳು ಉಳಿದುಕೊಳ್ಳಬಹುದು. ಆದುದರಿಂದ ಈ ಸೌಲಭ್ಯವು ಒಮ್ಮೆಗೆ 165 ವಿದ್ಯಾರ್ಥಿಗಳಿಗೆ ಮಾತ್ರ ಲಭಿಸುವುದು. ಇಲ್ಲಿ ಉಳಿದುಕೊಳ್ಳಬಯಸುವ ವಿದ್ಯಾರ್ಥಿಗಳು ದಿನವೊಂದಕ್ಕೆ ರೂ.70/– ಗಳನ್ನು ಪಾವತಿಸಬೇಕಾಗುತ್ತದೆ.

**ಮಹಿಳಾ ವಿದ್ಯಾರ್ಥಿ ವಸತಿ ನಿಲಯ :**

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಆವರಣದಲ್ಲಿ ಮಹಿಳಾ ವಿದ್ಯಾರ್ಥಿನಿಯರ ವಸತಿಗಾಗಿ 09 ಕುಟೀರಗಳಿವೆ. ಪ್ರತಿ ಕುಟೀರದಲ್ಲಿ 12 ಮಂದಿ ವಿದ್ಯಾರ್ಥಿನಿಯರು ಉಳಿದುಕೊಳ್ಳಬಹುದಾದುದರಿಂದ ಈ ಸೌಲಭ್ಯವು ಒಮ್ಮೆಗೆ 108 ವಿದ್ಯಾರ್ಥಿನಿಯರಿಗೆ ಮಾತ್ರ ಲಭಿಸುವುದು. ಇಲ್ಲಿ ಉಳಿದುಕೊಳ್ಳಲು ಅಪೇಕ್ಷಿಸುವ ವಿದ್ಯಾರ್ಥಿನಿಯರು ದಿನವೊಂದಕ್ಕೆ ರೂ.70/– ಗಳನ್ನು ಪಾವತಿಸಬೇಕಾಗುತ್ತದೆ.

ಕರಾಮುವಿಯು ತನ್ನ ಪರಿಮಿತಿಯಲ್ಲಿ ವಿದ್ಯಾರ್ಥಿಗಳಿಗೆ ವಸತಿ ಸೌಲಭ್ಯ ಮಾಡಿಕೊಡುತ್ತದೆ. ಮೊದಲು ಬಂದವರಿಗೆ ಆದ್ಯತೆ ನೀತಿ ಆಧರಿಸಿ ವಸತಿ ಸೌಲಭ್ಯವನ್ನು ನೀಡಲಾಗುವುದು. ವಸತಿ ಸೌಲಭ್ಯ ದೊರೆಯದೆ ಇರುವವರು ವಸತಿಗಾಗಿ ತಮ್ಮದೇ ಆದ ವ್ಯವಸ್ಥೆಯನ್ನು ಮಾಡಿಕೊಳ್ಳುವುದು. ಕೊಠಡಿಯಲ್ಲಿರುವಾಗ ವಿಶ್ವವಿದ್ಯಾನಿಲಯದ ಆಸ್ತಿಪಾಸ್ತಿಗಳಿಗೆ ನಷ್ಟ ಉಂಟು ಮಾಡುವ ನಿಲಯಾರ್ಥಿಗಳನ್ನು ಶಿಸ್ತುಕ್ರಮಕ್ಕೊಳಪಡಿಸಿ ದಂಡನೆಗೆ ಗುರಿಪಡಿಸಲಾಗುವುದು. ವಸತಿ ಸೌಲಭ್ಯಕ್ಕೆ ಮತ್ತು ವಸತಿ ಶುಲ್ಕ ಪಾವತಿಗಾಗಿ ಕಚೇರಿ ವೇಳೆಯಲ್ಲಿ ಕರಾಮುವಿಯ ಅತಿಥಿ ಗೃಹದ ಕಚೇರಿಯನ್ನು ಸಂಪರ್ಕಿಸಬಹುದು. ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ – 9880072854.

ವಿಶ್ವವಿದ್ಯಾನಿಲಯದಲ್ಲಿರುವ ಇತರೆ ಸೌಲಭ್ಯಗಳು :

- ಸುಸಜ್ಜಿತ ಉಪಹಾರ ಗೃಹ
- ಸ್ಟೇಟ್ ಬ್ಯಾಂಕ್ ಇಂಡಿಯಾ ಮತ್ತು ATM ಸೌಲಭ್ಯ
- ಅಂಚೆ ಕಚೇರಿ
- ವೈಫೈ ಸೌಲಭ್ಯ
- ಸುಸಜ್ಜಿತ, ಸುವ್ಯವಸ್ಥಿತ ಕ್ರೀಡಾಂಗಣ
- ಕುಡಿಯುವ ಶುದ್ಧ ನೀರಿನ ಘಟಕ

**ಮಹಿಳಾ ಅಭ್ಯರ್ಥಿಗಳಿಗೆ ವಿಶೇಷ ರಿಯಾಯಿತಿ :**

ಕ.ರಾ.ಮು.ವಿ. ನಿಲಯದಲ್ಲಿ ವಿವಿಧ ಶಿಕ್ಷಣಕ್ರಮಗಳಿಗೆ ಪ್ರವೇಶಾತಿ ಪಡೆಯ ಬಯಸುವ ಬಿ.ಪಿ.ಎಲ್. ಕಾರ್ಡ್ ಹೊಂದಿರುವ ಮಹಿಳಾ ಅಭ್ಯರ್ಥಿಗಳಿಗೆ ಬೋಧನಾ ಶುಲ್ಕದಲ್ಲಿ ಮಾತ್ರ ಶೇಕಡ 25 ರಷ್ಟು ರಿಯಾಯಿತಿ ನೀಡಲಾಗುತ್ತದೆ. ಅಭ್ಯರ್ಥಿಗಳು ಪ್ರವೇಶಾತಿ ಸಮಯದಲ್ಲಿ ಪ್ರವೇಶಾತಿ ಅರ್ಜಿಯ ಜೊತೆ ಅಭ್ಯರ್ಥಿಯೇ ಸ್ವ ದೃಢೀಕರಿಸಿದ ಬಿ.ಪಿ.ಎಲ್. ಕಾರ್ಡ್‌ನ ನೆರಳಚ್ಚು ಪ್ರತಿ ಲಗತ್ತಿಸಬೇಕು. ಈ ಬಿ.ಪಿ.ಎಲ್. ಕಾರ್ಡ್‌ನಲ್ಲಿ ಪ್ರವೇಶಾತಿ ಪಡೆಯುವ ವಿದ್ಯಾರ್ಥಿಯ ಹೆಸರು ಹಾಗೂ ಭಾವಚಿತ್ರ ಕಡ್ಡಾಯವಾಗಿ ಇರಬೇಕು. ಈ ಸೌಲಭ್ಯ ಪಡೆಯಲಿಚ್ಛಿಸುವ ಮಹಿಳಾ ಅಭ್ಯರ್ಥಿಗಳು ಸಮಕ್ಷಮ ಪ್ರಾಧಿಕಾರದಿಂದ ಪಡೆದ ಬಿಪಿಎಲ್ ಕಾರ್ಡಿನ ಮೂಲ ಪ್ರತಿಯನ್ನು ಖುದ್ದಾಗಿ ಅಧಿಕಾರಿಗಳಿಗೆ ತಂದು ತೋರಿಸಬೇಕು.

**ಮುಕ್ತ ಸಂಜೀವಿನಿ ವಿದ್ಯಾರ್ಥಿ ವೇತನ ನಿಧಿ :**

ದೂರಶಿಕ್ಷಣ ಮತ್ತು ಮುಕ್ತ ಕಲಿಕಾ ಕ್ರಮದಲ್ಲಿ ಅಧ್ಯಯನ ನಡೆಸುವ ಬಡ ವಿದ್ಯಾರ್ಥಿಗಳಿಗೆ ಆರ್ಥಿಕವಾಗಿ ನೆರವಾಗುವ ಹಾಗೂ ಪ್ರೋತ್ಸಾಹಿಸುವ ದೃಷ್ಟಿಯಿಂದ ಮುಕ್ತ ಸಂಜೀವಿನಿ ವಿದ್ಯಾರ್ಥಿ ವೇತನ ನಿಧಿಯನ್ನು ಮುಕ್ತ ವಿಶ್ವವಿದ್ಯಾನಿಲಯ ಸ್ಥಾಪಿಸಿದೆ. ಕರಾಮುವಿಯಲ್ಲಿ ಬಿ.ಎ./ಬಿ.ಕಾಂ. ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ಆರ್ಥಿಕವಾಗಿ ದುರ್ಬಲರಾಗಿರುವ ವಿದ್ಯಾರ್ಥಿಗಳು ಮಾತ್ರ ಈ ವಿದ್ಯಾರ್ಥಿವೇತನಕ್ಕೆ ಅರ್ಹರಾಗಿರುತ್ತಾರೆ.

**ಷರತ್ತುಗಳು :**

- ವಿದ್ಯಾರ್ಥಿ/ ತಂದೆ / ತಾಯಿ/ ಪೋಷಕ/ ಗಂಡ ಇವರುಗಳ ಒಟ್ಟು ವಾರ್ಷಿಕ ವರಮಾನ ರೂ. ಒಂದು ಲಕ್ಷಕ್ಕಿಂತ (1,00,000/-) ಮೀರಿರಬಾರದು.
- ವರಮಾನ, ಜಾತಿ ಪ್ರಮಾಣ ಪತ್ರವನ್ನು ಸಂಬಂಧಿಸಿದ ತಹಸಿಲ್ದಾರರಿಂದ ಪಡೆದು ಸಲ್ಲಿಸಬೇಕು.
- ಅಂತಿಮ ಬಿ.ಎ./ಬಿ.ಕಾಂ., ತರಗತಿಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳು ಹಿಂದಿನ ವರ್ಷದಲ್ಲಿ ಮೊದಲ ಪ್ರಯತ್ನದಲ್ಲಿ ಶೇಕಡ 50 ಅಂಕಗಳನ್ನು ಗಳಿಸಿ ತೇರ್ಗಡೆ ಹೊಂದಿರಬೇಕು.
- ವಿದ್ಯಾರ್ಥಿಯ ವಯೋಮಿತಿಯು 30 ವರ್ಷದೊಳಗಿರಬೇಕು.
- ಈ ವಿದ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳು ಬೇರೆ ಯಾವುದೆ ವಿದ್ಯಾರ್ಥಿವೇತನ ಅಥವಾ ಶುಲ್ಕ ವಿನಾಯಿತಿಗೆ ಅರ್ಜಿ ಸಲ್ಲಿಸಬಾರದು.
- ವಿದ್ಯಾರ್ಥಿವೇತನವನ್ನು ವಿದ್ಯಾರ್ಥಿಗಳ ಮೆರಿಟ್ ಆಧರಿಸಿ ಆಯ್ಕೆ ಮಾಡಲಾಗುವುದು.
- ವಿದ್ಯಾರ್ಥಿಗಳು ವಿದ್ಯಾರ್ಥಿವೇತನಕ್ಕಾಗಿ ಭರ್ತಿ ಮಾಡಿದ ಅರ್ಜಿಯನ್ನು ನಿಗದಿಪಡಿಸಿದ ದಿನಾಂಕದೊಳಗೆ ಅಗತ್ಯ ದಾಖಲೆಗಳೊಂದಿಗೆ **ಸಹಾಯಕ ಕುಲಸಚಿವ (ಪ್ರವೇಶಾತಿ), ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮುಕ್ತಗಂಗೋತ್ರಿ, ಮೈಸೂರು-570 006**ಇವರಿಗೆ ನಿಗದಿತ ಸಮಯದಲ್ಲಿ ಸಲ್ಲಿಸಬೇಕು.

**ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ:**

ಕರಾಮುವಿಯ ಸ್ಪರ್ಧಾತ್ಮಕ ತರಬೇತಿ ಕೇಂದ್ರವು ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ಮತ್ತು ಮಾರ್ಗದರ್ಶನವನ್ನು ನೀಡುತ್ತದೆ. ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ: 0821-2515944.

## 12. ಪ್ರವೇಶಾತಿ ಶುಲ್ಕದ ಮಾಹಿತಿ

1. ಬಿ.ಪಿ.ಎಲ್. ಕಾರ್ಡ್ ಹೊಂದಿರುವ ಮಹಿಳಾ ಅಭ್ಯರ್ಥಿಗಳಿಗೆ ಬೋಧನಾ ಶುಲ್ಕದಲ್ಲಿ ಮಾತ್ರ ಶೇಕಡಾ 25% ರಷ್ಟು ವಿನಾಯಿತಿ ಇರುತ್ತದೆ.
2. ಕನಿಷ್ಠ 5 ವರ್ಷಗಳ ಅವಧಿ ಕರ್ನಾಟಕದಲ್ಲಿ ಅಧ್ಯಯನ ಮಾಡಿರುವ ಶ್ರೀಲಂಕಾ/ಬಾಂಗ್ಲಾದೇಶ/ಇಂಡೋನೇಷ್ಯಾ/ಭೂತಾನ್/ನೇಪಾಳ/ಟಿಬೇಟಿಯನ್ ಅಭ್ಯರ್ಥಿಗಳು ಅರ್ಹತಾ ಶುಲ್ಕ ರೂ. 2000/-ಗಳನ್ನು ಪ್ರತಿ ವರ್ಷ ಪಾವತಿಸಬೇಕು.
3. ಅನಿವಾಸಿ ಭಾರತೀಯರು (NRI) / ವಿದೇಶೀ ವಿದ್ಯಾರ್ಥಿಗಳಿಗೆ ಅರ್ಹತಾ ಶುಲ್ಕ ಪ್ರತಿವರ್ಷ ರೂ.15,000/-ಗಳನ್ನು ಪಾವತಿಸಬೇಕು.
4. ಕರ್ನಾಟಕದ ಹೊರಗೆ ವಾಸಿಸುವ ಅಭ್ಯರ್ಥಿಗಳು ಅರ್ಹತಾ ಶುಲ್ಕ 2,000/-ರೂ. ಗಳನ್ನು ಪಾವತಿಸಬೇಕು.

## 13. ಪರೀಕ್ಷೆ ಕುರಿತು ಮಾಹಿತಿ

- **ವಾರ್ಷಿಕ ಪರೀಕ್ಷೆ**

  ಬಿ.ಎ/ಬಿ.ಕಾಂ ಪದವಿ ಶಿಕ್ಷಣ ಕ್ರಮಕ್ಕೆ ವಿಶ್ವವಿದ್ಯಾನಿಲಯವು ಪ್ರತಿ ಶೈಕ್ಷಣಿಕ ವರ್ಷದ ಅಂತ್ಯದಲ್ಲಿ ಪರೀಕ್ಷೆಗಳನ್ನು ನಡೆಸುತ್ತದೆ. ಬಿ.ಎ/ಬಿ.ಕಾಂ ಪರೀಕ್ಷೆಗಳಿಗೆ ಪೂರಕ ಪರೀಕ್ಷೆಯನ್ನು ಸಹ ನಡೆಸಲಾಗುತ್ತದೆ. ಬಿ.ಲಿಬ್.ಐ.ಎಸ್ಸಿ. ಮತ್ತು ಸ್ನಾತಕೋತ್ತರ ಶಿಕ್ಷಣಕ್ರಮಗಳಿಗೆ ಪೂರಕ ಪರೀಕ್ಷೆ ಇರುವುದಿಲ್ಲ.

- **ಶಿಕ್ಷಣಕ್ರಮ ಪೂರೈಸಲು ನಿಗದಿತ ಅವಧಿ**

  ವಿದ್ಯಾರ್ಥಿಗಳು ಶಿಕ್ಷಣ ಕ್ರಮವನ್ನು N + 2 ವರ್ಷಗಳಲ್ಲಿ (ಅಂದರೆ ಶಿಕ್ಷಣಕ್ರಮದ ಅವಧಿ ಮತ್ತು ಹೆಚ್ಚಿಗೆ 2 ವರ್ಷಗಳು) ಪೂರ್ಣಗೊಳಿಸಿಕೊಳ್ಳಬೇಕು.

- **ಪರೀಕ್ಷಾ ಕ್ರಮ**

  ಪ್ರಥಮ ಬಾರಿಗೆ ಪರೀಕ್ಷೆಗೆ (ಪ್ರವೇಶಾತಿ ಪಡೆದ ವರ್ಷ) ಹಾಜರಾಗುವ ಎಲ್ಲಾ ವಿದ್ಯಾರ್ಥಿಗಳು ಎಲ್ಲಾ ಪತ್ರಿಕೆಗಳಿಗೂ (ಇಡೀ ಪರೀಕ್ಷೆಗೆ) ನೋಂದಾಯಿಸಿಕೊಳ್ಳಬೇಕು.

- **ಪರೀಕ್ಷಾ ಕೇಂದ್ರಗಳು**

  ವಿದ್ಯಾರ್ಥಿಗಳು ಎಷ್ಟು ಸಂಖ್ಯೆಯಲ್ಲಿ ದಾಖಲಾತಿ ಹೊಂದಿದ್ದಾರೆ ಎಂಬುದರ ಆಧಾರದ ಮೇಲೆ ವಿಶ್ವವಿದ್ಯಾನಿಲಯವು ಪರೀಕ್ಷಾ ಕೇಂದ್ರವನ್ನು ಗುರುತಿಸುತ್ತದೆ. ಇಂತಹ ಪರೀಕ್ಷಾ ಕೇಂದ್ರಗಳ ಜೊತೆಗೆ, ಪರೀಕ್ಷಾ ಸುತ್ತೋಲೆಯಲ್ಲಿ ಅಧಿಸೂಚಿಸಿರುವ ಇತರ ಸಂಸ್ಥೆಗಳಲ್ಲಿ ಪರೀಕ್ಷೆ ನಡೆಸಲಾಗುತ್ತದೆ. ಪರೀಕ್ಷಾ ಕೇಂದ್ರಗಳಲ್ಲಿ ಏನಾದರೂ ಬದಲಾವಣೆಗಳಾದರೆ ಅದನ್ನು ಕ.ರಾ.ಮು.ವಿ.ಯ ಅಧಿಕೃತ ಜಾಲತಾಣದಲ್ಲಿ ಪ್ರಕಟಿಸಲಾಗುವುದು. (www.ksoumysuru.ac.in) ಪೂರಕ ಪರೀಕ್ಷೆಗಳಿಗೆ ಕಡಿಮೆ ಪರೀಕ್ಷಾ ಕೇಂದ್ರಗಳಿರುತ್ತವೆ. ಇದು ವಿದ್ಯಾರ್ಥಿಗಳ ಸಂಖ್ಯೆಯ ಮೇಲೆ ಆಧಾರಿತವಾಗಿರುತ್ತದೆ.

- **ಪತ್ರಿಕೆ ವಿನಾಯಿತಿ**

  ಸ್ನಾತಕ ಮತ್ತು ಸ್ನಾತಕೋತ್ತರ ಶಿಕ್ಷಣ ಕ್ರಮಗಳಿಗೆ ವಿಶ್ವವಿದ್ಯಾನಿಲಯದ ಅಧ್ಯಾದೇಶದಂತೆ ಪತ್ರಿಕೆ ವಿನಾಯಿತಿ ನೀಡಲಾಗಿದೆ.

- **ಸ್ನಾತಕ ಶಿಕ್ಷಣ ಕ್ರಮದ ಫಲಿತಾಂಶ ಘೋಷಣೆ**

  ಅಭ್ಯರ್ಥಿಗಳು ವಾರ್ಷಿಕ ಪರೀಕ್ಷೆಯಲ್ಲಿ ಪ್ರತಿ ಪತ್ರಿಕೆಯಲ್ಲಿ ಕನಿಷ್ಠ 28 ಅಂಕಗಳು ಮತ್ತು ಎಲ್ಲಾ ಪತ್ರಿಕೆಗಳಲ್ಲಿ ಸರಾಸರಿ ಶೇ.35/40 ಅಂಕಗಳನ್ನು ಪಡೆಯಲೇಬೇಕು. ಯಾವ ವಿದ್ಯಾರ್ಥಿಗಳು 35/40 ಅಂಕಗಳಿಗಿಂತ ಕಡಿಮೆ ಪಡೆಯುತ್ತಾರೋ ಅವರನ್ನು ಪರೀಕ್ಷೆಯಲ್ಲಿ ಅನುತ್ತೀರ್ಣರೆಂದು ಪರಿಗಣಿಸಲಾಗುತ್ತದೆ. ಇಂತಹ ಅಭ್ಯರ್ಥಿಗಳು ಅನುತ್ತೀರ್ಣರಾದ ಪತ್ರಿಕೆಗಳಿಗೆ ಪುನಃ ಪರೀಕ್ಷೆಗೆ ಹಾಜರಾಗಬೇಕು.

- **ಸ್ನಾತಕೋತ್ತರ ಶಿಕ್ಷಣ ಕ್ರಮದ ಫಲಿತಾಂಶ ಘೋಷಣೆ**

  ಅಭ್ಯರ್ಥಿಗಳು ವಾರ್ಷಿಕ ಪರೀಕ್ಷೆಯಲ್ಲಿ ಪ್ರತಿ ಪತ್ರಿಕೆಯಲ್ಲಿ 32 ಅಂಕಗಳು ಮತ್ತು ಎಲ್ಲಾ ಪತ್ರಿಕೆಗಳಲ್ಲಿ ಸರಾಸರಿ ಶೇ 40 ಅಂಕಗಳನ್ನು ಪಡೆಯಲೇಬೇಕು. ಯಾವ ವಿದ್ಯಾರ್ಥಿಗಳು ಶೇ.40 ಅಂಕಗಳಿಗಿಂತ ಕಡಿಮೆ ಪಡೆಯುತ್ತಾರೋ ಅವರನ್ನು ಪರೀಕ್ಷೆಯಲ್ಲಿ ಅನುತ್ತೀರ್ಣರೆಂದು ಪರಿಗಣಿಸಲಾಗುತ್ತದೆ. ಇಂತಹ ಅಭ್ಯರ್ಥಿಗಳು ಅನುತ್ತೀರ್ಣರಾದ ಪತ್ರಿಕೆಗಳಿಗೆ ಪುನಃ ಪರೀಕ್ಷೆಗೆ ಹಾಜರಾಗಬೇಕು.

- **ಕೃಪಾಂಕ ನೀತಿ**

  ಕೃಪಾಂಕಗಳ ನೀಡುವಿಕೆಯು ವಿಶ್ವವಿದ್ಯಾನಿಲಯದ ನಿಯಮಾನುಸಾರ ಇರುತ್ತದೆ.

➢ **ಬಿ.ಎ./ಬಿ.ಕಾಂ ಶಿಕ್ಷಣ ಕ್ರಮಗಳ ಶ್ರೇಣಿ ಪದ್ಧತಿ**

| ಪಡೆದ ಒಟ್ಟು ಅಂಕಗಳು (ಶೇಕಡಾವಾರು) | ಗುಣಮಟ್ಟ | ಗಣಾಂಶ | |
|---|---|---|---|
| 75 % ಅಥವಾ ಮೇಲ್ಪಟ್ಟು | ಅತ್ಯುತ್ತಮ (ಎಕ್ಸಲೆಂಟ್) | ಎ | ಉನ್ನತ ಶ್ರೇಣಿ |
| 60–74% | ತುಂಬಾ ಉತ್ತಮ (ವೆರಿ ಗುಡ್) | ಬಿ | ಪ್ರಥಮ ದರ್ಜೆ |
| 50–59% | ಉತ್ತಮ | ಸಿ | ದ್ವಿತೀಯ ದರ್ಜೆ |
| 35–49% | ತೃಪ್ತಿಕರ | ಡಿ | ಉತ್ತೀರ್ಣ |
| 35 % ಕ್ಕಿಂತ ಕಡಿಮೆ | ಅನುತ್ತೀರ್ಣ | ಇ | ಅನುತ್ತೀರ್ಣ |

- ಬಿ.ಎ/ಬಿ.ಕಾಂ ನ ಗುಂಪು–1 ಮತ್ತು 2ನೇ ಕೋರ್ಸ್‌ಗಳಿಗೆ ದರ್ಜೆಯನ್ನು ಘೋಷಿಸುವುದಿಲ್ಲ.
- ಬಿ.ಎ/ಬಿ.ಕಾಂ ನ ಗುಂಪು–3 ರ ಕೋರ್ಸ್‌ಗಳಿಗೆ ಮಾತ್ರ ದರ್ಜೆಯನ್ನು ಘೋಷಿಸಲಾಗುತ್ತದೆ.

➢ **ಬಿ.ಲಿಬ್.ಐ.ಎಸ್‌ಸಿ / ಎಂ.ಎ/ಎಂ.ಕಾಂ ಶಿಕ್ಷಣ ಕ್ರಮಗಳ ಶ್ರೇಣಿ ಪದ್ಧತಿ**

| ಶೇಕಡಾವಾರು % ಅಂಕಗಳು | ಗುಣಮಟ್ಟ | ಗಣಾಂಶ | |
|---|---|---|---|
| 75 % ಅಥವಾ ಮೇಲ್ಪಟ್ಟು | ಅತ್ಯುತ್ತಮ(ಎಕ್ಸಲೆಂಟ್) | ಎ | ಉನ್ನತ ಶ್ರೇಣಿ |
| 60–74% | ತುಂಬಾ ಉತ್ತಮ(ವೆರಿ ಗುಡ್) | ಬಿ | ಪ್ರಥಮ ದರ್ಜೆ |
| 50–59% | ಉತ್ತಮ | ಸಿ | ದ್ವಿತೀಯ ದರ್ಜೆ |
| 40–49% | ತೃಪ್ತಿಕರ | ಡಿ | ಉತ್ತೀರ್ಣ |
| 40% ಕ್ಕಿಂತ ಕಡಿಮೆ | ಅನುತ್ತೀರ್ಣ | ಇ | ಅನುತ್ತೀರ್ಣ |

**ಮರು ಮೌಲ್ಯಮಾಪನ ಮತ್ತು ಉತ್ತರ ಪತ್ರಿಕೆಯ ಛಾಯಾ ಪ್ರತಿ**

ವಿಶ್ವವಿದ್ಯಾನಿಲಯದ ವೆಬ್‌ಸೈಟ್ (www.ksoumysuru.ac.in) ನಲ್ಲಿ ಫಲಿತಾಂಶ ಪ್ರಕಟಣೆಗೊಂಡ 14 ದಿನಗಳ ಒಳಗಾಗಿ ಬಿ.ಎ./ಬಿ.ಕಾಂ/ ಬಿ.ಲಿಬ್.ಐ.ಎಸ್.ಸಿ. /ಎಂ.ಎ/ಎಂ.ಕಾಂ ಶಿಕ್ಷಣ ಕ್ರಮಗಳ ವಿದ್ಯಾರ್ಥಿಗಳು ಮರು ಮೌಲ್ಯಮಾಪನಕ್ಕೆ ಮತ್ತು ಉತ್ತರ ಪತ್ರಿಕೆಯ ಛಾಯಾ ಪ್ರತಿಗೆ ಇವುಗಳಿಗೆ ಅರ್ಜಿ ಸಲ್ಲಿಸಲು ಅವಕಾಶ ಇರುತ್ತದೆ. ಅರ್ಜಿಗಳನ್ನು **ಕುಲಸಚಿವರು (ಪರೀಕ್ಷಾಂಗ), ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮುಕ್ತಗಂಗೋತ್ರಿ, ಮೈಸೂರು–6,** ಇವರಿಗೆ ನೋಂದಾಯಿತ ಅಂಚೆಯ ಮೂಲಕ ಸಲ್ಲಿಸಬೇಕು.

**ಫಲಿತಾಂಶದ ಉತ್ತಮೀಕರಣ (ಸ್ನಾತಕೋತ್ತರ ಶಿಕ್ಷಣಕ್ರಮಗಳಿಗೆ)**

ಶಿಕ್ಷಣಕ್ರಮವನ್ನು ಪೂರೈಸಿದ ಅಭ್ಯರ್ಥಿಯು ಫಲಿತಾಂಶವನ್ನು ತಿರಸ್ಕರಿಸದೆ ಫಲಿತಾಂಶವನ್ನು ಉತ್ತಮೀಕರಿಸಿಕೊಳ್ಳಲು ಪುನಃ ಪರೀಕ್ಷೆ ಬರೆಯಲು ಅವಕಾಶವಿರುತ್ತದೆ (ಮೊದಲ ವರ್ಷದ ಅಥವಾ ಎರಡನೇ ವರ್ಷದ ಅಥವಾ ಎರಡೂ ವರ್ಷಗಳ ಎಲ್ಲಾ ಪತ್ರಿಕೆಗಳನ್ನು ತೆಗೆದುಕೊಳ್ಳಬೇಕು). ಇದು ಆಧ್ಯಾದೇಶದ ನಿಯಮಗಳಿಗೆ ಅನುಗುಣವಾಗಿರುತ್ತದೆ.

**ವಾರ್ಷಿಕ ಪರೀಕ್ಷೆ ತೆಗೆದುಕೊಳ್ಳಲು ಅರ್ಹತೆ**

ಯಾವುದೇ ಶಿಕ್ಷಣಕ್ರಮದಲ್ಲಿ ವಾರ್ಷಿಕ ಹಾಗೂ ಪೂರಕ ಪರೀಕ್ಷೆ ತೆಗೆದುಕೊಳ್ಳಲು ಅರ್ಹರಾಗಬೇಕಾದರೆ, ವಿದ್ಯಾರ್ಥಿಗಳು ಈ ಕೆಳಗೆ ನಮೂದಿಸಿರುವ ನಿಬಂಧನೆಗಳನ್ನು ಪೂರೈಸಿರಬೇಕು.

1) ವಿಶ್ವವಿದ್ಯಾನಿಲಯವು ನಿಗದಿಪಡಿಸಿರುವ ಶಿಕ್ಷಣಕ್ರಮ, ಬೋಧನಾ ಶುಲ್ಕವನ್ನು ಮಾತ್ರ ಪಾವತಿಸಿರಬೇಕು
2) ನಿಗದಿತ ಶಿಕ್ಷಣಕ್ರಮವನ್ನು ಆಯ್ಕೆ ಮಾಡಿಕೊಂಡು ಅಧ್ಯಯನ ಮಾಡಿರಬೇಕು.

3) ನಿಗದಿತ ದಿನಾಂಕದೊಳಗೆ ಪರೀಕ್ಷಾ ಶುಲ್ಕ ಪಾವತಿಸಿ ಅರ್ಜಿ ಸಲ್ಲಿಸಿರಬೇಕು.
4) ಪ್ರವೇಶಾತಿಯು ವಿಶ್ವವಿದ್ಯಾನಿಲಯದಿಂದ ಅನುಮೋದನೆಗೊಂಡಿರಬೇಕು.

**ಪರೀಕ್ಷಾ ವೇಳಾಪಟ್ಟಿ**

ಪ್ರತಿ ಶಿಕ್ಷಣಕ್ರಮದ ಪರೀಕ್ಷೆಯ ದಿನಾಂಕ ಮತ್ತು ಸಮಯವನ್ನು ತಿಳಿಸುವ ಪರೀಕ್ಷಾ ವೇಳಾಪಟ್ಟಿಯನ್ನು ಎಲ್ಲ ಪ್ರಾದೇಶಿಕ ಕೇಂದ್ರ ಮತ್ತು ಪರೀಕ್ಷಾ ಕೇಂದ್ರಗಳಿಗೆ 15 ದಿನಗಳ ಮುಂಚಿತವಾಗಿ ಕಳುಹಿಸಲಾಗುವುದು. ವಿದ್ಯಾರ್ಥಿಗಳು ವಿವರವಾದ ವೇಳಾಪಟ್ಟಿಯನ್ನು ಹತ್ತಿರದ ಪ್ರಾದೇಶಿಕ ಕೇಂದ್ರ, ಅಧ್ಯಯನ ಕೇಂದ್ರ ಹಾಗೂ ಪರೀಕ್ಷಾ ಕೇಂದ್ರ ಅಥವಾ ಕರಾಮುವಿಯ ವೆಬ್‌ಸೈಟ್ (www.ksoumysuru.ac.in) ಸಂಪರ್ಕಿಸುವ ಮೂಲಕ ಪಡೆಯಬಹುದು. ವಿದ್ಯಾರ್ಥಿಗಳಿಗೆ ವೈಯಕ್ತಿಕವಾಗಿ ವೇಳಾಪಟ್ಟಿಯನ್ನು ಕಳುಹಿಸಲಾಗುವುದಿಲ್ಲ.

**ರ್‍ಯಾಂಕ್ ಘೋಷಣೆಯ ನಿಯಮಗಳು :**

1. ಪುನರಾವರ್ತಿತ ವಿದ್ಯಾರ್ಥಿಗಳು ರ್‍ಯಾಂಕ್ ಪಡೆಯಲು ಅರ್ಹರಾಗಿರುವುದಿಲ್ಲ.
2. ದರ್ಜೆ ಉತ್ತಮೀಕರಣ (CIG) ಅಂಕ ಪಡೆದ ವಿದ್ಯಾರ್ಥಿಗಳು ಮತ್ತು ಕೃಪಾಂಕ ಪಡೆದ ವಿದ್ಯಾರ್ಥಿಗಳು ರ್‍ಯಾಂಕ್ ಪಡೆಯಲು ಅರ್ಹರಾಗಿರುವುದಿಲ್ಲ.
3. ಗರಿಷ್ಠ 10 ರ್‍ಯಾಂಕ್ ನೀಡಲು ಮಾತ್ರ ಅವಕಾಶವಿರುತ್ತದೆ (ಅಥವಾ ಒಟ್ಟಾರೆ ಶೇ. 10 ರಷ್ಟು ಅಭ್ಯರ್ಥಿಗಳು).
4. ವಿದ್ಯಾರ್ಥಿಗಳು ಪರೀಕ್ಷಾ ಅಧಿಸೂಚನೆಯಲ್ಲಿ ನೀಡಿರುವ ಸೂಚನೆಗಳನ್ನು ಎಚ್ಚರಿಕೆಯಿಂದ ಓದತಕ್ಕದ್ದು.

- ವಿದ್ಯಾರ್ಥಿಗಳು ಅವರಿಗೆ ನಿಗದಿತವಾದ ಪರೀಕ್ಷಾ ಕೇಂದ್ರದಲ್ಲಿ ಮಾತ್ರ ಪರೀಕ್ಷೆಯನ್ನು ಬರೆಯಬೇಕು. ವಿಶ್ವವಿದ್ಯಾನಿಲಯದ ಕುಲಸಚಿವರು (ಪರೀಕ್ಷಾಂಗ) ಇವರ ನಿರ್ದಿಷ್ಟ ಅನುಮತಿ ಪಡೆಯದೆ ಯಾವುದೇ ಇತರ ಕೇಂದ್ರಗಳಲ್ಲಿ ಪರೀಕ್ಷೆಯನ್ನು ತೆಗೆದುಕೊಳ್ಳುವಂತಿಲ್ಲ.
- ಒಮ್ಮೆ ಆಯ್ಕೆ ಮಾಡಿದ ಕೇಂದ್ರವನ್ನು ಯಾವುದೇ ಕಾರಣಕ್ಕೂ ಬದಲಾಯಿಸುವುದಿಲ್ಲ. ಒಂದು ವೇಳೆ ಅನಿವಾರ್ಯ ಕಾರಣಗಳಿಂದಾಗಿ ವಿದ್ಯಾರ್ಥಿಯು ಪರೀಕ್ಷಾಕೇಂದ್ರವನ್ನು ಬದಲಾಯಿಸಿಕೊಳ್ಳಬೇಕಾದರೆ ಕುಲಸಚಿವರು (ಪರೀಕ್ಷಾಂಗ) ಇವರ ಅನುಮತಿಯನ್ನು ಪಡೆಯಬೇಕು. ನಿಗದಿ ಪಡಿಸಿದ ಶುಲ್ಕವನ್ನು ಪಾವತಿಸಬೇಕು. ಪರೀಕ್ಷಾ ಫಲಿತಾಂಶವನ್ನು ವಿಶ್ವವಿದ್ಯಾನಿಲಯದ ವೆಬ್‌ಸೈಟ್ (www.ksoumysuru.ac.in) ನಲ್ಲಿ ಪ್ರಕಟಿಸಲಾಗುವುದು.
- ಪೂರಕ ಪರೀಕ್ಷೆಯನ್ನು ತೆಗೆದುಕೊಳ್ಳಲು ಬಯಸುವ ವಿದ್ಯಾರ್ಥಿಗಳು ಅರ್ಜಿಯನ್ನು ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳುವುದು.
- ಪರೀಕ್ಷಾ ಶುಲ್ಕವನ್ನು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಶಾಖೆಗಳ ಮುಖಾಂತರ ಪಾವತಿಸಬೇಕು. ಒಮ್ಮೆ ಪಾವತಿಸಲಾದ ಶುಲ್ಕವನ್ನು ಯಾವುದೇ ಕಾರಣಕ್ಕೂ ಮರು ಪಾವತಿಸಲಾಗುವುದಿಲ್ಲ. ವಿದ್ಯಾರ್ಥಿಯು ನಿರ್ದಿಷ್ಟ ಪರೀಕ್ಷೆಗೆ ಹಾಜರಾಗದಿದ್ದರೂ ಪರೀಕ್ಷಾ ಶುಲ್ಕವನ್ನು ಮರುಪಾವತಿ ಮಾಡುವುದಿಲ್ಲ ಅಥವಾ ಮರು ಹೊಂದಾಣಿಕೆ ಮಾಡಿಕೊಳ್ಳುವುದಿಲ್ಲ.
- ವಿದ್ಯಾರ್ಥಿಗಳು ಪರೀಕ್ಷೆಗೆ ಮೂರು ದಿನ ಮುಂಚಿತವಾಗಿ ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರಿಂದ ಪ್ರವೇಶ ಪತ್ರಗಳನ್ನು ಪಡೆಯತಕ್ಕದ್ದು ಹಾಗೂ ಕರಾಮುವಿ ವೆಬ್‌ಸೈಟ್ (www.ksoumysuru.ac.in) ನಿಂದಲೂ ಡೌನ್‌ಲೋಡ್ ಮಾಡಿಕೊಳ್ಳಬಹುದು. ಯಾವ ಅಭ್ಯರ್ಥಿಗಳಿಗೂ ಪ್ರವೇಶ ಪತ್ರವನ್ನು ಅಂಚೆಯ ಮೂಲಕ ರವಾನಿಸುವುದಿಲ್ಲ.

- ವಲಸೆ ಪ್ರಮಾಣ ಪತ್ರವನ್ನು ಪಡೆಯಲು ವಿದ್ಯಾರ್ಥಿಯು ಕುಲಸಚಿವ (ಪರೀಕ್ಷಾಂಗ), ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮುಕ್ತಗಂಗೋತ್ರಿ, ಮೈಸೂರು – 06, ಇವರಿಗೆ ಅರ್ಜಿ ಸಲ್ಲಿಸಬೇಕು. ನಿಗದಿತ ಅರ್ಜಿಯನ್ನು ಗೊತ್ತುಪಡಿಸಿದ ಅಂಕಪಟ್ಟಿಯ ನೆರಳಚ್ಚು ಪತ್ರಿ ಮತ್ತು ಶುಲ್ಕ ಪಾವತಿ ಮಾಡಿದ ಚಲನ್ ಜೊತೆ ಲಗತ್ತಿಸಿ ಕಳುಹಿಸಬೇಕು.
- ವಿಶ್ವವಿದ್ಯಾನಿಲಯದಿಂದ ಫಲಿತಾಂಶ ಘೋಷಣೆಯಾದ ಮೇಲೆ ನಿಗದಿತ ಶುಲ್ಕಗಳನ್ನು ಪಾವತಿ ಮಾಡಿ ತೇರ್ಗಡೆಯಾದ ಅಂಕಪಟ್ಟಿಗಳ ಛಾಯಾ ಪ್ರತಿಗಳೊಂದಿಗೆ ಅರ್ಜಿ ಸಲ್ಲಿಸಿದಲ್ಲಿ ಮಾತ್ರ ತಾತ್ಕಾಲಿಕ ತೇರ್ಗಡ ಪ್ರಮಾಣ ಪತ್ರ (Provisional Pass Certificate), ತಾತ್ಕಾಲಿಕ ಪ್ರಮಾಣ ಪತ್ರವನ್ನು ಕುಲಸಚಿವ (ಪರೀಕ್ಷಾಂಗ) ಇವರು ವಿದ್ಯಾರ್ಥಿಯ ಕೋರಿಕೆಯ ಮೇರೆಗೆ ವಿತರಿಸುವರು.
- ಎಲ್ಲಾ ತರಹದ ಸುತ್ತೋಲೆಗಳು, ಪರೀಕ್ಷಾ ಪ್ರಕಟಣೆಗಳು ಇನ್ನಿತರ ಪತ್ರ ವ್ಯವಹಾರಗಳನ್ನು ಸಾಮಾನ್ಯ ಅಂಚೆ ಮೂಲಕ ವಿದ್ಯಾರ್ಥಿಗಳಿಗೆ ರವಾನಿಸಲಾಗುವುದು. ಅರ್ಜಿ, ಸುತ್ತೋಲೆ, ಪ್ರಕಟಣೆ ಮತ್ತಿತರ ಮಾಹಿತಿಗಳನ್ನು ಕಲಿಕಾರ್ಥಿ ಸಹಾಯ ಕೇಂದ್ರ, ಪ್ರಾದೇಶಿಕ ಕೇಂದ್ರ ಅಥವಾ ಕೇಂದ್ರ ಕಚೇರಿಯಿಂದಲು ಪಡೆಯಬಹುದಾಗಿದೆ. ವಿದ್ಯಾರ್ಥಿಗಳು ಕಾಲ ಕಾಲಕ್ಕೆ ವಿಶ್ವವಿದ್ಯಾನಿಲಯದ ಅಧಿಕೃತ ಜಾಲತಾಣಕ್ಕೆ ಭೇಟಿ ನೀಡಿ ನೂತನ ಮಾಹಿತಿಗಳನ್ನು ಪಡೆಯಬಹುದು.
- ಅಂಕಪಟ್ಟಿಯನ್ನು ವಿಶ್ವವಿದ್ಯಾನಿಲಯದಿಂದ ವಿದ್ಯಾರ್ಥಿಗಳ ವಿಳಾಸಕ್ಕೆ ನೋಂದಾಯಿತ ಅಂಚೆ/ಸ್ಪೀಡ್ ಪೋಸ್ಟ್ ಮೂಲಕ ಕಳುಹಿಸಿಕೊಡಲಾಗುವುದು. 50 ದಿನಗಳ ಅವಧಿಯೊಳಗೆ ಅಂಕಪಟ್ಟಿ ತಲುಪದಿದ್ದಲ್ಲಿ ಅಂತಹ ವಿದ್ಯಾರ್ಥಿಗಳು ವೆಬ್‌ಸೈಟ್ ಫಲಿತಾಂಶದ ಪ್ರತಿಯನ್ನು ಲಗತ್ತಿಸಿ ಅಗತ್ಯ ಕ್ರಮ ಕೈಗೊಳ್ಳಲು ಕೋರಿ ಕುಲಸಚಿವರು (ಪರೀಕ್ಷಾಂಗ), ಕರಾಮುವಿ, ಮುಕ್ತಗಂಗೋತ್ರಿ, ಮೈಸೂರು–06 ಇವರಿಗೆ ಪತ್ರ ಬರೆಯಬೇಕು. ಪತ್ರ ತಲುಪಿದ 15 ದಿನಗಳೊಳಗೆ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುತ್ತದೆ. ಅಂಕಪಟ್ಟಿಯಲ್ಲಿ ಏನಾದರೂ ದೋಷ ಕಂಡು ಬಂದಲ್ಲಿ ಕೂಡಲೇ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿ ಸರಿಪಡಿಸಿಕೊಳ್ಳತಕ್ಕದ್ದು.
- ಒಂದು ವೇಳೆ ಆಂತರಿಕ ನಿಬಂಧಗಳನ್ನು ಸಲ್ಲಿಸಿಯೂ ಅದರ ಅಂಕಗಳು ಪರೀಕ್ಷಾ ಫಲಿತಾಂಶದಲ್ಲಿ ಪ್ರಕಟಗೊಳ್ಳದಿದ್ದಲ್ಲಿ ಅಂತಹ ವಿದ್ಯಾರ್ಥಿಗಳು ಫಲಿತಾಂಶ ಪ್ರಕಟಗೊಂಡ 30 ದಿನಗಳೊಳಗಾಗಿ ನಿಬಂಧನೆಗಳನ್ನು ಸಲ್ಲಿಸಿದ ದಾಖಲೆಗಳೊಂದಿಗೆ ಆಯಾ ಸಂಯೋಜನಾಧಿಕಾರಿಗಳನ್ನು ಸಂಪರ್ಕಿಸುವುದು.
- ವಿದ್ಯಾರ್ಥಿಗಳು ಕನ್ನಡ ಅಥವಾ ಇಂಗ್ಲೀಷ್‌ನಲ್ಲಿ ಪರೀಕ್ಷೆ ಬರೆಯಬಹುದು.

## 14. ಘಟಿಕೋತ್ಸವ :

**(ಘಟಿಕೋತ್ಸವ / ಪದವಿ ಪ್ರಮಾಣ ಪತ್ರಗಳ ವಿವರಗಳಿಗಾಗಿ ವಿಶ್ವವಿದ್ಯಾನಿಲಯದ ವೆಬ್ ಸೈಟ್ ನೋಡಿ)** ಘಟಿಕೋತ್ಸವವನ್ನು ಸಂಬಂಧಿತ ಶಿಕ್ಷಣ ಕ್ರಮಗಳ ಫಲಿತಾಂಶವು ಘೋಷಣೆಯಾದ ನಂತರ ವಿಶ್ವವಿದ್ಯಾನಿಲಯವು ನಡೆಸುತ್ತದೆ. ಇದರ ಬಗ್ಗೆ ಪ್ರತ್ಯೇಕ ಮಾಹಿತಿಯನ್ನು ವಿದ್ಯಾರ್ಥಿಗಳಿಗೆ ನಿಗದಿತ ಸಮಯದೊಳಗೆ ಕಳಿಸಲಾಗುತ್ತದೆ.

## 15. ವಿಶ್ವವಿದ್ಯಾನಿಲಯದಿಂದ ನೀಡುತ್ತಿರುವ ಇತರ ಶೈಕ್ಷಣಿಕ ಕಾರ್ಯಕ್ರಮಗಳು

| ಅ. ಸ್ನಾತಕೋತ್ತರ ಕಾರ್ಯಕ್ರಮಗಳು | | | | |
|---|---|---|---|---|
| ಕ್ರ. ಸಂ . | ಶಿಕ್ಷಣ ಕ್ರಮ | ಅವಧಿ | ಕ್ರಮ | ಶ್ರೇಯಾಂಕ |
| 1 | ಎಂ.ಎ. ಕನ್ನಡ | 2 ವರ್ಷಗಳು | ವಾರ್ಷಿಕ | 70 |
| 2 | ಎಂ.ಎ. ಇಂಗ್ಲಿಷ್ | 2 ವರ್ಷಗಳು | ವಾರ್ಷಿಕ | 70 |
| 3 | ಎಂ.ಎ. ಹಿಂದಿ | 2 ವರ್ಷಗಳು | ವಾರ್ಷಿಕ | 70 |
| 4 | ಎಂ.ಎ. ಉರ್ದು | 2 ವರ್ಷಗಳು | ವಾರ್ಷಿಕ | 70 |
| 5 | ಎಂ.ಎ. ಸಂಸ್ಕೃತ | 2 ವರ್ಷಗಳು | ವಾರ್ಷಿಕ | 70 |
| 6 | ಎಂ.ಎ. ಇತಿಹಾಸ | 2 ವರ್ಷಗಳು | ವಾರ್ಷಿಕ | 70 |
| 7 | ಎಂ.ಎ. ಅರ್ಥಶಾಸ್ತ್ರ | 2 ವರ್ಷಗಳು | ವಾರ್ಷಿಕ | 70 |
| 8 | ಎಂ.ಎ. ರಾಜ್ಯಶಾಸ್ತ್ರ | 2 ವರ್ಷಗಳು | ವಾರ್ಷಿಕ | 70 |
| 9 | ಎಂ.ಎ. ಸಾರ್ವಜನಿಕ ಆಡಳಿತ | 2 ವರ್ಷಗಳು | ವಾರ್ಷಿಕ | 70 |
| 10 | ಎಂ.ಎ. ಸಮಾಜಶಾಸ್ತ್ರ | 2 ವರ್ಷಗಳು | ವಾರ್ಷಿಕ | 70 |
| 11 | ಎಂ.ಎ. ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ | 2 ವರ್ಷಗಳು | ವಾರ್ಷಿಕ | 70 |
| 12 | ಎಂ.ಎ. ಪ್ರಾಚೀನ ಇತಿಹಾಸ ಮತ್ತು ಪುರಾತತ್ವ | 2 ವರ್ಷಗಳು | ವಾರ್ಷಿಕ | 70 |
| 13 | ಎಂ.ಕಾಂ | 2 ವರ್ಷಗಳು | ವಾರ್ಷಿಕ | 70 |
| 14 | ಎಂ.ಬಿ.ಎ | 2 ವರ್ಷಗಳು | ವಾರ್ಷಿಕ | 128 |
| 15 | ಎಂ.ಎಸ್ಸಿ ಜೀವರಸಾಯನಶಾಸ್ತ್ರ | 2 ವರ್ಷಗಳು | ವಾರ್ಷಿಕ | 72 |
| 16 | ಎಂ.ಎಸ್ಸಿ ಜೈವಿಕ ತಂತ್ರಜ್ಞಾನ | 2 ವರ್ಷಗಳು | ವಾರ್ಷಿಕ | 72 |
| 17 | ಎಂ.ಎಸ್ಸಿ ರಸಾಯನಶಾಸ್ತ್ರ | 2 ವರ್ಷಗಳು | ವಾರ್ಷಿಕ | 72 |
| 18 | ಎಂ.ಎಸ್ಸಿ ಆಹಾರ ವಿಜ್ಞಾನ ಮತ್ತು ಪೋಷಣೆ | 2 ವರ್ಷಗಳು | ವಾರ್ಷಿಕ | 72 |
| 19 | ಎಂ.ಎಸ್ಸಿ ಗಣಕ ಯಂತ್ರ ವಿಜ್ಞಾನ | 2 ವರ್ಷಗಳು | ವಾರ್ಷಿಕ | 72 |
| 20 | ಎಂ.ಎಸ್ಸಿ ಪರಿಸರ ವಿಜ್ಞಾನ | 2 ವರ್ಷಗಳು | ವಾರ್ಷಿಕ | 72 |
| 21 | ಎಂ.ಎಸ್ಸಿ ಭೂಗೋಳ ಶಾಸ್ತ್ರ | 2 ವರ್ಷಗಳು | ವಾರ್ಷಿಕ | 72 |
| 22 | ಎಂ.ಎಸ್ಸಿ ಗಣಿತ ಶಾಸ್ತ್ರ | 2 ವರ್ಷಗಳು | ವಾರ್ಷಿಕ | 72 |
| 23 | ಎಂ.ಎಸ್ಸಿ ಸೂಕ್ಷ್ಮ ಜೀವಶಾಸ್ತ್ರ | 2 ವರ್ಷಗಳು | ವಾರ್ಷಿಕ | 72 |
| 24 | ಎಂ.ಎಸ್ಸಿ ಭೌತಶಾಸ್ತ್ರ | 2 ವರ್ಷಗಳು | ವಾರ್ಷಿಕ | 72 |
| 25 | ಎಂ.ಎಸ್ಸಿ ಮನೋವಿಜ್ಞಾನ | 2 ವರ್ಷಗಳು | ವಾರ್ಷಿಕ | 72 |
| 26 | ಎಂ.ಎಸ್ಸಿ ಮಾಹಿತಿ ವಿಜ್ಞಾನ | 2 ವರ್ಷಗಳು | ವಾರ್ಷಿಕ | 72 |
| 27 | ಎಂ.ಲಿಬ್.ಐ.ಎಸ್ಸಿ. | 1 ವರ್ಷ | ವಾರ್ಷಿಕ | 36 |
| **28** | ಪಿಹೆಚ್.ಡಿ (ವಿವಿಧ ವಿಷಯಗಳಲ್ಲಿ) | | | |

ಪೋಸ್ಟ್ ಗ್ರಾಜುಯೇಟ್ ಡಿಪ್ಲೊಮೊ, ಡಿಪ್ಲೊಮೊ ಮತ್ತು ಸರ್ಟಿಫಿಕೇಟ್ **ಕಾರ್ಯಕ್ರಮಗಳು**

| ಅ. ಸ್ನಾತಕೋತ್ತರ ಡಿಪ್ಲೊಮೊ ಕಾರ್ಯಕ್ರಮಗಳು | | | | |
|---|---|---|---|---|
| ಕ್ರ. ಸಂ. | ಶಿಕ್ಷಣ ಕ್ರಮ | ಅವಧಿ | ಕ್ರಮ | ಶ್ರೇಯಾಂಕ |
| 1 | ಇಂಗ್ಲಿಷ್‌ನಲ್ಲಿ ಸ್ನಾತಕೋತ್ತರ ಡಿಪ್ಲೊಮಾ (ಪಿ.ಜಿ.ಡಿ.ಇ) | 1 ವರ್ಷ | ವಾರ್ಷಿಕ | 36 |
| 2 | ಮಾನವ ಸಂಪನ್ಮೂಲಗಳ ನಿರ್ವಹಣೆಯಲ್ಲಿ ಸ್ನಾತಕೋತ್ತರ ಡಿಪ್ಲೊಮಾ(ಪಿ.ಜಿ.ಡಿ.ಎಚ್.ಆರ್.ಎಂ) | 1 ವರ್ಷ | ವಾರ್ಷಿಕ | 36 |
| 3 | ಹಣಕಾಸು ನಿರ್ವಹಣೆಯಲ್ಲಿ ಡಿಪ್ಲೊಮಾ (ಪಿ.ಜಿ.ಡಿ.ಎಫ್.ಎಂ) | 1 ವರ್ಷ | ವಾರ್ಷಿಕ | 36 |
| 4 | ವ್ಯವಹಾರಿಕ ನಿರ್ವಹಣೆಯಲ್ಲಿ ಸ್ನಾತಕೋತ್ತರ ಡಿಪ್ಲೊಮಾ(ಪಿ.ಜಿ.ಡಿ.ಬಿ.ಎ.) | 1 ವರ್ಷ | ವಾರ್ಷಿಕ | 36 |
| 5 | ಮಾರುಕಟ್ಟೆ ನಿರ್ವಹಣಾಶಾಸ್ತ್ರದಲ್ಲಿ ಸ್ನಾತಕೋತ್ತರ ಡಿಪ್ಲೊಮಾ(ಪಿ.ಜಿ.ಡಿ.ಎಂ.ಎಂ) | 1 ವರ್ಷ | ವಾರ್ಷಿಕ | 36 |
| 6 | ಪೌಷ್ಟಿಕತೆ ಮತ್ತು ಪಥ್ಯಶಾಸ್ತ್ರ (ಪಿ.ಜಿ.ಡಿ.ಎನ್.ಡಿ) | 1 ವರ್ಷ | ವಾರ್ಷಿಕ | 36 |
| 7 | ಪತ್ರಿಕೋದ್ಯಮ ಮತ್ತು ಸಮೂಹ ಸಂವಹನದಲ್ಲಿ ಸ್ನಾತಕೋತ್ತರ ಡಿಪ್ಲೊಮಾ (ಪಿ.ಜಿ.ಡಿ.ಜೆ.ಎಂ.ಸಿ) | 1 ವರ್ಷ | ವಾರ್ಷಿಕ | 36 |
| 8 | ಕುವೆಂಪು ಸಾಹಿತ್ಯ ಸ್ನಾತಕೋತ್ತರ ಡಿಪ್ಲೊಮಾ(ಪಿ.ಜಿ.ಡಿ.ಕೆ.ಎಸ್.) | 1 ವರ್ಷ | ವಾರ್ಷಿಕ | 36 |
| 9 | ವ್ಯವಹಾರಿಕ ಕಾನೂನು ಸ್ನಾತಕೋತ್ತರ ಡಿಪ್ಲೊಮಾ(ಪಿ.ಜಿ.ಡಿ.ಬಿ.ಎಲ್.) | 1 ವರ್ಷ | ವಾರ್ಷಿಕ | 36 |
| 10 | ಮಾಹಿತಿ ವಿಜ್ಞಾನ ಸ್ನಾತಕೋತ್ತರ ಡಿಪ್ಲೊಮಾ(ಪಿ.ಜಿ.ಡಿ.ಐ.ಎಸ್.) | 1 ವರ್ಷ | ವಾರ್ಷಿಕ | 36 |
| 11 | ಕಂಪ್ಯೂಟರ್ ಅಪ್ಲಿಕೇಷನ್ ಸ್ನಾತಕೋತ್ತರ ಡಿಪ್ಲೊಮಾ(ಪಿ.ಜಿ.ಡಿ.ಸಿ.ಎ) | 1 ವರ್ಷ | ವಾರ್ಷಿಕ | 36 |
| 12 | ಅಂಬೇಡ್ಕರ್ ಅಧ್ಯಯನದಲ್ಲಿ ಸ್ನಾತಕೋತ್ತರ ಡಿಪ್ಲೊಮಾ(ಪಿ.ಜಿ.ಡಿ.ಎ.ಎಸ್.) | 1 ವರ್ಷ | ವಾರ್ಷಿಕ | 36 |
| 13 | ಇಂಗ್ಲಿಷ್‌ನಲ್ಲಿ ಸಂವಹನ ಸ್ನಾತಕೋತ್ತರ ಡಿಪ್ಲೊಮಾ(ಪಿ.ಜಿ.ಡಿ.ಸಿಇ) | 1 ವರ್ಷ | ವಾರ್ಷಿಕ | 36 |
| ಆ. ಡಿಪ್ಲೊಮೊ ಕಾರ್ಯಕ್ರಮಗಳು | | | | |
| 15 | ಕನ್ನಡ ಡಿಪ್ಲೊಮಾ | 1 ವರ್ಷ | ವಾರ್ಷಿಕ | 30 |
| 16 | ಪತ್ರಿಕೊದ್ಯಮದಲ್ಲಿ ಡಿಪ್ಲೊಮಾ | 1 ವರ್ಷ | ವಾರ್ಷಿಕ | 30 |
| 17 | ಡಿಪ್ಲೊಮಾ ಇನ್ ನ್ಯೂಟ್ರಿಷನಲ್ ಮತ್ತು ಹೆಲ್ತ್ ಎಜುಕೇಷನ್ | 1 ವರ್ಷ | ವಾರ್ಷಿಕ | 30 |
| 18 | ಡಿಪ್ಲೊಮಾ ಇನ್ ಇನ್‌ಫಾರ್ಮೇಶನ್ ಸೈನ್ಸ್ | 1 ವರ್ಷ | ವಾರ್ಷಿಕ | 30 |
| 19 | ಡಿಪ್ಲೊಮಾ ಇನ್ ಕಂಪ್ಯೂಟರ್ ಅಪ್ಲಿಕೇಷನ್ | 1 ವರ್ಷ | ವಾರ್ಷಿಕ | 30 |
| ಇ. ಸರ್ಟಿಫಿಕೇಟ್ ಕಾರ್ಯಕ್ರಮಗಳು | | | | |
| 1 | ಸರ್ಟಿಫಿಕೇಟ್ – ಕನ್ನಡ | 6 ತಿಂಗಳು | ಅರ್ಧ ವಾರ್ಷಿಕ | 8 |

| | | | | |
|---|---|---|---|---|
| 2 | ಸರ್ಟಿಫಿಕೇಟ್ –ಪಂಚಾಯತ್ ರಾಜ್ (ಸಿಪಿಆರ್) | 6 ತಿಂಗಳು | ಅರ್ಧ ವಾರ್ಷಿಕ | 8 |
| 3 | ಸರ್ಟಿಫಿಕೇಟ್ –ನ್ಯೂಟ್ರಿಷನ್ ಮತ್ತು ಫುಡ್ | 6 ತಿಂಗಳು | ಅರ್ಧ ವಾರ್ಷಿಕ | 12 |

## 16. ಗುಣಾತ್ಮಕ ಉಪಕ್ರಮಗಳು

ವಿದ್ಯಾರ್ಥಿಗಳಿಗೆ ಗುಣಮಟ್ಟದ ಸೇವೆಯನ್ನು ಒದಗಿಸುವಲ್ಲಿ ವಿಶ್ವವಿದ್ಯಾನಿಲಯವು ಹಲವಾರು ಕ್ರಮಗಳನ್ನು ಕೈಗೊಂಡಿದೆ. ಆಂತರಿಕ ಗುಣಮಟ್ಟ ಭರವಸೆ ಕೇಂದ್ರವನ್ನು ಯು.ಜಿ.ಸಿ. ಆದೇಶದ ಅನುಸಾರ ರಚನೆ ಮಾಡಲಾಗಿದೆ.

**ಆಂತರಿಕ ಗುಣಮಟ್ಟ ಭರವಸೆ ಕೇಂದ್ರ (ಸಿ.ಐ.ಕ್ಯೂ.ಎ.)**

ಆಂತರಿಕ ಗುಣಮಟ್ಟ ಭರವಸೆ ಕೇಂದ್ರವು ಪ್ರತಿಯೊಂದು ಹಂತದಲ್ಲೂ ಗುಣಮಟ್ಟ ಸೇವೆಯನ್ನು ಒದಗಿಸಲು ಅಗತ್ಯ ಹಾಗೂ ಹಲವಾರು ಕ್ರಮಗಳನ್ನು ನೀಡುವ ಸಲುವಾಗಿ ಸಹಕರಿಸುವ ವರ್ಗಗಳೊಂದಿಗೆ (ಸ್ಟೇಕ್ ಹೋಲ್ಡರ್ಸ್) ಅನ್ಯೋನ್ಯ ಸಂಬಂಧವನ್ನು/ ಪರಸ್ಪರ ಕಾರ್ಯಚಟುವಟಿಕೆಯನ್ನು ಮಾಡುತ್ತಿದೆ. ಅಂದರೆ ಆಂತರಿಕ ಗುಣಮಟ್ಟ ಭರವಸೆ ಕೇಂದ್ರವು ವಿದ್ಯಾರ್ಥಿ ಪ್ರವೇಶ ಪಡೆದ ದಿನದಿಂದ ಪ್ರಾರಂಭಿಸಿ ತನ್ನ ಶೈಕ್ಷಣಿಕ ಗುರಿಗಳನ್ನು ಪೂರೈಸಿಕೊಳ್ಳುವ ಅವಧಿಯವರೆವಿಗೂ ಸಹಕಾರ ಒದಗಿಸುತ್ತದೆ.

## 17. ಮಾಹಿತಿ ಮತ್ತು ಮಾರ್ಗದರ್ಶನ ಘಟಕ

ಮಾಹಿತಿ ಮತ್ತು ಮಾರ್ಗದರ್ಶನ ಘಟಕವು ವಿದ್ಯಾರ್ಥಿಗಳಿಗೆ ಅಗತ್ಯವಾದ ಎಲ್ಲಾ ಮಾಹಿತಿಗಳನ್ನು ಒದಗಿಸುತ್ತದೆ. ಅಂದರೆ ವಿಶ್ವವಿದ್ಯಾನಿಲಯವು ಒದಗಿಸುತ್ತಿರುವ ಶಿಕ್ಷಣಕ್ರಮಗಳು, ಪ್ರವೇಶಾತಿ, ಅಧ್ಯಯನ ಸಾಮಗ್ರಿಗಳು, ಸಂಪರ್ಕ ಕಾರ್ಯಕ್ರಮ, ಸಮಾಲೋಚನಾ ಕಾರ್ಯಕ್ರಮ, ಪರೀಕ್ಷೆಗಳು, ಪರೀಕ್ಷಾ ಫಲಿತಾಂಶ, ಅಂಕಪಟ್ಟಿಗಳು, ಅರ್ಹತಾ ಪತ್ರಗಳು, ವಿದ್ಯಾರ್ಥಿನಿಲಯದ ಸೌಲಭ್ಯ ಮುಂತಾದವುಗಳ ಬಗ್ಗೆ ಮಾಹಿತಿ ನೀಡುತ್ತದೆ.

ಮಾಹಿತಿ ಮತ್ತು ಮಾಗದರ್ಶನ ಘಟಕದಲ್ಲಿ ಸಾರ್ವಜನಿಕ ಸಂಪರ್ಕಾಧಿಕಾರಿಗಳು ಕಾರ್ಯನಿರ್ವಹಿಸುತ್ತಾರೆ. ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ, ವೈಯಕ್ತಿಕವಾಗಿ ಈ ಘಟಕಕ್ಕೆ ಭೇಟಿ ನೀಡಿ ಅಗತ್ಯ ಮಾಹಿತಿ ಪಡೆಯಬಹುದು. ಅಲ್ಲದೆ ದೂರವಾಣಿ ಮುಖಾಂತರವಾಗಿಯೂ ಘಟಕವನ್ನು ಸಂಪರ್ಕಿಸಬಹುದು. ಈ ಘಟಕದ ದೂರವಾಣಿ ಸಂಖ್ಯೆಗಳು 98453–63573 ಮತ್ತು 94494–89749, ಈ ಘಟಕದ ಕಛೇರಿಯು ಪ್ರವೇಶಾತಿ ವಿಭಾಗದ ಮುಖ್ಯದ್ವಾರದಲ್ಲಿದೆ.

**ಮಾರ್ಗದರ್ಶನ ಮತ್ತು ಸಮಾಲೋಚನೆ**

ವಿದ್ಯಾರ್ಥಿ ಜೀವನವು ಸಂಕೀರ್ಣ ಹಾಗೂ ಸೂಕ್ಷ್ಮತೆಯುಳ್ಳದ್ದಾಗಿದೆ. ವಿದ್ಯಾರ್ಥಿಗಳು 21 ನೆಯ ಶತಮಾನದಲ್ಲಿ ಹೊಸ ಸವಾಲುಗಳನ್ನು ಎದುರಿಸುತ್ತಿದ್ದಾರೆ ಹಾಗೂ ಸಂದಿಗ್ಧ ಪರಿಸ್ಥಿತಿಯಲ್ಲಿದ್ದಾರೆ. ಇದರಿಂದಾಗಿ ವಿದ್ಯಾರ್ಥಿಗಳಿಗೆ ವಿವಿಧ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಮಾರ್ಗದರ್ಶನ ಮತ್ತು ಸಮಾಲೋಚನೆಯ ಅಗತ್ಯತೆ ಇದೆ. ಶೈಕ್ಷಣಿಕ, ಕೌಶಲ್ಯ ಅಭಿವೃದ್ಧಿ, ವೃತ್ತಿ ತಿಳುವಳಿಕೆ, ಜೀವನ ಕೌಶಲಗಳು, ಸ್ಥಾನ ನಿಯುಕ್ತಿಕರಣ (ಉದ್ಯೋಗ ಪಡೆಯುವಿಕೆ), ಉನ್ನತ ಶಿಕ್ಷಣದ ಅವಕಾಶ ಹಾಗೂ ಇನ್ನಿತರ ಅಂಶಗಳಿಗೆ ಮಾರ್ಗದರ್ಶನ ಅಗತ್ಯವಾಗುತ್ತದೆ. ವಿಶ್ವವಿದ್ಯಾನಿಲಯವು ಸುಸಜ್ಜಿತವಾದ ಮಾರ್ಗದರ್ಶನ ಮತ್ತು ಸಮಾಲೋಚನಾ ಕೇಂದ್ರವನ್ನು ವಿದ್ಯಾರ್ಥಿಗಳಿಗೆ ಸಹಾಯ ಮಾಡಲು ಸ್ಥಾಪಿಸಿದೆ ಮತ್ತು ಅನ್ಯೋನ್ಯ ಕ್ರಿಯಾ ವೇದಿಕೆಯನ್ನು ಆರಂಭಿಸುತ್ತಿದೆ.ವೇದಿಕೆ, ವರ್ಚ್ಯುಯಲ್ ತರಗತಿ ಕೊಠಡಿ, ತಜ್ಞರಿಂದ

ಉಪನ್ಯಾಸಗಳನ್ನು ನೀಡುವುದು, ಡಿಜಿಟಲ್ ಗ್ರಂಥಾಲಯ ಸೇವೆಗಳು ಮತ್ತು ಇನ್ನಿತರ ಬೆಂಬಲ ಸೇವೆಗಳನ್ನು ಮುಂದಿನ ದಿನಗಳಲ್ಲಿ ಸೃಜಿಸಲಾಗುವುದು.

## 18. ಕುಂದುಕೊರತೆ ನಿವಾರಣಾ ಘಟಕ

ವಿದ್ಯಾರ್ಥಿಗಳಿಗೆ ಉತ್ತಮ ಮತ್ತು ಸಮಯಕ್ಕೆ ಅಗತ್ಯವಾದ ಸೇವೆಗಳನ್ನು ಒದಗಿಸುವುದು ಅತ್ಯಗತ್ಯವಾಗಿದೆ. ಕ.ರಾ.ಮು.ವಿ. ಇದಕ್ಕಾಗಿ ಕುಂದುಕೊರತೆ ನಿವಾರಣಾ ಘಟಕವನ್ನು ಆರಂಭಿಸಿ ಸಂಯೋಜನಾಧಿಕಾರಿಗಳನ್ನು ನೇಮಿಸಿದೆ. ಈ ಘಟಕವು ವಿದ್ಯಾರ್ಥಿಗಳ ಶೈಕ್ಷಣಿಕ ಸಮಸ್ಯೆಗಳನ್ನು ಪರಿಹರಿಸಲು ಕಾರ್ಯನಿರ್ವಹಿಸುತ್ತದೆ. ಅಂದರೆ, ವಿದ್ಯಾರ್ಥಿಗಳ ಶೈಕ್ಷಣಿಕ ಸಮಸ್ಯೆಗಳು, ವಿದ್ಯಾರ್ಥಿಗಳ ಬೆಂಬಲ ಸೇವೆಗಳು ಮತ್ತು ಪರೀಕ್ಷೆಗೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸುತ್ತದೆ. ವಿದ್ಯಾರ್ಥಿಗಳು ಈ ಘಟಕಕ್ಕೆ ಲಿಖಿತವಾಗಿ ಅಥವಾ ದೂರವಾಣಿಯ ಮೂಲಕ ಕುಂದುಕೊರತೆ ಕುರಿತ ಅಹವಾಲು ಸಲ್ಲಿಬಹುದು. ಈ ಘಟಕದಲ್ಲಿ ಕಾರ್ಯನಿರ್ವಹಿಸುವ ಸಂಯೋಜನಾಧಿಕಾರಿಗಳು ಮತ್ತು ದೂರವಾಣಿ ಸಂಖ್ಯೆ– ಮುಂದಿನಂತಿದೆ –

**ಶ್ರೀ ಡಿ.ಎಂ.ಮಹೇಶ್,** ಮೊ: 9901249102 ಮತ್ತು **ಡಾ. ಎ.ವೈ. ವಿಜಯಕುಮಾರ್** ಮೊ: 9845363573

ಈ ಘಟಕದ ಸಂಯೋಜನಾಧಿಕಾರಿಗಳು ವಿದ್ಯಾರ್ಥಿಗಳ ಕುಂದು–ಕೊರತೆಗಳನ್ನು ಪರೀಕ್ಷಿಸಿ, ಅವಲೋಕಿಸಿ ವಿಶ್ವವಿದ್ಯಾನಿಲಯದ ನಿಯಮಾನುಸಾರ ಸಮಸ್ಯೆಗಳನ್ನು ಕಾಲಮಿತಿಯೊಳಗೆ ಪರಿಹರಿಸುವರು.

ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯದ ಕರಾಮುವಿ ಜಾಲತಾಣಕ್ಕೆ ಹೋಗಿ ತಮ್ಮ ಸಮಸ್ಯೆಗಳನ್ನು ದಾಖಲಿಸಬಹುದು.**website. http://ksoumysuru.ac.in/kannada/pages/Student_Grievance_Reprisal_Cell.aspx**

ಆನ್‌ಲೈನ್‌ನಲ್ಲಿಯೂ ಕೂಡ ವಿದ್ಯಾರ್ಥಿಗಳು ಯು.ಜಿ.ಸಿ ಎಸ್.ಜಿ ಪೋರ್ಟಲ್‌ಗೆ ತಮ್ಮ ಕುಂದು–ಕೊರತೆಗಳನ್ನು ಸಲ್ಲಿಸಿ ಪರಿಹರಿಸಿಕೊಳ್ಳಬಹುದು. ಈ ವ್ಯವಸ್ಥೆಯ ನೊಡೆಲ್ ಅಧಿಕಾರಿಯ ಹೆಸರು ಮತ್ತು ವಿಳಾಸ :

**ಡಾ. ಟಿ.ಎಸ್. ಹರ್ಷ**
ನೊಡೆಲ್ ಅಧಿಕಾರಿ, ವಿದ್ಯಾರ್ಥಿ ಕುಂದು–ಕೊರತೆ ನಿವಾರಣಾ ಘಟಕ
ಕ.ರಾ.ಮು.ವಿ. ಮೈಸೂರು
**ಮೊಬೈಲ್. 94491–78802**

## 19. ಇತರ ಮಾಹಿತಿಗಳು:

**ವಿಷಯ ಬದಲಾವಣೆ (ಬಿ.ಎ./ಬಿ.ಕಾಂ)**

ವಿದ್ಯಾರ್ಥಿಗಳು ಯಾವುದೇ ಒಂದು ಭಾಷಾ ಮತ್ತು ಐಚ್ಛಿಕ ವಿಷಯಗಳನ್ನು ಬದಲಾವಣೆ ಮಾಡಿಕೊಳ್ಳಬೇಕಾದಲ್ಲಿ ಪ್ರವೇಶಾತಿ ಪಡೆದ ದಿನಾಂಕದಿಂದ ಒಂದು ತಿಂಗಳ ಅವಧಿಯೊಳಗೆ, ನಿಯಮಾನುಸಾರ ಒಂದು ವಿಷಯಕ್ಕೆ (ಅಂದರೆ ಒಂದು ಭಾಷಾ ಅಥವಾ ಒಂದು ಐಚ್ಛಿಕ ವಿಷಯಕ್ಕೆ) ರೂ.1,000/– ಗಳನ್ನು ಪಾವತಿಸಿ ಬದಲಾವಣೆ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.

**ಬೋಧನಾ ಮಾಧ್ಯಮದ ಬದಲಾವಣೆ**

ಪ್ರವೇಶಾತಿ ಸಮಯದಲ್ಲಿ ವಿದ್ಯಾರ್ಥಿ ಆಯ್ಕೆ ಮಾಡಿಕೊಂಡ ಬೋಧನ ಮಾಧ್ಯಮವನ್ನು ಬದಲಾಯಿಸಿಕೊಳ್ಳುವುದಕ್ಕೆ ಅವಕಾಶವಿದೆ. ಪ್ರವೇಶಾತಿ ಹೊಂದಿದ ಒಂದು ತಿಂಗಳ ಒಳಗಾಗಿ ಅರ್ಜಿಯೊಂದಿಗೆ ರೂ.1,000/– ಗಳನ್ನು ಎಸ್.ಬಿ.ಐ. ನಲ್ಲಿ ಪಾವತಿಸಿ **ಸಹಾಯಕ ಕುಲಸಚಿವರು (ಪ್ರವೇಶಾತಿ)** ಇವರಿಗೆ ಅರ್ಜಿಯನ್ನು ವಿದ್ಯಾರ್ಥಿಯು ಸಲ್ಲಿಸಬೇಕು.

ಆಯ್ಕೆಯ ಬೋಧನಾ ಮಾಧ್ಯಮದ ಅಧ್ಯಯನ ಸಾಮಗ್ರಿಗಳನ್ನು ಪಡೆಯಲು ಅವಕಾಶವಿದೆ. ಅಲ್ಲದೆ ಪ್ರವೇಶಾತಿ ಸಂದರ್ಭದಲ್ಲಿ ಅಧ್ಯಯನ ಸಾಮಗ್ರಿಗಳನ್ನು ಪಡೆದುಕೊಂಡಾಗ ಅವು ಯಾವ

ಸ್ವರೂಪದಲ್ಲಿದ್ದವೋ ಅದೇ ಸ್ವರೂಪದಲ್ಲಿ ಹಿಂದಿರುಗಿಸಲು ಅವಕಾಶವಿದೆ. ಹಿಂದಿರುಗಿಸಲುದ್ದೇಶಿಸಿದ ಅಧ್ಯಯನ ಸಾಮಗ್ರಿಗಳು ಬೇರೆ ವಿದ್ಯಾರ್ಥಿಗಳಿಗೆ ನೀಡಲು ಸೂಕ್ತವಲ್ಲವೆಂದು ಕಂಡುಬಂದಾಗ ಅವುಗಳನ್ನು ಅಧ್ಯಯನ ಸಾಮಗ್ರಿಗಳ ವಿಭಾಗ ಸ್ವೀಕರಿಸುವುದಿಲ್ಲ.

**ವಿಳಾಸ ಬದಲಾವಣೆ**

ಪ್ರವೇಶಾತಿ ಸಮಯದಲ್ಲಿ ವಿದ್ಯಾರ್ಥಿಯು ನೀಡಿದ್ದ ವಿಳಾಸವನ್ನು ಬದಲಾವಣೆ ಮಾಡಿಕೊಳ್ಳಬೇಕಾದ ಸಂದರ್ಭದಲ್ಲಿ ವಿದ್ಯಾರ್ಥಿಯೇ **ಸಹಾಯಕ ಕುಲಸಚಿವರು (ಪ್ರವೇಶಾತಿ), ಕರಾಮುವಿ, ಮೈಸೂರು** ಇವರಿಗೆ ಪತ್ರ ಬರೆದು ಪ್ರವೇಶಾತಿ ವಿಭಾಗಕ್ಕೆ ತಿಳಿಸಬೇಕು. ಅಲ್ಲದೇ, ಬದಲಾವಣೆ ಆಗಬೇಕಾದ ವಿಳಾಸವು ಬದಲಾವಣೆಯಾಗಿ ಪ್ರವೇಶಾತಿ ದಾಖಲೆಯಲ್ಲಿ ಸೇರಿಸಲಾಗಿದೆಯೇ? ಇಲ್ಲವೇ? ಎಂಬುದನ್ನು ಸಂಬಂಧಪಟ್ಟ ಅಧಿಕಾರಿಗಳಿಂದ ಖಚಿತಪಡಿಸಿಕೊಳ್ಳಬೇಕು. ಇದು ಬಹಳ ಮುಖ್ಯ, ಏಕೆಂದರೆ, ನೀಡಿರುವ ವಿಳಾಸ ಸರಿ ಇದ್ದಲ್ಲಿ ಮಾತ್ರ ಅಧ್ಯಯನ ಸಾಮಗ್ರಿಗಳು, ಮಾಹಿತಿ, ಅರ್ಜಿ ನಮೂನೆ ಇವುಗಳನ್ನು ಕಾಲ ಕಾಲಕ್ಕೆ ವಿದ್ಯಾರ್ಥಿಗೆ ಕಳುಹಿಸಿ ತಲುಪಿಸಬಹುದು.

**ಹೆಸರು ಬದಲಾವಣೆ**

ವ್ಯಾಸಂಗದ ಅವಧಿಯಲ್ಲಿ ವಿದ್ಯಾರ್ಥಿಯು ಹೆಸರು ಬದಲಾವಣೆ ಮಾಡಿಕೊಳ್ಳುವ ಸಂಬಂಧ ಈ ಕೆಳಕಂಡ ದಾಖಲಾತಿಗಳನ್ನು ಉಪಕುಲಸಚಿವರು (ಸಾಮಾನ್ಯ), ಇವರಿಗೆ ಸಲ್ಲಿಸಬೇಕು.

- ಹೆಸರು ಬದಲಾವಣೆ ಅರ್ಜಿ.
- ಹೆಸರು ಬದಲಾವಣೆ ಸಂಬಂಧ ನ್ಯಾಯಾಲಯದಿಂದ ಪಡೆದಿರುವ ಜಡ್ಜ್‌ಮೆಂಟ್ (ಡಿಕ್ರಿ). ಛಾಯಾ ಪ್ರತಿ.
- ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ 2 ಭಾವಚಿತ್ರಗಳು.
- ಎಸ್.ಬಿ.ಐ. ನಲ್ಲಿ ಶುಲ್ಕ ಪಾವತಿಸಿದ ವಿವರಗಳು
- ಎಸ್.ಎಸ್.ಎಲ್.ಸಿ ಅಂಕಪಟ್ಟಿ / ಕ್ಯೂಮುಲೇಟಿವ್ ರೆಕಾರ್ಡ್‌ನ ದೃಢೀಕೃತ ಛಾಯಾ ಪ್ರತಿ
- ಪಿ.ಯು.ಸಿ. ಅಂಕಪಟ್ಟಿಯ ದೃಢೀಕೃತ ನಕಲು ಪ್ರತಿ.
- ವಿದ್ಯಾರ್ಥಿಯ ಗುರುತಿನ ಪತ್ರದ (ಐ.ಡಿ. ಕಾರ್ಡ್) ದೃಢೀಕೃತ ಛಾಯಾ ಪ್ರತಿ.
- ಪ್ರವೇಶಾತಿ ಶುಲ್ಕ ಪಾವತಿಸಿದ ವಿವರದ ದೃಢೀಕೃತ ಛಾಯಾ ಪ್ರತಿ.
- ವಾರ್ತಾ ಪತ್ರಿಕೆಯಲ್ಲಿ ನೀಡಿದ ಜಾಹಿರಾತು ಪ್ರತಿ.

**ವಿಶ್ವವಿದ್ಯಾನಿಲಯ ಅಧಿಸೂಚನೆ ಹೊರಡಿಸಿದ ದಿನಾಂಕದಿಂದ ಹೊಸ ಹೆಸರು ಜಾರಿಗೆ ಬರುತ್ತದೆ.**

**ನಕಲು ಗುರುತಿನ ಪತ್ರ ನವೀಕರಣ**

ಒಂದು ವೇಳೆ ಮೂಲ ಗುರುತಿನ ಕಾರ್ಡ್ ಕಳೆದು ಹೋದಲ್ಲಿ ಎಸ್.ಬಿ.ಐ. ನಲ್ಲಿ ರೂ.300/- ಗಳನ್ನು ಪಾವತಿಸಿ ನಕಲು ಗುರುತಿನ ಕಾರ್ಡ್ ಪಡೆಯಬಹುದು. ನಕಲು ಗುರುತಿನ ಕಾರ್ಡ್ ಪಡೆಯಲು ಈ ಕೆಳಕಂಡ ದಾಖಲೆಗಳನ್ನು ಒದಗಿಸಬೇಕಾಗುತ್ತದೆ :

ಅ. ಉಪಕುಲಸಚಿವರು (ಪ್ರವೇಶಾತಿ), ಕರಾಮುವಿ, ಮೈಸೂರು-6 ವಿಭಾಗ ಇವರಿಗೆ ವಿದ್ಯಾರ್ಥಿ ಪತ್ರ ಬರೆಯಬೇಕು.

ಆ. ಗುರುತಿನ ಪತ್ರದ ಛಾಯಾ ಪ್ರತಿ (ಇದ್ದಲ್ಲಿ), ದೃಢೀಕರಿಸಿದ ಅಂಕಪಟ್ಟಿಯ ಛಾಯಾ ಪ್ರತಿ ಮತ್ತು ಭಾವಚಿತ್ರ, ದೃಢೀಕರಿಸಿದ ಆಧಾರ್ ಕಾರ್ಡ್, ಭಾವಚಿತ್ರದ ಸಾಕ್ಷ್ಯಾಧಾರ ಮತ್ತು ಶುಲ್ಕ ಪಾವತಿಸಿದ ಚಲನ್ ಇವುಗಳನ್ನು ಅರ್ಜಿ ಜೊತೆ ಲಗತ್ತಿಸಬೇಕು.

ಇ. ಪ್ರಥಮ ಬಿ.ಎ. / ಬಿ.ಕಾಂ / ಬಿ.ಲಿಬ್.ಐ.ಎಸ್ಸಿ / ಎಂ.ಎ. / ಎಂ.ಕಾಂ ಶಿಕ್ಷಣಕ್ರಮಕ್ಕೆ ಪ್ರವೇಶಾತಿ ಹೊಂದಿದ ನಂತರ ವಿಶ್ವವಿದ್ಯಾನಿಲಯವು ಗುರುತಿನ ಪತ್ರವನ್ನು ವಿದ್ಯಾರ್ಥಿಗೆ ನೀಡುತ್ತದೆ. ವಿದ್ಯಾರ್ಥಿಯು ಅಂತಿಮ ಎಂ.ಎ./ಎಂ.ಕಾಂ., ತರಗತಿಗಳಿಗೆ ಪ್ರವೇಶಾತಿ ಹೊಂದಿದ ನಂತರ ಈ ಮೊದಲೇ ವಿಶ್ವವಿದ್ಯಾನಿಲಯದಿಂದ ಪಡೆದಿದ್ದ ಗುರುತಿನ ಪತ್ರ ಮತ್ತು ಆಯಾ ವರ್ಷದ ಪ್ರವೇಶಾತಿ ಶುಲ್ಕ ಹಾಗೂ ಪರೀಕ್ಷಾ ಶುಲ್ಕ ಪಾವತಿಸಿದ ಮೂಲ ಚಲನ್‌ಗಳನ್ನು ಕಡ್ಡಾಯವಾಗಿ ಸಂರಕ್ಷಿಸಿಟ್ಟುಕೊಂಡಿರತಕ್ಕದ್ದು.

ಈ. ಪರೀಕ್ಷೆ ತೆಗೆದುಕೊಂಡು ಪರೀಕ್ಷೆ ಬರೆಯುವ ಸಂದರ್ಭದಲ್ಲಿ ಗುರುತಿನ ಪತ್ರ ಹಾಗೂ ಪ್ರವೇಶಾತಿ ಮತ್ತು ಪರೀಕ್ಷಾ ಶುಲ್ಕ ಪಾವತಿ ಚಲನ್‌ಗಳನ್ನು ಕಡ್ಡಾಯವಾಗಿ ವಿದ್ಯಾರ್ಥಿಯು ಜೊತೆಯಲ್ಲೇ ಇಟ್ಟುಕೊಂಡು ಪರೀಕ್ಷಾ ಕೊಠಡಿ ಮೇಲ್ವಿಚಾರಕರಿಗೆ ತೋರಿಸಬೇಕು. ಪ್ರವೇಶಾತಿ ಮತ್ತು ಪರೀಕ್ಷಾ ಶುಲ್ಕಗಳ ಚಲನ್‌ಗಳನ್ನು ಹೊಂದಿಲ್ಲದೆ, ಪರೀಕ್ಷೆ ಬರೆಯಲು ವಂಚಿತರಾದಲ್ಲಿ ಅದಕ್ಕೆ ವಿಶ್ವವಿದ್ಯಾನಿಲಯವು ಜವಾಬ್ದಾರವಾಗುವುದಿಲ್ಲ.

**ಪತ್ರ ವ್ಯವಹಾರ**

ವಿದ್ಯಾರ್ಥಿಗಳು ತಮ್ಮ ವ್ಯಾಸಂಗದ ಅವಧಿಯಲ್ಲಿ ಅಗತ್ಯವಾದ ಮಾಹಿತಿ ಮತ್ತು ಸ್ಪಷ್ಟೀಕರಣಗಳನ್ನು ಪಡೆಯಲು **ದೂರವಾಣಿ ಕರೆ ಮಾಡುವುದು, ಇ–ಮೇಲ್ ಮಾಡುವುದು, ಪತ್ರ ಬರೆಯುವುದು** ಸಾಮಾನ್ಯ. ಅಂತಹ ಸಂದರ್ಭಗಳಲ್ಲಿ ವಿದ್ಯಾರ್ಥಿಗಳು ತಮ್ಮ ಹೆಸರು, ವಿಳಾಸ, ನೋಂದಣಿ ಸಂಖ್ಯೆ, ವಿಷಯ (ಶಿಕ್ಷಣಕ್ರಮ), ಬೋಧನಾ ಮಾಧ್ಯಮ, **ದೂರವಾಣಿ ಮತ್ತು ಮೊಬೈಲ್ ಸಂಖ್ಯೆ** ಇವುಗಳನ್ನು ತಪ್ಪದೆ ನಮೂದಿಸಿರಬೇಕು. ಇದರಿಂದ ಸಮಸ್ಯೆಯನ್ನು ಶೀಘ್ರವಾಗಿ ಪರಿಹರಿಸಲು ಸಾಧ್ಯವಾಗುತ್ತದೆ. ಪ್ರವೇಶಾತಿ, ನಿಗದಿತ ಶುಲ್ಕ ಪಾವತಿಸಿಲ್ಲದಿರುವ ಬಗ್ಗೆ, ಅಧ್ಯಯನ ಸಾಮಗ್ರಿ, ನಿಬಂಧಗಳು, ಪರೀಕ್ಷೆ, ಪರೀಕ್ಷಾ ಫಲಿತಾಂಶ ಇತ್ಯಾದಿ ವಿಷಯಗಳಿಗೆ ವಿಶ್ವವಿದ್ಯಾನಿಲಯವು ಕಳುಹಿಸಿದ ಪತ್ರಗಳಿಗೆ ವಿದ್ಯಾರ್ಥಿಯು ಕಡ್ಡಾಯವಾಗಿ ಉತ್ತರವನ್ನು ನೀಡತಕ್ಕದ್ದು. ಒಂದುವೇಳೆ ವಿದ್ಯಾರ್ಥಿಯು ಮೇಲೆ ತಿಳಿಸಿರುವ ವಿಷಯಗಳಿಗೆ ಉತ್ತರಗಳನ್ನು ನೀಡದಿದ್ದಲ್ಲಿ ಶೀಘ್ರವಾಗಿ ಸಮಸ್ಯೆಯನ್ನು ಬಗೆಹರಿಸಲು ಸಾಧ್ಯವಾಗುವುದಿಲ್ಲ ಹಾಗೂ ಈ ಸಂಬಂಧ ವಿಶ್ವವಿದ್ಯಾನಿಲಯವು ಜವಾಬ್ದಾರಿಯಾಗುವುದಿಲ್ಲ.

**ವರ್ಗಾವಣೆ ಪತ್ರ ನೀಡುವ ಬಗ್ಗೆ**

ವಿದ್ಯಾರ್ಥಿಗಳಿಗೆ ವರ್ಗಾವಣೆ ಪತ್ರವನ್ನು ನೇರವಾಗಿ ಕೊಡುವುದಿಲ್ಲ. ಇದನ್ನು ಹೆಚ್ಚಿನ ವ್ಯಾಸಂಗಕ್ಕಾಗಿ ಪ್ರವೇಶ ಪಡೆಯುವ ಸಂಸ್ಥೆಗೆ ನೇರವಾಗಿ ಕಳುಹಿಸಿ ಕೊಡಲಾಗುವುದು. ಹೆಚ್ಚಿನ ವ್ಯಾಸಂಗಕ್ಕೆ ಮಾತ್ರ ವರ್ಗಾವಣೆ ಪತ್ರ ನೀಡಲಾಗುವುದು. ವರ್ಗಾವಣೆ ಪತ್ರ ಪಡೆಯಲು ವಿಶ್ವವಿದ್ಯಾನಿಲಯದಿಂದ ಬೇ–ಬಾಕಿ ಪತ್ರ ಪಡೆದು, ಈ ಕೆಳಕಂಡ ದಾಖಲೆಗಳೊಂದಿಗೆ ನಿಗದಿತ ಶುಲ್ಕ ಪಾವತಿಸಿ **ಉಪಕುಲಸಚಿವರು (ಪ್ರವೇಶಾತಿ), ಕರಾಮುವಿ, ಮುಕ್ತಗಂಗೋತ್ರಿ, ಮೈಸೂರು–06** ರವರಿಗೆ ಅರ್ಜಿ ಸಲ್ಲಿಸಿ ವರ್ಗಾವಣೆ ಪತ್ರ ಪಡೆಯಬಹುದು.

1. ವಿದ್ಯಾರ್ಥಿಯು ಕಡ್ಡಾಯವಾಗಿ ಭರ್ತಿ ಮಾಡಿದ ಅರ್ಜಿಯ ಜೊತೆ ನಿಗದಿಪಡಿಸಿರುವ ಶುಲ್ಕ ರೂ.500/– ಗಳನ್ನು ಪಾವತಿಸಿ ಅರ್ಜಿಯ ಜೊತೆ ಎಸ್.ಎಸ್.ಎಲ್.ಸಿ. ಮತ್ತು ಪ್ರಥಮ, ದ್ವಿತೀಯ ಮತ್ತು ತೃತೀಯ ಬಿ.ಎ/ಬಿ.ಕಾಂ/ಬಿ.ಲಿಬ್.ಎಸ್ಸಿ/ಎಂ.ಎ/ಎಂ.ಕಾಂ ಪದವಿಗಳ ದೃಢೀಕೃತ ಅಂಕಪಟ್ಟಿಗಳು ಮತ್ತು ಗುರುತಿನ ಪತ್ರವನ್ನು ತಪ್ಪದೇ ಅರ್ಜಿ ಜೊತೆ ಲಗತ್ತಿಸಬೇಕು.
2. ವಿದ್ಯಾರ್ಥಿಯು ವಿಶ್ವವಿದ್ಯಾನಿಲಯದಿಂದ ತೇರ್ಗಡೆ ಹೊಂದಿರುವ ಅಂಕಪಟ್ಟಿಗಳಲ್ಲಿ ದರ್ಜೆ ಘೋಷಣೆ ಮತ್ತು ಹೆಸರು, ನೋಂದಣಿ ಸಂಖ್ಯೆ, ವಿಷಯ ಇತ್ಯಾದಿಗಳಲ್ಲಿ ವ್ಯತ್ಯಾಸ ಇದ್ದಲ್ಲಿ, ಸ್ಪಷ್ಟೀಕರಣ ಪಡೆಯದೆ ವರ್ಗಾವಣೆ ಪತ್ರವನ್ನು ನೀಡಲಾಗುವುದಿಲ್ಲ.

## 20. ಉನ್ನತ ಶಿಕ್ಷಣಕ್ಕೆ ಸಂಬಂಧಿಸಿದ ಡಿಜಿಟಲ್ ಉಪಕ್ರಮಗಳು– ಯು.ಜಿ.ಸಿ :

(ಅ) **SWAYAM (ಸ್ವಯಂ)**

ವಿಶ್ವವಿದ್ಯಾನಿಲಯವು ಕೆಲವು ಶಿಕ್ಷಣ ಕ್ರಮಗಳನ್ನು ಯು.ಜಿ.ಸಿ / ಎಂ.ಎಚ್.ಆರ್.ಡಿ. ನಿರ್ದೇಶಕಗಳ ಮೇರೆಗೆ ಆನ್‌ಲೈನ್ ಮುಖಾಂತರ ಪ್ರಾರಂಭಿಸುತ್ತಿದೆ. ಸ್ವಯಂಪ್ರಭ ವಾಹಿನಿಯನ್ನು ಹೊಂದುವ ಸಲುವಾಗಿ ದೂರದರ್ಶನ ಹಾಗೂ ಉಚಿತ ಡಿಷ್ ಪಡೆದು ಅಳವಡಿಸುತ್ತದೆ. ಈ ವಾಹಿನಿಗಳನ್ನು ಬೋಧನಾಕಾರ್ಯದಲ್ಲಿ ತೊಡಗಿರುವ ಅಧ್ಯಾಪಕರ ಸಮ್ಮಿಳಿತ ಕಲಿಕಾ ಪ್ರಕ್ರಿಯೆಗೆ ಹಾಗೂ ಗುಣಾತ್ಮಕ ಕಲಿಕೆಯ ಉತ್ತಮಿಕೆಗೆ ಬಳಸಲಾಗುವುದು.

(ಆ) **ಡಿಜಿಟಲ್ ಮಾನಿಟರಿಂಗ್ ಘಟಕ**

ವಿಶ್ವವಿದ್ಯಾನಿಲಯವು ಡಿಜಿಟಲ್ ಮಾನಿಟರಿಂಗ್ ಘಟಕವನ್ನು ಸ್ಥಾಪಿಸಿದ. ಇದು ಪ್ರಚಲಿತ ಬಳಕೆಯಾಗುತ್ತಿರುವ ಡಿಜಿಟಲ್ ಸಂಪನ್ಮೂಲಗಳನ್ನು ವಿಮರ್ಶಿಸಿ ಮುಂದಿನ ದಿನಗಳಲ್ಲಿ ಡಿಜಿಟಲ್ ಸಂಪನ್ಮೂಲ ಬಳಕೆಗಳನ್ನು ಹೆಚ್ಚಿನ ಮಟ್ಟದಲ್ಲಿ ಬಳಸಿಕೊಳ್ಳುವ ಕುರಿತು ನಿಯಮಿತವಾಗಿ ಸಲಹೆ ನೀಡುತ್ತದೆ.

(ಇ) **ರಾಷ್ಟ್ರೀಯ ಶೈಕ್ಷಣಿಕ ಠೇವಣಿ ಕೋಶ**

ರಾಷ್ಟ್ರೀಯ ಶೈಕ್ಷಣಿಕ ಠೇವಣಿಯು (NAD) ಶೈಕ್ಷಣಿಕ ಪದವಿಗಳ ಆನ್‌ಲೈನ್ ದಾಸ್ತಾನು ಗೃಹವಾಗಿದ್ದು, (ಪದವಿ, ಡಿಪ್ಲೊಮೊಗಳು ಅಂಕಪಟ್ಟಿಗಳು ಇತ್ಯಾದಿ) ಇದರಲ್ಲಿ ಶಿಕ್ಷಣ ಮಂಡಳಿಗಳು/ ಶೈಕ್ಷಣಿಕ ಸಂಸ್ಥೆಗಳು / ಅರ್ಹತೆ ನಿರ್ಣಾಯಕ ಸಂಸ್ಥೆಗಳು ಡಿಜಿಟಲ್ ರೂಪದಲ್ಲಿ ಅರ್ಹತಾ ಪತ್ರಗಳನ್ನು ದಾಸ್ತಾನು ಮಾಡುತ್ತವೆ. ಈ ಕೋಶವನ್ನು ಜುಲೈ 9ನೇ 2017 ರಂದು ಗೌರವಾನ್ವಿತ ರಾಷ್ಟ್ರಪತಿಗಳು ಸಮರ್ಪಣೆಗೊಳಿಸಿರುತ್ತಾರೆ. ಇದೊಂದು 24x7 ಮಾದರಿಯ ಆನ್‌ಲೈನ್ ವ್ಯವಸ್ಥೆಯಾಗಿದ್ದು ಎಲ್ಲಾ ರೀತಿಯ ಶೈಕ್ಷಣಿಕ ದಾಖಲೆಗಳು ಲಭ್ಯವಾಗುತ್ತವೆ. ಅರ್ಹತಾ ಪತ್ರ, ಪದವಿ ಪತ್ರಗಳ ನೈಜತೆ, ಸಿಂಧುತ್ವ ಅಧಿಕೃತತೆಗೆ ಸಹಾಯಕವಾಗಿದೆ ಹಾಗೂ ಇದು ಸುರಕ್ಷಿತ ದಾಸ್ತಾನಿಗೆ ಸುಲಭವಾಗಿದ್ದು, ಸುಲಭ ಮರುಪಡೆಯುವಿಕೆಗೆ ಸಹಾಯಕವಾಗಿದೆ. ವಿಶ್ವವಿದ್ಯಾನಿಲಯವು NAD ಕೋಶವನ್ನು ಸ್ಥಾಪಿಸಿದ್ದು, ಈ ಸಂಬಂಧ ಚಟುವಟಿಕೆಗಳನ್ನು ಕೈಗೊಳ್ಳಲಾಗುತ್ತಿದೆ. ವಿದ್ಯಾರ್ಥಿಗಳು NADಗೆ ನೋಂದಣಿ ಮಾಡಿಸಿಕೊಳ್ಳುವುದು.

(ಈ) **ರಾಷ್ಟ್ರೀಯ ಡಿಜಿಟಲ್ (ವಿದ್ಯುನ್ಮಾನ) ಗ್ರಂಥಾಲಯ**

ನ್ಯಾಷನಲ್ ಡಿಜಿಟಲ್ ಲೈಬ್ರರಿ ಆಫ್ ಇಂಡಿಯಾ (NDC) ಯು ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ, ಭಾರತ ಸರ್ಕಾರ ಇದರ ಪ್ರಾಯೋಜನೆಯಾಗಿದೆ. ಈ ಪ್ರಾಯೋಜನೆಯ ಮುಖ್ಯ ಉದ್ದೇಶ ಹಲವಾರು ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಡಿಜಿಟಲ್ ಗ್ರಂಥಾಲಯಗಳನ್ನು ಏಕ ವೆಬ್‌ಪೋರ್ಟ್‌ಲ್ ನಲ್ಲಿ ಸಂಯೋಜಿತಗೊಳಿಸುವುದಾಗಿದೆ. ನ್ಯಾಷನಲ್ ಡಿಜಿಟಲ್ ಲೈಬ್ರರಿಯು ಇಂಗ್ಲಿಷ್ ಮತ್ತು ಭಾರತೀಯ ಭಾಷೆಗಳ ಹಲವಾರು ಮಸ್ತಕಗಳನ್ನು ಉಚಿತವಾಗಿ ಪಡೆಯುವ ಸೌಲಭ್ಯ ಒದಗಿಸುತ್ತದೆ. ಹೀಗಾಗಿ ವಿದ್ಯಾರ್ಥಿಗಳು ನ್ಯಾಷನಲ್ ಡಿಜಿಟಲ್ ಲೈಬ್ರರಿಯೊಂದಿಗೆ ಸಂಪರ್ಕ ಹೊಂದುವಂತೆ ತಿಳಿಸಲಾಗಿದೆ. http://ndl.iitkgp.ac.inನಲ್ಲಿ 80 ಲಕ್ಷಕ್ಕೂ ಹೆಚ್ಚು ಡಿಜಿಟಲ್ ಸಂಪನ್ಮೂಲಗಳನ್ನು ಯಾವುದೇ ವೆಚ್ಚವಿಲ್ಲದೆ ಪರಾಮರ್ಶಿಸಬಹುದಾಗಿದೆ.

(ಉ) **ಮ್ಯಾಸೀವ್ ಓಪನ್ ಆನ್‌ಲೈನ್ ಕೋರ್ಸ್‌ಗಳು (MOOCS Courses)**

ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರ ಸಚಿವಾಲಯದ ವ್ಯಾಪ್ತಿಯಡಿ ವಿಶ್ವವಿದ್ಯಾನಿಲಯ ಧನಸಹಾಯ ಆಯೋಗವು ಮುಕ್ತ ವಿಶ್ವವಿದ್ಯಾನಿಲಯಗಳಿಗೆ ಕಡಿಮೆ ಅವಧಿಯ ಆನ್‌ಲೈನ್ ಕಾರ್ಯಕ್ರಮಗಳನ್ನು ನಡೆಸಲು ಅನುವು ಮಾಡಿಕೊಟ್ಟಿದೆ. ಅಭ್ಯರ್ಥಿಗಳು ಇಂತಹ ಕಾರ್ಯಕ್ರಮಗಳ ಪ್ರಯೋಜನ ಪಡೆಯಲು ಕರಾಮುವಿ/ಯುಜಿಸಿಯ ಜಾಲತಾಣಕ್ಕೆ ಬೇಟಿ ನೀಡಬಹುದು.

* * *

ಅನುಬಂಧ – 1

**ಯುಜಿಸಿ ಮಾನ್ಯತಾ ಪತ್ರ**

http://www.ugc.ac.in/ugc_notices.aspx

https://www.ugc.ac.in/pdfnews/9969719_UGC-RECONGINITION-FOR-ODL-PROGRAMMES-2018-19-ONWARDS.pdf

ನೋಡಿ : ಪಟ್ಟಿಯ 18ನೇ ಕ್ರಮ ಸಂಖ್ಯೆ

* * * * *

**Annexure II**

## List of Regional Centres (RC) and Learner Support Centres (LSC)

| Sl. No. | RC Code | Place of the Regional Centre | Address of the Head Quarters and Regional Centre | LSC Code | Name & Address of Learner Support Centre |
|---|---|---|---|---|---|
| 1 | 01 | Mysuru | **KSOU Head Quarters**<br>KSOU Campus,<br>Mukthagangotri,<br>**Mysuru-570 006**<br>Ph: 0821-2519948/ 2500981 | 01-01 | **KSOU Head Quarters**<br>KSOU, Mukthagangotri,<br>**Mysuru**-570006<br>Ph: 0821-2519948/2500981 |
| 2 | | | | 01-02 | **2. Central Prison**<br>Near St. Philomina Church,<br>Ashoka Main Road,<br>**Mysuru**-570001<br>Phone: 0821 249 2089<br>Sri.Krishnegowda 0821-2492092 |
| 3 | | | | 01-03 | **Sri Adichunchanagiri First Grade College**<br>H.D. Kote, **Mysore** |
| 4 | | | | 01-04 | **Pooja Bhagavat Memorial Mahajana P.G. Centre**<br>K.R.S. Road, Metagalli,<br>**Mysore**-570016,<br><br>(Only Science Programmes)<br>Ph: 0821-4009616/2581226<br>M: 94483-82736 |
| 5 | | | | 01-05 | **Marimallappa's Educational Institutions.**<br>Sitavilasa Road, Mysuru-570024<br>M: 9844031214 |
| 6 | | | | 01-06 | **TTL Trust (R)**<br>Saraswathi Puram, Mysuru-570008<br>Ph:0821-2540783<br>M:9900557556 |

| Sl. No. | RC Code | Place of the Regional Centre | Address of the Head Quarters and Regional Centre | LSC Code | Name & Address of Learner Support Centre |
|---|---|---|---|---|---|
| 7 | | | | 01-07 | **Govt. First Grade College** Kushalanagara-571234, **Kodagu District** Sri. Lingamurthy.H.B M: 98459-5713 |
| 8 | | | | 01-08 | **Government First Grade College, Madikeri** 08272 223913, 903668649 |
